ವಿವೇಕಪ್ರಭ

ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ



₹ 14

ಜೂನ್ 2018

PACKAGE TOURS 2018

Hotel Room Accom. & South Indian Veg. Food

Charodham Yatra : 15/19 Days

June 06 Sep 19 Oct 04, 20

Haridwar, Yamunotri, Gangotri, Uttarkashi, Kedarnath, Triyugi (Optional), Mana, Vyasa Guha, Ganesh Guha, Keshava Prayag, Badrinath, Rishikesh, New Delhi

Amarnath Yatra : 15/19 Days

June 25

Attari Border [Indo-Pak Border], Amritsar, Vaishnavi Devi, Srinagar, Gulmarg, Baltal, Amarnath, Kheerbhavani, Kurukshetra, New Delhi

Rajasthan Special : 12/16 DAYS

Oct 27

Jaipur, Pushkar, Ajmer, Chittaurgarh, Udaipur, Eklingji, Mt. Abu, Jodhpur, Bikaner, Jaisalmer

Nepal : 07 DAYS

Sep 06, 22

Kathmandu, Manokamana, Pokhara, Jomsom, Mukthinath, Bakthapur

Kolkata Darjeeling : 16 Days

Nov 11

Bhubaneshwar, Puri, Konark, Chilka Lake, Kolkata, Siliguri, Gangtok, Chengu Lake, Harbhajan Singh Mandir, Darjeeling, Tiger Hills

Shaktipeetha Manali Special : 18 Days

Sep 22

Wagah Border [Indo-Pak Border], Amritsar, Vaishnavi Devi, Chamunda, Kangra, Chintapurni, Jwalamukhi, Baijnath, Kullu-Manali, Vasista, Rohtang Pass [Optional], Naina Devi, Kufri, Shimla, Chandigarh, Kurukshetra, New Delhi



Shri Hansaa Travels

Recognised by Department of Tourism, Govt. of Karnataka

: 640, 40th Cross, 8th Block, Jayanagar, Bangalore - 70
: hansaatravels@gmail.com : hansaatravels.com
080-26643276 / 26543891 / 9341215612 / 9341415612

ವಿವೇಕಪ್ರಭ

ಜೂನ್-2018 | ಸಂಪುಟ 19 ಸಂಚಿಕೆ 06

ವಿಶೇಷ ಲೇಖನ

ಧಾರಾವಾಹಿ
















ವ್ಯವಸ್ಥಾಪಕ ಸಂಪಾದಕರು: *ಸ್ವಾಮಿ ಆತ್ಮಜ್ಞಾನಂದ* ಸಂಪಾದಕರು: *ಸ್ವಾಮಿ ಜ್ಞಾನಯೋಗಾನಂದ*

ನೆರವು: *ಆರ್. ಎಸ್. ಪೂರ್ಣಾನಂದ, ಡಾ. ಕೆ. ಎಲ್. ಪ್ರಸನ್ನಾಕ್ಷೀ, ಡಾ. ಎಚ್. ಪಾಂಡುರಂಗ ವಿಠಲ*

ಅಕ್ಷರ ಜೋಡಣೆ: *ಶ್ರೀರಾಮಕೃಷ್ಣ ಆಶ್ರಮ, ಮೈಸೂರು* ಮುದ್ರಣ: *ಮಯೂರ್ ಗ್ರಾಫಿಕ್ಸ್, ಬೆಂಗಳೂರು*

ಮುಖಪುಟ

'ದೇವತಾತ್ಮಾ ಹಿಮಾಲಯ'

ಅನ್ನಪೂರ್ಣ ಶಿಖರ, ನೇಪಾಳ

ಚಂದಾ ವಿವರ

ಬಿಡಿ ಪ್ರತಿ : ₹ 14 ವಾರ್ಷಿಕ : ₹ 140 ಮೂರು ವರ್ಷ : ₹ 375
ಆಜೀವ (25 ವರ್ಷ) : ₹ 3,000 ಪೋಷಕರು : ₹ 5,000 ಅಥವಾ ಹೆಚ್ಚು.

ವಿದೇಶಗಳಿಗೆ : (ಏರ್‌ಮೇಲ್) ವಾರ್ಷಿಕ : $ 20; ಮೂರು ವರ್ಷ : $ 60
ಆಜೀವ (25ವರ್ಷ) : $ 300 ಪೋಷಕರು : $ 600 ಅಥವಾ ಹೆಚ್ಚು.

ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– ಸ್ವಾಮಿ ವಿವೇಕಾನಂದ

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

E-mail: mysuru.vivekaprabha@rkmm.org Website: www.vivekaprabha.net ಫೋನ್ : 9481533505

ಶ್ರೀ ರಾಮಮಾನಸ ಸ್ತೋತ್ರಮ್ – ೪



ರಾಜಾಧಿರಾಜಾಯ ರಮಾವರಾಯ ।
ರಾತ್ರಿಂಚರಾಣಾಮಭಿಸಂಹರಾಯ ॥
ರಾಜ್ಯಾಭಿಷಿಕ್ತಾಯ ರಘೂತ್ತಮಾಯ ।
ಶ್ಯಾಮಾಯ ರಾಮಾಯ ನಮೋ ನಮಸ್ತೇ ॥ ೧೨ ॥

ರಾಜಾಧಿರಾಜನಿಗೆ, ರಮಾಕಾಂತನಿಗೆ, ದೈತ್ಯಸಂಹಾರಕನಿಗೆ, ರಾಜ್ಯಾಭಿಷಿಕ್ತನಿಗೆ, ರಘುಕುಲಶ್ರೇಷ್ಠನಿಗೆ, ಶ್ಯಾಮವರ್ಣನಿಗೆ, ಶ್ರೀರಾಮಚಂದ್ರನಿಗೆ ಪುನಃ ಪುನಃ ನಮಸ್ಕಾರಗಳು. ॥ ೧೨ ॥

ಪ್ರಭೋ ಚಾಮರಾದರ್ಶ ಛತ್ರಾದಿಕಾನ್ವೈ ।
ಮಹಾರಾಜ ರಾಜೋಪಚಾರಾನ್ ಗೃಹಾಣ ॥
ಸುಹೃತ್ಪದ್ಮಪೀಠಂ ಮುರಾರೇ ಪ್ರವಿಶ್ಯ ।
ಮಮೇಶಾಪರಾಧಾನ್ ಹಿ ಸರ್ವಾನ್ ಕ್ಷಮಸ್ವ ॥ ೧೩ ॥

ಪ್ರಭೋ, ಮಹಾರಾಜ, ಚಾಮರ, ಛತ್ರ, ಕನ್ನಡಿ ಮುಂತಾದ ರಾಜೋಪಚಾರಗಳನ್ನು ಸ್ವೀಕರಿಸು. ಮುರಾರಿ, ನನ್ನ ಹೃದಯ ಕಮಲ ಪೀಠದ ಮೇಲೆ ಅಧಿಷ್ಠಿತನಾಗು. ನನ್ನ ಎಲ್ಲ ಅಪರಾಧಗಳನ್ನೂ ಕ್ಷಮಿಸು. ॥೧೩॥

ಇತ್ಯೇವ ಸಾಂಗಮುಪಚಾರ -ಯುಕ್ತಾಂ ।
ಶ್ರೀ ರಾಮಪೂಜಾಂ ಹೃದಯೇ ಬಹಿರ್ವಾ ॥
ಕುರ್ವಂತಿ ಯೇ ಧರ್ಮಮಥಾರ್ಥಕಾಮಾನ್ ।
ಮೋಕ್ಷಾದಿಕಾಂ ಸಂಪದಮಾಪ್ನುವಂತಿ ॥ ೧೪ ॥

ಹೀಗೆ ಶ್ರೀರಾಮಚಂದ್ರ ಪ್ರಭುವಿನ ಪೂಜೆಯನ್ನು ಯಾರು ಮಾನಸೋಪಚಾರಗಳಿಂದಾಗಲೀ, ಬಾಹ್ಯ ಉಪಚಾರಗಳಿಂದಾಗಲೀ ಮಾಡುವರೋ ಅವರಿಗೆ ಧರ್ಮ-ಅರ್ಥ-ಕಾಮ-ಮೋಕ್ಷವೇ ಮುಂತಾದ ಸಂಪತ್ತುಗಳು ದೊರೆಯುವುವು. ॥ ೧೪ ॥

ಶ್ರೀವರ್ಣಪೂರ್ವಂ ಸಕಲಾರ್ಥದಂ ವೈ ।
ರಾಮೇತಿವರ್ಣದ್ವಯಮೇವ ಪೂರ್ವಮ್ ॥
ಜಯೇತಿ ರಾಮೇತಿ ಜಯದ್ವಯೇತಿ ।
ರಾಮೇತಿ ಜಪ್ತ್ವಾ ತು ಪುನರ್ನ ಜನ್ಮ ॥ ೧೫ ॥

'ಶ್ರೀ' ಎಂಬ ಅಕ್ಷರಕ್ಕೆ ಮೊದಲು 'ರಾಮ' ಎಂಬ ಎರಡು ಅಕ್ಷರಗಳನ್ನು ಕೂಡಿಸಬೇಕು. ನಂತರ 'ಜಯ' ಶಬ್ದವನ್ನು ಕೂಡಿಸಿ 'ರಾಮ' ಶಬ್ದವನ್ನು ಯೋಜಿಸಿ ಅವುಗಳ ಮುಂದೆ 'ಜಯ ಜಯ ರಾಮ' ಎಂಬ ಶಬ್ದಗಳನ್ನು ಹೊಂದಿಸಬೇಕು. ಆಗ 'ಶ್ರೀ ರಾಮ ಜಯ ರಾಮ ಜಯ ಜಯ ರಾಮ' ಎಂಬ ತ್ರಯೋದಶಾಕ್ಷರೀ ಶ್ರೀರಾಮಮಂತ್ರವಾಗುತ್ತದೆ. ಈ ಮಂತ್ರವನ್ನು ಜಪಿಸುವವನಿಗೆ ಪುನರ್ಜನ್ಮವಿಲ್ಲದೆ ಮುಕ್ತಿಯು ಲಭಿಸುವುದು. ॥ ೧೫ ॥

— ಶ್ರೀ ಶಂಕರಾಚಾರ್ಯ

ಸೂಕ್ತಿಪ್ರಭ

ಇತರರ ಅಭಿಪ್ರಾಯಗಳನ್ನು ಆಧರಿಸಿ ನಮ್ಮ ಸಂತೋಷವನ್ನು ನಾವೇಕೆ ಕಂಡುಕೊಳ್ಳಬೇಕು? ಅದನ್ನು ನಮ್ಮ ಹೃದಯದಲ್ಲೇ ಕಂಡುಕೊಳ್ಳಬಹುದಲ್ಲವೆ?

— *ರೂಸ್ಸೋ*

ಹೊಸ ವಿಚಾರವೆಂದು ಆಶ್ಚರ್ಯಪಡಬೇಡ. ಏಕೆಂದರೆ, ಹಲವು ಮಂದಿ ಸ್ವೀಕರಿಸದೆ ಇರುವ ಮಾತ್ರಕ್ಕೆ ಒಂದು ಸಂಗತಿ ಸತ್ಯವಾಗಿ ಉಳಿಯದು ಎನ್ನಲಾರೆವು. ಇದು ನಿನಗೆ ತಿಳಿದೇ ಇದೆ.

— *ಸ್ಪಿನೋಜಾ*

ಹಲವರು ಸ್ವಾತಂತ್ರ್ಯವನ್ನು ಕುರಿತು ಮಾತನಾಡಬಲ್ಲರು, ಬರೆಯಬಲ್ಲರು, ಅದಕ್ಕಾಗಿ ಹೋರಾಡಬಲ್ಲರು. ಇನ್ನು ಕೆಲವರು ಹೊರನೋಟಕ್ಕೆ ಆ ಕುರಿತು ನಟಿಸಬಹುದು. ಆದರೆ ಯಾರು ಸ್ವತಂತ್ರ ಚಿಂತಕರಾಗಿದ್ದಾರೋ ಅವರು ಮಾತ್ರ ನಿಜವಾಗಿಯೂ ಸ್ವತಂತ್ರರು.

— *ಜಾರ್ಜ್ ಬರ್ಕ್‌ಲಿ*

ಪ್ರತಿಭೆ ನಿಜವಾಗಿ ಒಂದು ರೀತಿಯ ದೃಷ್ಟಿ. ಅದು ಬುದ್ಧಿಯ ಕಣ್ಣಲ್ಲ; ಹೃದಯದ ಕಣ್ಣು. ಈ ಒಳಗಣ್ಣು ತೆರೆದಾಗ ವಿಶ್ವದ ಹೃದಯವೇ ತೆರೆಯುತ್ತದೆ.

— *ತೀ.ನಂ.ಶ್ರೀಕಂಠಯ್ಯ*

ಮಾನವ ವ್ಯಕ್ತಿಗಳು ಗುರಿ ಎಂದೇ ಯಾವಾಗಲೂ ಗುರುತಿಸಬೇಕು; ಅವರು ಗುರಿಯನ್ನು ತಲಪಲು ಬೇಕಾದ ಸಾಧನಗಳು ಎಂದು ಎಂದಿಗೂ ತಿಳಿಯಬೇಡ.

— *ಇಮ್ಯಾನುವೆಲ್ ಕ್ಯಾಂಟ್*

ರಾಮಕೃಷ್ಣ ಮಿಷನ್ ಆಶ್ರಮ

(ರಾಮಕೃಷ್ಣ ಮಿಷನ್, ಬೇಲೂರು ಮಠ, ಹೌರಾ 711 002 ಇದರ ಒಂದು ಶಾಖಾಕೇಂದ್ರ)

ಮಿಷನ್ ರಸ್ತೆ , ಆಶ್ರಮಪಾರಾ, ಜಲಪಾಯಿಗುರಿ –735101 ಪಶ್ಚಿಮ ಬಂಗಾಳ

Phone: **8902051967, 9434344492, 03561-228388/228945**, Email: **rkmajal@gmail.com** Website: **www.rkmjalpaiguri.in**

ಒಂದು ವಿಜ್ಞಾಪನೆ

''ಯಾರು ಇತರರಿಗಾಗಿ ಬದುಕುವರೋ, ಅವರೇ ನಿಜವಾಗಿ ಬದುಕುವವರು''

— ಸ್ವಾಮಿ ವಿವೇಕಾನಂದ

ಸ್ನೇಹಿತರೇ ಹಾಗೂ ಭಕ್ತರೇ,

ಸ್ವಾಮಿ ವಿವೇಕಾನಂದರ ಕಹಳೆ ಧ್ವನಿಗೆ ಓಗೊಟ್ಟು 1928ರಲ್ಲಿ **ಜಲಪಾಯಿಗುರಿ** ಪಟ್ಟಣದಲ್ಲಿ ಕೆಲವು ಭಕ್ತರು ಒಂದು ಆಶ್ರಮವನ್ನು ಆರಂಭಿಸಿದರು. 1941ರಲ್ಲಿ ಅದು ಬೇಲೂರು ಮಠದ ರಾಮಕೃಷ್ಣ ಮಿಷನ್‌ನ ಶಾಖಾಕೇಂದ್ರವಾಗಿ ಸೇರ್ಪಡೆಗೊಂಡಿತು. ಹಿಮಾಲಯ ಪರ್ವತ ಶ್ರೇಣಿಯ ಕೆಳಗಿನ ಹಂತದ ತಪ್ಪಲು ಪ್ರದೇಶದಲ್ಲಿ ನೆಲೆಸಿರುವ ಈ ಆಶ್ರಮವು **ನಾಲ್ಕು ರಾಷ್ಟ್ರಗಳ ನಡುವಿನ ವಿಶಿಷ್ಟ ಭೂಪ್ರದೇಶದಲ್ಲಿ** ನೆಲೆಸಿದೆ. ಹಚ್ಚಹಸಿರಿನ ರಮಣೀಯ ನೈಸರ್ಗಿಕ ಸಮೃದ್ಧಿಯಿಂದ ಕೂಡಿದ ಈ ಆಶ್ರಮವು ಸಮೀಪದ ಹಾಗೂ ದೂರದ ಅನೇಕ ಮಂದಿ ಸಾಧಕರನ್ನು ತನ್ನೆಡೆಗೆ ಆಕರ್ಷಿಸುತ್ತಿದೆ. ಸೇವಾ ಕಾರ್ಯಗಳಲ್ಲಿ ವಿದ್ಯಾರ್ಥಿ ಮಂದಿರ, ಮೌಲ್ಯ ಶಿಕ್ಷಕ ತರಬೇತಿ, ಏಕೀಕೃತ ಶಿಶು ಅಭಿವೃದ್ಧಿ ಯೋಜನೆ, ಉಚಿತ ಚಿಕಿತ್ಸಾಲಯ, ಗ್ರಂಥಾಲಯ ಹಾಗೂ ವಾಚನಾಲಯ, ಪರಿಹಾರ ಮತ್ತು ಅಭಿವೃದ್ಧಿ ಕಾರ್ಯಗಳು ಹಾಗೂ ಇನ್ನಿತರ ಯೋಜನೆಗಳು ಪ್ರಮುಖವಾಗಿವೆ.



ಸ್ವಾಮಿ ವಿವೇಕಾನಂದರು 1893ರ ಸೆಪ್ಟೆಂಬರ್ 11ರಂದು ಚಿಕಾಗೋದಲ್ಲಿ ನೀಡಿದ ನಿತ್ಯ ಸ್ಮರಣಾರ್ಹವೂ ಅತ್ಯಮೋಘವೂ ಆದ ಉಪನ್ಯಾಸಗಳು ನಡೆದ 'ಆರ್ಟ್ ಇನ್‌ಸ್ಟಿಟ್ಯೂಟ್'ಅನ್ನು ಹೋಲುವ '**ವಿವೇಕಾನಂದ ಸಭಾಗೃಹ**'ದ ನಿರ್ಮಾಣ ಮಾಡುವ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. (ಅದರ ಮಾದರಿಯು ಚಿತ್ರದಲ್ಲಿದೆ.) ಈ ಬಹೂಪಯೋಗಿ ಕಟ್ಟಡವು 16,000 ಚದರಡಿ ಅಳತೆಯಷ್ಟು ವಿಶಾಲವಾಗಿದ್ದು, ಸುಮಾರು 1300 ಮಂದಿ ಕುಳಿತುಕೊಳ್ಳಬಹುದಾಗಿದೆ. ವಿದ್ಯಾರ್ಥಿಗಳಿಗೆ, ಯುವಕರಿಗೆ ಹಾಗೂ ಸಾರ್ವಜನಿಕರಿಗೆ ವಿಚಾರ ಸಂಕಿರಣ, ಸಭೆ–ಸಮಾರಂಭಗಳನ್ನು ಏರ್ಪಡಿಸಲು, ಮೌಲ್ಯಶಿಕ್ಷಣ ಸಾಂಸ್ಕೃತಿಕ ಆಧ್ಯಾತ್ಮಿಕ ಹಾಗೂ ಸೇವಾ ಕಾರ್ಯಗಳನ್ನು ನಡೆಸಲು ಮತ್ತು ವಿವಿಧ ಹಬ್ಬ–ಹರಿದಿನಗಳನ್ನು ಹಮ್ಮಿಕೊಳ್ಳಲು ಈ ಕಟ್ಟಡ ನೆರವಾಗಲಿದೆ. ವಿಸ್ತಾರ ಉತ್ತರ ಬಂಗಾಳದ ಹಲವು ಪ್ರದೇಶಗಳಿಂದ ಬರುವ ಅಪಾರ ಸಂಖ್ಯೆಯ ಭಕ್ತರುಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇದರಿಂದ ಸಾಧ್ಯವಾಗುತ್ತದೆ. ಈ ಮೂಲಕ ಸ್ವಾಮಿ ವಿವೇಕಾನಂದರ '**ಮಾನವ – ನಿರ್ಮಾಣ**' ಹಾಗೂ '**ರಾಷ್ಟ್ರ ನಿರ್ಮಾಣ**'ದ ಕನಸನ್ನು ಸಾಕಾರಗೊಳಿಸಲು ಸಾಧ್ಯವಾಗುವುದು ಎಂದು ನಮ್ಮ ನಂಬಿಕೆ. ಇದರ ನಿರ್ಮಾಣಕಾರ್ಯಕ್ಕೆ ಸುಮಾರು 4.66 ಕೋಟಿ ರೂ. ಅಂದಾಜು ವೆಚ್ಚ ತಗಲುವುದು. ಇದಕ್ಕೆ ತಾವು ಉದಾರ ಧನಸಹಾಯ ನೀಡಬೇಕೆಂದು ತಮ್ಮಲ್ಲಿ ನಾವು ವಿನಂತಿಸಿಕೊಳ್ಳುತ್ತಿದ್ದೇವೆ.

ದಾನಿಗಳಲ್ಲಿ ತಮ್ಮ ಪ್ರೀತಿಪಾತ್ರರಾದವರ ಸ್ಮರಣೆಗಾಗಿ ದತ್ತಿ ನೀಡಬಯಸುವವರಿದ್ದರೆ, ಅವರ ಬಯಕೆಯನ್ನು ಈಡೇರಿಸಲು, ಅವರ ಪ್ರೀತಿ ಪಾತ್ರರಾದವರ ಹೆಸರನ್ನು ಸೂಕ್ತ ಸ್ಥಳದಲ್ಲಿ ಫಲಕಗಳ ಮೂಲಕ ಹಾಕಿಸಲಾಗುವುದು. ಆಸಕ್ತ ದಾನಿಗಳು ಈ ಕುರಿತು ಆಶ್ರಮದ ಕಾರ್ಯದರ್ಶಿಯವರನ್ನು ಸಂಪರ್ಕಿಸಬಹುದು. ಅವರ ವಿಳಾಸ: **The Secretary, Ramakrishna Mission Ashrama, Ashramapara, Mission Road, Jalapaiguri - 735101, West Bengal, India.**

ದೇಣಿಗೆಗಳನ್ನು A/C Payee ಚೆಕ್, ಡ್ರಾಫ್ಟ್, ಮನಿ ಆರ್ಡರ್ ಮೂಲಕ ಕಳುಹಿಸಬಹುದು. ಅವುಗಳನ್ನು ಕೃತಜ್ಞತಾಪೂರ್ವಕ ಸ್ವೀಕರಿಸಿ, ಸ್ವೀಕೃತಿ ಪತ್ರವನ್ನು ಕಳುಹಿಸುತ್ತೇವೆ. ಚೆಕ್, ಡ್ರಾಫ್ಟ್‌ಗಳನ್ನು ಕಳುಹಿಸಬೇಕಾದ ವಿಳಾಸ: **Ramakrishna Mission Ashrama, Jalapaiguri.**

ಈ ಧನಸಹಾಯಗಳಿಗೆ 1961ರ ಆದಾಯ ತೆರಿಗೆ ಕಾಯಿದೆಯನ್ವಯ u/s 80-G ತೆರಿಗೆ ವಿನಾಯಿತಿ ಅನ್ವಯವಾಗುತ್ತದೆ.

Payment may be made by Bank Transfer

Bank Details:

State Bank of India, Jalpaiguri Branch, Club Road, Jalpaiguri: 735101

Savings Bank A/C no. **11188188101**; IFSC Code: **SBINOOOOO95** MICR No: **735002095** Branch Code: **SBI Jalpaiguri**

ಆನ್‌ಲೈನ್ ಮೂಲಕ ಹಣಪಾವತಿ: ಆನ್‌ಲೈನ್ ಮೂಲಕ ಹಣವನ್ನು ವರ್ಗಾಯಿಸಿದ ತಕ್ಷಣವೇ rkmajal@gmail.com ಈ ವಿಳಾಸಕ್ಕೆ ತಮ್ಮ ಹೆಸರು, ಪೂರ್ಣ ಅಂಚೆ ವಿಳಾಸ, PAN No. ಹಾಗೂ ವರ್ಗಾಯಿಸಿದ ಮೊತ್ತ – ಈ ವಿವರಗಳನ್ನು ನಮಗೆ ತಿಳಿಸಲು ಕೋರುತ್ತೇವೆ.

ಈ ಉದಾತ್ತ ಯೋಜನೆಗಾಗಿ ನೀವು ಮಾಡುವ ಧನಸಹಾಯವು ದೂರಗಾಮಿಯೂ, ನಿರ್ಮಾಣಕಾರ್ಯ ಪೂರ್ಣಗೊಳ್ಳುವ ತನಕ ಸಹಕಾರಿಯೂ ಆಗಿರುವುದರಲ್ಲಿ ಯಾವುದೇ ಸಂದೇಹವಿಲ್ಲ.

ಶ್ರೀರಾಮಕೃಷ್ಣರು ನಿಮ್ಮ ಮೇಲೆ ಸದಾ ಕೃಪೆದೋರಿ ಹರಸಲಿ ಎಂಬುದೇ ನಮ್ಮ ಹೃತ್ಪೂರ್ವಕ ಪ್ರಾರ್ಥನೆ.

ಜಲಪಾಯಿಗುರಿ
ಡಿಸೆಂಬರ್ ೯, ೨೦೧೭

ಇತಿ ಭಗವತ್ಸೇವೆಯಲ್ಲಿ ತಮ್ಮ
ಸ್ವಾಮಿ ಶಿವಪ್ರೇಮಾನಂದ
ಕಾರ್ಯದರ್ಶಿಗಳು



ಶ್ರೀರಾಮಕೃಷ್ಣ ಮಠ

ರಿಸರ್ವ್ ಲೈನ್, ನ್ಯೂ ನಾಥಂ ರಸ್ತೆ,
ಮದುರೈ - 625 014 ತಮಿಳುನಾಡು
ಫೋನ್: 0452-2680224 ಮೊ: 08618162822
ಇಮೇಲ್ : **madurai@rkmm.org**

ಮನವಿ

ಆತ್ಮೀಯ ಬಾಂಧವರೆ,

ಇದು '**ಶ್ರೀರಾಮಕೃಷ್ಣ ಶಾರದಾ ವಿದ್ಯಾಲಯ**'ದ ಆವರಣದಲ್ಲಿ ಭಗವತ್ಕೃಪೆಯಿಂದ ನಿರ್ಮಾಣ ಹೊಂದಲಿರುವ ಒಂದು ಹೊಸ ಕಟ್ಟಡಕ್ಕಾಗಿ ನಿಧಿಸಂಗ್ರಹ ಮಾಡುವ ಉದ್ದೇಶದಿಂದ ಮಾಡಿರುವ ಬಿನ್ನಹವಾಗಿದೆ. ಇದಕ್ಕಾಗಿ ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತ, ನಮ್ಮ ಸುತ್ತಮುತ್ತ ನಾವು ಸಲ್ಲಿಸುತ್ತಿರುವ ಸೇವಾಕಾರ್ಯಗಳನ್ನು ಕುರಿತು ಇಲ್ಲಿ ಕೆಲವು ಮಾಹಿತಿಗಳನ್ನು ನೀಡಬಯಸುತ್ತೇವೆ:

೧. ಪ್ರತಿದಿನ ಬೆಳಗ್ಗೆ ನಾವು ಮಠದ ಆವರಣದಲ್ಲಿ 120 ಮಂದಿ ವಿದ್ಯಾರ್ಥಿಗಳಿಗೆ ಉಚಿತ ಆಹಾರವನ್ನು ಒದಗಿಸುತ್ತಿದ್ದೇವೆ.

೨. ಮಠದ ಆವರಣದಲ್ಲಿರುವ ಅಲೋಪಥಿ ಹಾಗೂ ಹೋಮಿಯೋಪಥಿ ಚಿಕಿತ್ಸಾಲಯಗಳ ಮೂಲಕ ನಾವು ಬಡ ಹಾಗೂ ಅನಾರೋಗ್ಯದಿಂದಿರುವ ಜನರಿಗೆ ಉಚಿತ ಆರೋಗ್ಯ ಸೌಕರ್ಯವನ್ನು ನೀಡುತ್ತಿದ್ದೇವೆ.

೩. ಉಚಿತ ವೈದ್ಯಕೀಯ ಶಿಬಿರಗಳು:

i) ಉಚಿತ ನೇತ್ರಪರೀಕ್ಷೆ ಶಿಬಿರ – ಪ್ರತಿ ತಿಂಗಳ ಮೂರನೆಯ ಭಾನುವಾರ
ii) ಉಚಿತ ಆಕ್ಯುಪಂಕ್ಚರ್ ಶಿಬಿರ – ಪ್ರತಿ ತಿಂಗಳ ಮೂರನೆಯ ಭಾನುವಾರ
iii) ಉಚಿತ ಸಾಮಾನ್ಯ ವೈದ್ಯಕೀಯ ಶಿಬಿರ – ಕೆಲವು ತಿಂಗಳಿಗೆ ಒಂದು ಬಾರಿ

ಶಾರದಾ ವಿದ್ಯಾಲಯ ಶಾಲೆ: ಶ್ರೀರಾಮಕೃಷ್ಣ ಮಠವು ನಡೆಸುತ್ತಿರುವ '**ಶ್ರೀ ಶಾರದಾ ವಿದ್ಯಾಲಯ**' ದಲ್ಲಿ **545** (ಗಂಡು ಮಕ್ಕಳು ಹಾಗೂ ಹೆಣ್ಣುಮಕ್ಕಳು) ನರ್ಸರಿ ಹಾಗೂ ಪ್ರಾಥಮಿಕ ದರ್ಜೆಯಲ್ಲಿ ಓದುತ್ತಿದ್ದಾರೆ.

ಉಚಿತ ತರಬೇತಿ ಕೇಂದ್ರ: '**ಶಾರದಾ ವಿದ್ಯಾಲಯ**'ದ ಆವರಣದಲ್ಲಿ ಪ್ರತಿದಿನ ಸಾಯಂಕಾಲ ನಾವು ನರ್ಸರಿ ಶಾಲೆಯಲ್ಲಿ ಓದುತ್ತಿರುವ ಹಾಗೂ ಎಲ್ಲ ಹಂತದ ಮಕ್ಕಳಿಗೆ ಉಚಿತ ತರಬೇತಿಯ ತರಗತಿಗಳನ್ನು ನಡೆಸುತ್ತಿದ್ದೇವೆ.

ಸುಮಾರು ೫ ಲಕ್ಷ ರೂ.ಗಳಷ್ಟು ಮೊತ್ತವನ್ನು ಬಡವಿದ್ಯಾರ್ಥಿಗಳ ಉನ್ನತ ಶಿಕ್ಷಣ ವ್ಯಾಸಂಗಕ್ಕಾಗಿ ಸ್ಕಾಲರ್‌ಶಿಪ್‌ಗೋಸ್ಕರ ವಿನಿಯೋಗಿಸಲಾಗುವುದು ಎಂದು ನಾವು ತಿಳಿಸಲು ಹರ್ಷಿಸುತ್ತೇವೆ.

ನಮ್ಮ ಸೇವಾಕಾರ್ಯಕ್ಕಾಗಿ ಹೊಸ ಭವನದ ಆವಶ್ಯಕತೆ

ನೆಲ ಅಂತಸ್ತು: ಪ್ರಧಾನ ಆವಶ್ಯಕತೆ ನೆಲ ಅಂತಸ್ತಿನಲ್ಲಿ; ಸಾಯಂಕಾಲ ಎಲ್ಲ ಹಂತಗಳ ವಿದ್ಯಾರ್ಥಿಗಳಿಗೆ ಹಾಗೂ ಬೆಳಿಗ್ಗೆ ಪ್ರಾಥಮಿಕ ತರಗತಿಯ ವಿದ್ಯಾರ್ಥಿಗಳಿಗೆ ಇದು ಸ್ಥಳಾವಕಾಶವನ್ನು ಕಲ್ಪಿಸಿಕೊಡುವುದು. ಉಚಿತ ವೈದ್ಯಕೀಯ ಶಿಬಿರಗಳಿಗೂ ಇದು ಅವಶ್ಯವಾಗಿದೆ. ಆದಕಾರಣ, ನಾವು ೨೫೦೦ ಚದರಡಿಯ ವಿಸ್ತೀರ್ಣವುಳ್ಳ ಬಹೂಪಯೋಗಿ ಕಟ್ಟಡವನ್ನು ನಿರ್ಮಿಸಲು ಯೋಜನೆಯನ್ನು ತಯಾರಿಸಿದ್ದೇವೆ. ಈ ಕಟ್ಟಡದ ನಿರ್ಮಾಣಕ್ಕಾಗಿ ೫೫ ಲಕ್ಷ ರೂ.ಗಳ ವೆಚ್ಚ ತಗಲುವುದಾಗಿ ಅಂದಾಜು ಮಾಡಲಾಗಿದೆ. ಇದು ಭಕ್ತಬಾಂಧವರ ಹಾಗೂ ಹಿತೈಷಿಗಳ ಉದಾರ ಧನಸಹಾಯದಿಂದಾಗಿ ಮಾತ್ರವೇ ನಡೆಯಬಹುದಾಗಿದೆ.

ದೇಣಿಗೆಗೆ ಮನವಿ

ಈ ಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ನಿಮ್ಮ ಉದಾರ ಹಾಗೂ ದಯಾಪೂರ್ಣವಾದ ನೆರವಿನಲ್ಲಿ ನಮಗೆ ನಂಬುಗೆಯಿದೆ. ಈ ಶೈಕ್ಷಣಿಕ ಸೇವಾಕಾರ್ಯಕ್ಕೆ ನೀವು ಸಲ್ಲಿಸುವ ದಾನ, ದತ್ತಿಗಳು ನಾವು ನಡೆಸುತ್ತಿರುವ ಬಡಜನರ ಕಲ್ಯಾಣದ ಈ ಪಯಣವನ್ನು ಮುಂದುವರಿಸಲು ನೆರವಾಗುವುದು. ಎಲ್ಲ ದಾನ, ದತ್ತಿ, ಕಾಣಿಕೆಗಳು ಅವೆಷ್ಟೇ ಸಣ್ಣದಿರಲಿ, ಕೃತಜ್ಞತಾಪೂರ್ವಕವಾಗಿ ಅವುಗಳನ್ನು ಸ್ಮರಿಸಲಾಗುವುದು. ತಮಗೆ ಒಪ್ಪಿಗೆಯಿದ್ದಲ್ಲಿ, ಒಂದು ಲಕ್ಷ ರೂ. ಹಾಗೂ ಹೆಚ್ಚಿನ ಮೊತ್ತವನ್ನು ದೇಣಿಗೆಯಾಗಿ ನೀಡುವ ದಾನಿಗಳ ಹೆಸರನ್ನು ಹೊಸ ಕಟ್ಟಡದಲ್ಲಿ ಅಮೃತಶಿಲೆಯ ಫಲಕಗಳಲ್ಲಿ ಹಾಕಿಸಲಾಗುವುದು.

ದೇಣಿಗೆಗಳನ್ನು ಚೆಕ್, ಡಿಡಿ ಮೂಲಕ '**Ramakrishna Math, Madurai**' ಎಂಬ ಹೆಸರಿನಲ್ಲಿ ತೆಗೆದು, ನಮ್ಮ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಬೇಕು: Ramakrishna Math, Reserve Lines, New Natham Road, Madurai, Tamil Nadu - 625014. Phone: 0452-268 0224. ಅಥವಾ ನೇರ ಬ್ಯಾಂಕ್ ಮೂಲಕ ಹಣ ವರ್ಗಾವಣೆ ಮಾಡಬಹುದು. ಅದಕ್ಕೆ ಬೇಕಾದ ಬ್ಯಾಂಕ್ ವಿವರಗಳು: *Ramakrishna Math, Account No: 32314981922, Bank: State Bank of India, Branch: Narayanapuram, Madurai – 625014. IFSC Code: SBIN0011063* (NEFT/RTGS ಮೂಲಕ ಹಣ ಸಂದಾಯ ಮಾಡಿದ್ದರೆ ವಿವರಗಳನ್ನು ಇ-ಮೇಲ್ ಮೂಲಕ ನಮಗೆ ತಿಳಿಸಬೇಕು). ದೇಣಿಗೆಗಳಿಗೆ ಆದಾಯ ತೆರಿಗೆ ಕಾಯಿದೆಯ 80G ಸೆಕ್ಷನ್ ಅನ್ವಯ ಆದಾಯ ತೆರಿಗೆ ವಿನಾಯಿತಿ ಲಭ್ಯವಿದೆ.

ನಿಮ್ಮೆಲ್ಲರಿಗಾಗಿ ಮದುರೈ ಶ್ರೀ ಮೀನಾಕ್ಷಿದೇವಿ, ಶ್ರೀ ಸುಂದರೇಶ್ವರ ಹಾಗೂ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರಿಗೆ ಪ್ರಾರ್ಥನೆಗಳನ್ನು ಸಲ್ಲಿಸುತ್ತೇನೆ. ಮತ್ತೊಮ್ಮೆ ತಮಗೆಲ್ಲರಿಗೂ ನನ್ನ ಪ್ರೀತಿಯ ನಮಸ್ಕಾರಗಳು ಹಾಗೂ ಶುಭಾಶಯಗಳು.

ಇತಿ ಭಗವತ್ಸೇವೆಯಲ್ಲಿ ತಮ್ಮ,
ಸ್ವಾಮಿ ಕಮಲಾತ್ಮಾನಂದ
ಅಧ್ಯಕ್ಷರು



ಸೌಂದರ್ಯಾನುಭೂತಿಯ ಮೇರುಶಿಖರಗಳು

'ನಹಿ ಸೂರ್ಯ ನಹಿ ಜ್ಯೋತಿಃ ಶಶಾಂಕ ಸುಂದರ
ಭಾಸೆ ವ್ಯೋಮೆ ಛಾಯಾಸಮ ಛವಿ ವಿಶ್ವ ಚರಾಚರ...'

'ಅಲ್ಲಿ ಸೂರ್ಯನಿಲ್ಲ, ಜ್ಯೋತಿಯಿಲ್ಲ, ಸುಂದರ ಶಶಾಂಕನಿಲ್ಲ. ಆ ಮಹಾಶೂನ್ಯದಲ್ಲಿ ಛಾಯಾಸಮನಾದ ವಿಶ್ವ ತೇಲುತ್ತಿದೆ' — ಸ್ವಾಮಿ ವಿವೇಕಾನಂದರ **'ಪ್ರಲಯ ಅಥವಾ ಗಭೀರ ಸಮಾಧಿ'** ಎಂಬ ಕವನದ ಈ ಸಾಲುಗಳು ಕಠೋಪನಿಷತ್ತಿನ **'ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ'** ಎಂಬ ಮಂತ್ರವನ್ನು *(ಕಠ.೫.೧೫)* ನೆನಪಿಸುವಂತಿದೆ. ಆಧ್ಯಾತ್ಮಿಕ ಅನುಭೂತಿಯ ಅತ್ಯುಚ್ಚ ನೆಲೆಯಲ್ಲಿ ಹೊರಹೊಮ್ಮಿದ ಕವಿತೆಯ ಸಾಲುಗಳು ಮಾತು-ಆಲೋಚನೆಗಳಿಗೆ ನಿಲುಕದ ಒಂದು ಅಪೂರ್ವ ಅನುಭವವನ್ನು ವರ್ಣಿಸುವ ಸಾಹಸ ಮಾಡುತ್ತವೆ. ಆ ತಾದಾತ್ಮ್ಯದ ಭರದಲ್ಲಿ ಮೂಡಿಬರುವ ಸಾಲುಗಳು ತನ್ನದೋ, ಇತರರದೋ, ಉಪನಿಷತ್ತಿನದೋ ಎಂದೆಲ್ಲ ಪ್ರತ್ಯೇಕಗೊಳಿಸಲಾಗದಂಥ, ವ್ಯಕ್ತಿ ಭಾವವನ್ನು ಮೀರಿನಿಂತ ದಿವ್ಯಾನುಭವದ ಸಾಂದ್ರತೆಯ ಅನುಭವವನ್ನು ಚಿತ್ರಿಸುತ್ತವೆ. ಸಾಮಾನ್ಯವಾಗಿ ಸೂರ್ಯ, ಚಂದ್ರ, ಪ್ರಕೃತಿ ಇವೆಲ್ಲ ಸೌಂದರ್ಯದ ಪ್ರತೀಕಗಳಾಗಿ ಕಂಡುಬರುತ್ತವೆ; ಸಾಧಾರಣ ಕವಿಯ ಭಾವಕ್ಕೆ ವಸ್ತುವಾಗುತ್ತವೆ. ಆದರೆ ಇಲ್ಲಿ ಅವಾವುದೂ ಇಲ್ಲದ ಒಂದು ಶೂನ್ಯತೆಯ ಗಾಢ ಅನುಭವದ ಚಿತ್ರಣವಿದೆ. ಸಹಜ, ಸಾಮಾನ್ಯ ಚಿತ್ರವನ್ನು ಮೀರಿ ನಿಂತ, ಅತೀತದ ನೆಲೆಯ ಒಂದು ಭಾವನೆಯನ್ನು ಬಿಂಬಿಸುವ ಈ ಕವಿತೆಯಲ್ಲಿ ಭವ್ಯತೆಯೂ ಇದೆ, ದಿವ್ಯತೆಯೂ ಇದೆ. ಮಾನವ ಮನಸ್ಸಿನ ಸೌಂದರ್ಯ ಪ್ರಜ್ಞೆಯ ಅತ್ಯುನ್ನತ ಶ್ರೇಣಿಯ ಬೆಳ್ಳಿಯ ರೇಖೆಗಳು ಇಲ್ಲಿ ಬೆಳಗುತ್ತಿವೆ.

ಸಂಸ್ಕೃತಿಯ ಒಂದು ಲಕ್ಷಣ

ಸೌಂದರ್ಯಾಭಿವ್ಯಕ್ತಿ ಎಂಬುದು ಸಂಸ್ಕೃತಿಯ ವಿವಿಧ ಮಜಲುಗಳಲ್ಲಿ, ಬೆಳವಣಿಗೆಯ ಹಲವು ಹಂತಗಳಲ್ಲಿ ಅನೇಕ ರೀತಿ ಕಂಡುಬರುತ್ತವೆ. ಸಂಸ್ಕೃತಿ ವ್ಯಕ್ತವಾಗುವುದು ಹಲವು ಬಗೆಗಳಲ್ಲಿ; ಅದರ ಒಂದು ಬಗೆಯೇ ಸೌಂದರ್ಯಾಭಿವ್ಯಕ್ತಿ. ಜನಪದರ ಜೀವನದಲ್ಲಿ ಇದು ಕಂಡುಬರುವುದು ಅವರ ದೈನಂದಿನ ಬದುಕಿನ ಒಂದು ಅಂಗವಾಗಿ. ಹಾಡು, ಕುಣಿತ, ಗೃಹಾಲಂಕಾರ, ಹಬ್ಬ-ಹರಿದಿನ, ಕುಸುರಿ ಕಲೆ ಹೀಗೆ ಹಲವು ವೈವಿಧ್ಯತೆಗಳಿಂದ ಜನಸಾಮಾನ್ಯರು ತಮ್ಮ ಕಲೆ, ಸೌಂದರ್ಯಪ್ರಜ್ಞೆ ಇವುಗಳನ್ನು ಅಭಿವ್ಯಕ್ತಿಗೊಳಿಸಿ ಆನಂದವನ್ನು ಕಾಣುತ್ತಾರೆ. ಇದೇ ಕಲೆ ವಿಕಾಸಗೊಳ್ಳುತ್ತ ಶಾಸ್ತ್ರೀಯ ಕಲೆಗಳಾಗಿ ಮಾರ್ಪಾಡು ಹೊಂದಬಹುದು; ಅಂತೆಯೇ ಮೂಲರೂಪ ಹಾಗೂ ಪರಿವರ್ತಿತ ರೂಪಗಳು ಹಲವೆಡೆ ಉಳಿದುಕೊಳ್ಳಬಹುದು. ಸಮಾಜ ಅಥವಾ ಸಂಸ್ಕೃತಿ ಸೌಂದರ್ಯವೆಂಬ ಪರಿಕಲ್ಪನೆಯನ್ನು ಆರಂಭದಿಂದಲೂ ಗುರುತಿಸಿಕೊಂಡಿತ್ತು; ಅದೇ ಮುಂದೆ ಬೆಳೆಯುತ್ತ ಕಾಲಕ್ರಮದಲ್ಲಿ ಅತಿಶ್ರೇಷ್ಠ ಕಲಾರೂಪಗಳನ್ನೂ, ಕಲಾವಿದರನ್ನೂ ಸೃಷ್ಟಿಸುವುದು ಎಂಬುದು ಇಲ್ಲಿ ಮುಖ್ಯ.

ಎಲ್ಲ ಸಂಸ್ಕೃತಿಗಳಲ್ಲೂ ಕಲಾಭಿವ್ಯಕ್ತಿ, ಸೌಂದರ್ಯೋಪಾಸನೆ ಹಲವು ಬಗೆಗಳಲ್ಲಿ ನಡೆದಿವೆ. ಆಯಾ ಸಮಾಜಗಳ ಅಭಿರುಚಿ, ಜ್ಞಾನಸಂಪನ್ನತೆ, ಸೃಜನಶಕ್ತಿಗಳಿಗನುಗುಣವಾಗಿ ಅವುಗಳ ನಡುವೆ ವ್ಯಾಪಕವಾದ ಭಿನ್ನತೆ, ವೈವಿಧ್ಯಮಯವಾದ ಅಭಿವ್ಯಕ್ತಿಕ್ರಮ ಕಂಡುಬರುವುದು ಸಹಜ. ಆದರೆ ಈ ಅಭಿವ್ಯಕ್ತಿಗಳಲ್ಲಿ ಶ್ರೇಷ್ಠತೆಯ ಮಾನದಂಡವೇನು? ಶ್ರೇಷ್ಠತೆಯನ್ನು ತಮ್ಮ ಸಮಾಜ, ಸಂಸ್ಕೃತಿಯೊಳಗೆಯೇ ಕಾಣಬೇಕೇ ಅಥವಾ ಇನ್ನಿತರ ಸಮಾಜ-ಸಂಸ್ಕೃತಿಯ ಕಲೆ, ಸೌಂದರ್ಯಾಭಿವ್ಯಕ್ತಿಗಳೊಂದಿಗೆ ಹೋಲಿಸಿ ನೋಡಬೇಕೆ? – ಈ ಎಲ್ಲ ಚರ್ಚೆಗಳು ಹಲವಾರು ಶತಮಾನಗಳಿಂದ ನಡೆದಿವೆ. ಎಲ್ಲ ವಿರೋಧಾಭಾಸಗಳ, ಗೊಂದಲಗಳ ನಡುವೆ ಕೆಲವೊಂದು ಸಮಾನಾಭಿಪ್ರಾಯಗಳಿವೆ: ೧) ಸೌಂದರ್ಯಾಭಿವ್ಯಕ್ತಿಯ ಶ್ರೇಷ್ಠತೆಯನ್ನು ಜನರೇ ಗುರುತಿಸಿ ಆದರಿಸುತ್ತಾರೆ. ೨) ಶ್ರೇಷ್ಠವಾದ ಕಲೆ, ಕಲಾವಿದ ಹಾಗೂ ಅಭಿವ್ಯಕ್ತಿಕ್ರಮ ಬಹುಕಾಲ ಉಳಿಯುತ್ತದೆ; ಸಮಾಜವನ್ನು ಪ್ರಭಾವಿಸುತ್ತದೆ. ೩) ಇತರ ಸಂಸ್ಕೃತಿ, ಸಮಾಜದೊಂದಿಗೆ ಹೋಲಿಕೆ, ಕೊಡು-ಕೊಳ್ಳುವಿಕೆ ಸಹಜಕ್ರಿಯೆ; ಆದರೆ ಎಲ್ಲ ಸಮಾಜಕ್ಕೂ ಅದರದೇ ಆದ ಸ್ವಂತಿಕೆಯಿರುತ್ತದೆ. ೪) ಲಲಿತಕಲೆ ಇತ್ಯಾದಿಗಳನ್ನು ಮೀರಿ ಸೌಂದರ್ಯಾಭಿವ್ಯಕ್ತಿ ಜೀವನದ ಹಲವು ಕಾರ್ಯಗಳ ಮೂಲಕ ವ್ಯಕ್ತವಾಗಬಹುದು. ಉದಾಹರಣೆಗೆ, ಕೆಲಸ ಮಾಡುವ ರೀತಿ. 'ಸೌಂದರ್ಯಪ್ರಜ್ಞೆ' ಎಲ್ಲರಲ್ಲೂ ವ್ಯಕ್ತವಾಗಬಹುದಾದ, ಎಲ್ಲ ಕ್ರಿಯೆಗಳಲ್ಲೂ ವ್ಯಕ್ತಗೊಳಿಸಬಹುದಾದ ಒಂದು ಗುಣ. ೫) 'ಅಭಿವ್ಯಕ್ತಿ' ಎಂದರೆ ಸೌಂದರ್ಯಪ್ರಜ್ಞೆ ಪ್ರಕಟವಾಗುವ, ಕಾರ್ಯರೂಪದಲ್ಲಿ ಕಾಣಿಸಿಕೊಳ್ಳುವ ಬಗೆ ಎಂದರ್ಥ; ಆದ್ದರಿಂದ ಸಂಸ್ಕೃತಿಗಳಲ್ಲಿ ಕಂಡುಬರುವ ಸೌಂದರ್ಯಾಭಿವ್ಯಕ್ತಿಯನ್ನು ಎಲ್ಲೆಡೆ **ಕಾರ್ಯರೂಪ**ದಲ್ಲೇ ಗುರುತಿಸಿನೋಡಬೇಕು.

ಜನಜೀವನದಲ್ಲಿ ಸೌಂದರ್ಯಪ್ರಜ್ಞೆ ಮತ್ತು ಅಭಿವ್ಯಕ್ತಿ

ಸೌಂದರ್ಯವನ್ನು ಕಾಣುವ ಗುಣ ಮತ್ತು ಹಲವು ರೀತಿ ಅದನ್ನು ವ್ಯಕ್ತಗೊಳಿಸುವ ಗುಣ ಕೆಲವೇ ವ್ಯಕ್ತಿಗಳಿಗೆ ಸೀಮಿತವಲ್ಲ. ಈ ಗುಣ ಎಲ್ಲರಲ್ಲೂ ಇದೆ. ಆದರೆ ಅವರವರ ಮನೋಭಾವ, ಅಭಿರುಚಿಗಳಿಗೆ ತಕ್ಕಂತೆ ಅದು ಬೇರೆ ಬೇರೆ ಕಡೆ, ಬೇರೆ ಬೇರೆ ರೀತಿ ವ್ಯಕ್ತವಾಗು

ವುದು ಅಷ್ಟೆ. 'ನಿನ್ನಲ್ಲಿ ಸೌಂದರ್ಯಪ್ರಜ್ಞೆಯೇ ಇಲ್ಲ' ಎಂದು ಬಯ್ಯುವವರಿದ್ದಾರೆ. ಇದು ಅವರ ಅಜ್ಞಾನವನ್ನು ತೋರಿಸುತ್ತದೆ. ತನ್ನೆದುರಿಗೆ ಇರುವ ವ್ಯಕ್ತಿಯಲ್ಲಿ ಸೌಂದರ್ಯ ಪ್ರಜ್ಞೆ ಇಲ್ಲವೆಂದು ಇವನು ಹೇಗೆ ತಿಳಿದನು? ತಾನು ಎಲ್ಲಿ ಹುಡುಕಿದ್ದನೋ ಅಲ್ಲಿ ಅದು ಕಾಣಿಸಲಿಲ್ಲವೆಂದು ಮಾತ್ರ. ಅದು ಇನ್ನೊಂದಡೆ ಇರಬಹುದಲ್ಲ? ಹಾಗೆ ಇನ್ನೊಂದೆಡೆ ವ್ಯಕ್ತವಾದ ಅವನ ಸೌಂದರ್ಯಪ್ರಜ್ಞೆಯನ್ನು ಇವನು ಕಾಣಲಿಲ್ಲವೆಂದರೆ ಅದು ಅಜ್ಞಾನವೆಂದೇ ಅರ್ಥ.

ಆದರೆ ಸೌಂದರ್ಯ ಪ್ರಜ್ಞೆಯಲ್ಲೂ ಅದರ ಅಭಿವ್ಯಕ್ತಿಯಲ್ಲೂ ತರ-ತಮಭೇದವಿದೆ ಎನ್ನುವುದು ನಿಜ. ಇಲ್ಲಿ ಯಾವುದು ಉತ್ತಮ ವೆಂಬುದನ್ನು ನಿರ್ಣಯಿಸುವವರು ಜನರೇ. ಕಲಾಪ್ರಕಾರಗಳಲ್ಲಿ ಅವರನ್ನು 'ಸಹೃದಯರು' ಎನ್ನುತ್ತಾರೆ. ಪ್ರೇಕ್ಷಕರು, ಓದುಗರು ಅಥವಾ ಕಲೆಯನ್ನು ಆಸ್ವಾದಿಸುವವರು ಕಲಾವಿದನ ಸೌಂದರ್ಯ ಪ್ರಜ್ಞೆಯನ್ನು ಮೆಚ್ಚಿ ಪ್ರೋತ್ಸಾಹಿಸುತ್ತಾರೆ; ಕಲಾವಿದನೂ ಬೆಳೆ ಯುತ್ತ, ಇನ್ನಷ್ಟು ಕಲಾಕೃತಿಗಳನ್ನು ರಚಿಸುತ್ತಾನೆ.

ಯಾವುದು ಸೌಂದರ್ಯ? ಯಾವುದನ್ನು ಸೌಂದರ್ಯಪ್ರಜ್ಞೆ ಎನ್ನಬೇಕು? ಇದನ್ನು ಅರ್ಥಮಾಡಿಕೊಳ್ಳಲು ಅಸ್ತವ್ಯಸ್ತವಾದ ಒಂದು ಚಿತ್ರವನ್ನು ಕಲ್ಪಿಸಿಕೊಳ್ಳಬೇಕು. ಎಲ್ಲೆಲ್ಲೂ ಕಸ ತುಂಬಿರುವ ಒಂದು ಕೋಣೆ; ಧೂಳು, ಜೇಡರಬಲೆ, ವಾಸನೆ ಇವುಗಳಿಂದ ಬೇಸರ ಬರಿಸುತ್ತದೆ. 'ಕೋಣೆಯೊಳಕ್ಕೆ ಯಾಕಾದರೂ ಕಾಲಿಟ್ಟೆನೋ' ಎಂದು ಶಪಿಸುವಂತಾಗುತ್ತದೆ. ಇದು ಶಿಸ್ತುಬದ್ಧತೆಯಿಲ್ಲದ, 'ಸಂಸ್ಕಾರ' ವಿಲ್ಲದ, ಅವ್ಯವಸ್ಥೆಯ ಒಂದು ಚಿತ್ರ. ಕೇವಲ ಕೋಣೆಯಷ್ಟೇ ಅಲ್ಲ; ವಿವಿಧ ಸ್ಥಳಗಳಿಗೂ ಇದನ್ನು ಅನ್ವಯಿಸಬಹುದು. ಅಂತೆಯೇ ನಮ್ಮ ದೇಹ, ನಮ್ಮ ಮನಸ್ಸು, ನಮ್ಮ ಜೀವನ – ಎಲ್ಲವಕ್ಕೂ ಇದನ್ನು ವಿಸ್ತ ರಿಸಬಹುದು. (ಬಸವಣ್ಣನವರ 'ಮನೆಯೊಳಗೆ ಮನೆಯೊಡೆಯ ನಿದ್ದಾನೋ ಇಲ್ಲವೋ' ಎಂಬ ವಚನವನ್ನಿಲ್ಲಿ ನೆನೆಯಬೇಕು!) ಒಟ್ಟು ಮನಃಸ್ಥಿತಿಯೇ ಶೂನ್ಯವಾಗಿರುವ, ಜೀವಂತಿಕೆಯಿಲ್ಲದ ಈ ಸ್ಥಿತಿಯಲ್ಲಿ ಯಾವ ಸೌಂದರ್ಯವನ್ನೂ ನಾವು ಕಾಣಲಾರೆವು.

ಇನ್ನು ಮುಂದಿನ ಚಿತ್ರ: ಚೆನ್ನಾಗಿ ಗುಡಿಸಿ, ಒರೆಸಿ, ಅಚ್ಚುಕಟ್ಟಾಗಿ ರುವ ಕೋಣೆ. ಅಲ್ಲೆಲ್ಲೂ ಬೇಸರ ಬರಿಸುವ ಧೂಳು, ಕಸ, ದುರ್ವಾ ಸನೆಗಳಿಲ್ಲ, ಎಲ್ಲವೂ ಸಹಜವೆನಿಸುತ್ತದೆ. 'ಸ್ವಲ್ಪ ಹೊತ್ತು ಇಲ್ಲೇ ಇರೋಣ' ಅನಿಸುತ್ತದೆ. ಇಲ್ಲಿ ಜೀವನೋತ್ಸಾಹವಿದೆ, ಬದುಕಿಗೆ ಅಸ್ತಿತ್ವವಿದೆ. ಸಮಾಜದಲ್ಲಿ ಸಹ್ಯವೆನಿಸುವ ಜೀವನ ನಡೆಸಲು ಇದು ಮೂಲಭೂತವಾಗಿ ಅಗತ್ಯ. ಇತರರಿಗೆ ಅಸಹ್ಯವೆನಿಸದಂತೆ ಬದು ಕಲು ಕಡೆಯ ಪಕ್ಷ ಅಚ್ಚುಕಟ್ಟಾಗಿ ಬದುಕನ್ನು ರೂಪಿಸಿಕೊಳ್ಳಬೇಕಾಗು ತ್ತದೆ. ಇದನ್ನು ಮೀರಿದರೆ ಜನರು ದೂರವಾಗುತ್ತಾರೆ, ಎಲ್ಲರೂ ದೂಷಿಸಲು ತೊಡಗುತ್ತಾರೆ. ನಮ್ಮ ದೈನಂದಿನ ಜೀವನದಲ್ಲಿ ಈ ಕನಿಷ್ಠ ಅಗತ್ಯವನ್ನಾದರೂ ನಾವು ಮಾಡಲೇಬೇಕಾಗುತ್ತದೆ. ಆದರೆ ಇಲ್ಲೂ ನಾವು 'ಸೌಂದರ್ಯ'ವನ್ನು ಕಾಣಲಾಗದು.

ಎರಡನೇ ಹಂತವನ್ನು ಮೀರಿದ ನಂತರವೇ ನಿಜವಾದ ಸೌಂದರ್ಯ ಪ್ರಜ್ಞೆ ಗೋಚರಿಸುವುದು. ಈ ಚಿತ್ರಣವನ್ನು ನೋಡಿ: ಅಚ್ಚುಕಟ್ಟಾಗಿ ರುವ ಅದೇ ಕೋಣೆಯಲ್ಲಿ ರಂಗವಲ್ಲಿ ಹಾಕಿದ್ದಾರೆ. ಗಂಧದ ಕಡ್ಡಿಯ ಸುಗಂಧ ಮೃದುವಾಗಿ ಆವರಿಸಿದೆ. ಕಿಟಕಿ ಬಳಿ ಹೂ, ಬಳ್ಳಿ ಇಣುಕಿ ನೋಡುತ್ತಿವೆ. ಹಿತವಾಗುವಂತೆ ಬೆಳಕು ಕೋಣೆಯನ್ನೆಲ್ಲಾ ಬೆಳಗಿದೆ. ಯಾವುದೂ ಅತಿಯಿಲ್ಲ; ಎಲ್ಲೆಲ್ಲೂ ಗೃಹಿಣಿಯ ಸೌಂದರ್ಯ ಪ್ರಜ್ಞೆ ಎದ್ದು ಕಾಣುವಂತಿದೆ. ಆಗಂತುಕನು ಒಂದುಕ್ಷಣ ಮೈಮರೆಯುತ್ತಾನೆ; ಆ ಕೋಣೆಯ ಆಪ್ಯಾಯಮಾನ ಸನ್ನಿವೇಶಕ್ಕೆ ಮಾರುಹೋಗುತ್ತಾನೆ.

ಹೌದು, ಇದೇ ಸೌಂದರ್ಯಾಭಿವ್ಯಕ್ತಿ. ಇದನ್ನೇ ನಾವು ಎಲ್ಲೆಡೆ ಅನ್ವಯಿಸಿಕೊಳ್ಳಬಹುದು. ಉದಾಹರಣೆಗೆ ಭಾಷೆ. ಆಡುಭಾಷೆಯಿರಲಿ, ಬರವಣಿಗೆಯಿರಲಿ — ಪ್ರತಿಯೊಬ್ಬರೂ ಕೆಲವೊಂದು ಭಾಷೆಯ ಜಾಯಮಾನ, ನಿಯಮಗಳನ್ನು ಅರಿತುಕೊಂಡೇ ಪ್ರಯೋಗಿಸು ತ್ತಾರೆ. ಈ ನಿಯಮಗಳಿಲ್ಲದೆ ಭಾಷೆಯನ್ನಾಡಿದರೆ ಆಭಾಸವಾಗು ತ್ತದೆ; ಜನರು ಅದನ್ನು ತಿರಸ್ಕರಿಸುತ್ತಾರೆ. ಬೇರೆ ಭಾಷೆಯವರು ನಮ್ಮ ಭಾಷೆಯನ್ನು ಕಲಿಯುವಾಗ ತಪ್ಪು ಮಾಡುತ್ತಾರೆ; ಅಂಥವೇಳೆ ಹಲವು ಬಾರಿ ಅವರು ಅಪಹಾಸ್ಯಕ್ಕೊಳಗಾಗುತ್ತಾರೆ. ಬರವಣಿಗೆ ಯಲ್ಲೂ ಹೀಗೆ — ವ್ಯಾಕರಣ ತಪ್ಪು, ಕಾಗುಣಿತ ತಪ್ಪುಗಳಿದ್ದಾಗ ಓದುವುದು ಅಸಹ್ಯವಾಗುತ್ತದೆ; ಆ ಬರಹ ತಿರಸ್ಕಾರ ಮೂಡಿಸುತ್ತದೆ.

ಭಾಷೆಯ ಬಳಕೆಯಲ್ಲಿ ಮುಂದಿನ ಹಂತವೇ – ಗಾದೆ, ನುಡಿ ಗಟ್ಟು, ಕವಿತೆ, ಅಲಂಕಾರ ಇತ್ಯಾದಿಗಳ ಬಳಕೆ. ಆಡುಮಾತಿನಲ್ಲೂ, ಬರಹದಲ್ಲೂ ಈ ಬಗೆಯ ಭಾಷೆಯಲ್ಲಿ ನಾವು ಸೌಂದರ್ಯವನ್ನು ಕಂಡು, 'ಭಾಷೆ ಚೆನ್ನಾಗಿದೆ', 'ಶೈಲಿ ಸೊಗಸಾಗಿದೆ' – ಎನ್ನುತ್ತೇವೆ. ಇದನ್ನೇ ನಾವು ಪ್ರತಿಯೊಂದು ಕ್ರಿಯೆಯಲ್ಲೂ , ಪ್ರತಿಯೊಂದು ವಸ್ತುವಿನಲ್ಲೂ ಗಮನಿಸಿ ನೋಡಬಹುದು. ನಿಜವಾದ ಸೌಂದರ್ಯ ಪ್ರಜ್ಞೆ ಇರುವವನು ಸಮಸ್ತ ಜಗತ್ತಿನಲ್ಲಿ ಸೌಂದರ್ಯವನ್ನೇ ಕಾಣು ತ್ತಾನೆ. ಅವನ ನಡೆ-ನುಡಿ, ಕ್ರಿಯೆ, ಮಾತು ಎಲ್ಲವೂ ಸೌಂದರ್ಯಾಭಿ ವ್ಯಕ್ತಿಯಾಗಿರುತ್ತದೆ. ಆದರೆ ಎಲ್ಲರಲ್ಲೂ ಅದು ಒಂದೇ ರೀತಿ ಇರ ಲಾರದು; ಒಬ್ಬೊಬ್ಬರಲ್ಲಿ ಒಂದೊಂದು ಪ್ರಮಾಣದಲ್ಲಿ, ಒಂದೊಂದು ಕ್ಷೇತ್ರದಲ್ಲಿ ವ್ಯಕ್ತವಾಗುವುದು.

ಸೌಂದರ್ಯ ಪ್ರಜ್ಞೆ : ಮನಸ್ಸಿನ ಸೂಕ್ಷ್ಮ ಗುಣ

'ಪ್ರಜ್ಞೆ'ಯೆಂಬ ಪದದ ಅರ್ಥ, 'ವಿಶೇಷವಾದ ಅರಿವು' ಎಂದು. ಒಂದರ್ಥದಲ್ಲಿ , ತನ್ನ ಇರುವಿಕೆಯ ಅರಿವು, ತನ್ನತನದ ಅರಿವು, ತನ್ನ ಸ್ವಂತಿಕೆಯ ಅರಿವು ಎಂದೆಲ್ಲ ಇದನ್ನು ವಿವರಿಸಬಹುದು. 'ಇದು ಹೀಗಿದ್ದರೆ ಒಳ್ಳೆಯದು', 'ಈ ರೀತಿ ಮಾಡಿದರೆ ಚೆನ್ನಾಗಿರುತ್ತದೆ' ಎಂದು ಅರಿತುಕೊಂಡು ಒಂದು ಕೆಲಸವನ್ನೋ, ಕಲೆಯನ್ನೋ ಮಾಡಿ ದರೆ ಅದು ಉತ್ತಮವಾಗಿರುತ್ತದೆ; ಅದು ಹಲವರ ಗಮನವನ್ನು ಸೆಳೆಯುತ್ತದೆ. ಹೀಗೆ ಜೀವನದಲ್ಲಿ ಸೌಂದರ್ಯವನ್ನು ಕಂಡುಕೊಳ್ಳು ವುದು, ಅದನ್ನು ವ್ಯಕ್ತಗೊಳಿಸುವುದು ಮನಸ್ಸಿನ ಒಂದು ವಿಶೇಷ ಗುಣ. ಮಾನಸಿಕ ತೊಂದರೆ, ಚಿಂತೆ, ಗೊಂದಲಗಳಿಂದ ಬಳಲುವವ ರಿಗೆ ಇದು ಅಸಾಧ್ಯವಾದ ಕೆಲಸ. ಜೀವನದ ಪ್ರಾಥಮಿಕ ಆವಶ್ಯ ಕತೆಗಳು ಪೂರೈಸಿದಾಗ ಮಾತ್ರ ಕಲೆ, ಸೌಂದರ್ಯಗಳು ಉತ್ಕರ್ಷ ಗೊಳ್ಳುವುವು ಎಂದು ನಾವು ಇತಿಹಾಸದಲ್ಲಿ ಓದಿರುವುದರ ಅರ್ಥ ಇದೇ. ದೈಹಿಕ, ಮಾನಸಿಕ ಸ್ಥಿತಿಗತಿಗಳು ಚೆನ್ನಾಗಿರುವಾಗ ಮಾತ್ರ ಮನಸ್ಸು ಸೃಜನಶೀಲವಾಗಿ, ಸೌಂದರ್ಯಪ್ರಜ್ಞೆಯಿಂದ ಕೆಲಸ ಮಾಡುವುದು. ಅಂಥ ಮನಸ್ಥಿತಿ ಸೂಕ್ಷ್ಮವಾದುದು. ಚಿಂತನೆ, ತರ್ಕ, ಬುದ್ಧಿವಂತಿಕೆ, ಹೃದಯವಂತಿಕೆ ಇವೆಲ್ಲ ಅಲ್ಲಿ ಒಟ್ಟಾಗಿ ಕೆಲಸ ಮಾಡು ವುವು. ಸಂತಸ, ಆನಂದ, ಕ್ರಿಯಾಶೀಲತೆ, ಹೊಸತನ್ನು ಕಾಣುವ ಹಂಬಲ — ಇವು ವ್ಯಕ್ತಿಯೊಬ್ಬನ ಸೌಂದರ್ಯಪ್ರಜ್ಞೆಯನ್ನು

ಪ್ರಚೋದಿಸಿ, ಉತ್ತಮ ಅಭಿವ್ಯಕ್ತಿಗೆ ಪ್ರೇರಣೆ ನೀಡುತ್ತದೆ. 'ಪ್ರತಿಕ್ಷಣವೂ ಹೊಸಹೊಸತನ್ನು ಕಾಣುವ ಹಾಗೂ ಸೃಷ್ಟಿಸುವ ಪ್ರಜ್ಞೆಯೇ ಪ್ರತಿಭೆ ಎನಿಸುವುದು' ಎಂಬ ಮಾತು ಸಂಸ್ಕೃತದಲ್ಲಿ ಬಹಳ ಪ್ರಸಿದ್ಧವಾಗಿದೆ. ಕಾವ್ಯವನ್ನು ಕುರಿತು ಹೇಳಿರುವ ಈ ಮಾತು ಸೌಂದರ್ಯಪ್ರಜ್ಞೆಯಿರುವ ಎಲ್ಲರಿಗೂ ಅನ್ವಯಿಸುತ್ತದೆ.

ಮನಸ್ಸಿನ ಸೂಕ್ಷ್ಮತೆಯೆಂಬುದು ಕೋಲ್ಮಿಂಚಿನಲ್ಲಿ ಗೋಚರಿಸುವ ಬೆಳ್ಳಿಯ ರೇಖೆಯಂತೆ. ಅದು ಸುತ್ತಮುತ್ತ ಬೆಳಕನ್ನು ಹಬ್ಬಿಸುವುದು, ಬಳ್ಳಿಯಂತೆ ಬಳುಕುತ್ತ ವ್ಯಾಪಿಸುತ್ತ ಚೆಲುವನ್ನು ನೀಡುವುದು, ಹಾಗೂ ಒಂದು ಕ್ಷಣದ ಮಿಂಚಿನ ಪುಳಕ ನೀಡಿ ಎದೆಯಲ್ಲಿ ಉಲ್ಲಾಸವನ್ನುಂಟುಮಾಡುವುದು. ಅಂಥ ಸೂಕ್ಷ್ಮ ಮನಸ್ಸಿನಲ್ಲಿ ಮಿಂಚಿದ ಹೊಸ ಭಾವನೆಯೇ ಸೌಂದರ್ಯವನ್ನು ಕಾಣುವುದು; ಅದನ್ನು ತನ್ನದೇ ಆದ ರೀತಿಯಲ್ಲಿ ಅಭಿವ್ಯಕ್ತಿಗೊಳಿಸುವುದು. ಕಲೆ, ಸಂಗೀತ, ನಾಟ್ಯ, ಕರಕುಶಲ ಕಲೆ, ಯಾವುದೇ ಉತ್ತಮ ಹಾಗೂ ಸೌಂದರ್ಯಪೂರ್ಣ ಕೆಲಸ ಇವೆಲ್ಲ ವ್ಯಕ್ತವಾಗುವುದು ಹೀಗೆ.

ಸೌಂದರ್ಯ ಪ್ರಜ್ಞೆ ಮತ್ತು ಭವ್ಯತೆ

ಸೂಕ್ಷ್ಮ ಮನಸ್ಸಿನ, ಸೃಜನಶೀಲವಾದ ಅಭಿವ್ಯಕ್ತಿಯಿಂದ ಕಲೆ ಹೊರಹೊಮ್ಮುವುದು; ಸೌಂದರ್ಯ ಪ್ರಜ್ಞೆ ಕಲಾನುಭವವಾಗಿ ಪರಿಗಣಿಸಲ್ಪಡುವುದು. ಆದರೆ ಇದನ್ನು ಮೀರಿದ ಇನ್ನೊಂದು ಹಂತವಿದೆ. ಅಲ್ಲಿ ಸೌಂದರ್ಯ ಪ್ರಜ್ಞೆಯುಳ್ಳವನು 'ನುರಿತ ಕಲಾವಿದ'ನಾಗುತ್ತಾನೆ; ಸೌಂದರ್ಯದ ರಹಸ್ಯವನ್ನು ಅರಿತು, ಅದರ ಹೃದಯವೀಣೆಯನ್ನು ಮಿಡಿಯುವ ಕಲೋಪಾಸಕನಾಗುತ್ತಾನೆ. ಅಲ್ಲಿ ಅವನು ಕಾಣುವುದು ಎಲ್ಲ ಮಿತಿಯನ್ನು ಮೀರಿದ, ಎಲ್ಲ ಅಲ್ಪತನವನ್ನೂ ಮೆಟ್ಟಿ ನಿಂತ ಒಂದು ಎತ್ತರದ ಸ್ಥಿತಿಯನ್ನು. ಕೇವಲ ತಾನು ಕಾಣುವುದಷ್ಟೇ ಅಲ್ಲ; ಅಂಥ ಅನುಭವವನ್ನು ಇತರರಿಗೂ ಮಾಡಿಸಬಲ್ಲನು. ಇಂಥ ಉನ್ನತ ಸ್ಥಿತಿಯ ಅನುಭವವೇ ಭವ್ಯತೆ. ಪ್ರತಿಯೊಂದು ಕಲಾಪ್ರಕಾರಕ್ಕೂ, ಪ್ರತಿಯೊಂದು ಕ್ರಿಯೆಗೂ ಅದರದೇ ಆದ ಮಿತಿಗಳಿರುತ್ತವೆ. ಉದಾಹರಣೆಗೆ, ಭಾಷೆಗೆ ಶಬ್ದ, ವಾಕ್ಯ, ಅಕ್ಷರಗಳೇ ಮಿತಿ; ಸಂಗೀತಕ್ಕೆ ಸ್ವರ, ಲಯಗಳೇ ಮಿತಿ. ಇದೇ ರೀತಿ ವಿವಿಧ ಕೆಲಸಗಳಲ್ಲಿ. ಬಡಗಿ, ಕಮ್ಮಾರ, ಕುಂಬಾರ, ಇಂಜಿನಿಯರ್, ಕಂಪ್ಯೂಟರ್ ತಜ್ಞ, ಅಧ್ಯಾಪಕ — ಎಲ್ಲ ಕಡೆ ಇಂಥದೇ ಮಿತಿಗಳಿವೆ. ಈ ಮಿತಿಗಳನ್ನು ದಾಟಿ, ಅನಂತತೆಯೆಂಬ ಭಾವದಲ್ಲಿ ತನ್ಮಯವಾದಾಗಲೇ 'ಭವ್ಯತೆ'ಯ ಅನುಭವವಾಗುವುದು. ಕಲಾವಿದ ಕೆಲವು ಕ್ಷಣಗಳ ಮಟ್ಟಿಗಾದರೂ ಇಂಥ ಅನುಭವವನ್ನು ಹೊಂದುತ್ತಾನೆ; ಅದನ್ನೇ ತನ್ನ ಕಲೆಯ (ಅಥವಾ ಯಾವುದೇ ಮಾಧ್ಯಮದ) ಮಿತಿಯೊಳಗೆ ಕಟ್ಟಿಹಾಕಲು ಯತ್ನಿಸುತ್ತಾನೆ. ಎಷ್ಟು ಸಮರ್ಥವಾಗಿ ಅವನು ಆ 'ಭವ್ಯತೆ'ಯ ಅನುಭವವನ್ನು ಇತರರಿಗೆ ಮಾಡಿಸಬಲ್ಲನೋ, ಅಷ್ಟರಮಟ್ಟಿಗೆ ಅವನು ಶ್ರೇಷ್ಠತೆಯನ್ನು ಹೊಂದುತ್ತಾನೆ. ಭಾಸ, ಕಾಳಿದಾಸ, ಪಂಪ, ರನ್ನ, ಬೇಂದ್ರೆಯವರಂಥ ಕವಿಗಳು ಎತ್ತರಕ್ಕೇರಿದ್ದು ಹೀಗೆ. ಇದೇ ರೀತಿ ಬಹಳ ಮಂದಿ ಇಷ್ಟಪಡುವ ಕ್ರೀಡೆ, ರಾಜಕೀಯ, ವಾಣಿಜ್ಯ ಕ್ಷೇತ್ರಗಳಲ್ಲೂ ಇಂಥ ಭವ್ಯತೆಯನ್ನು ಕಂಡುಕೊಂಡವರು, ಇತರರಿಗೂ ಕಾಣಿಸಿದವರು ಇದ್ದಾರೆ ಎಂಬುದು ಅತ್ಯಂತ ಆಶ್ಚರ್ಯದ ಸಂಗತಿಯಲ್ಲವೆ?

ದಿವ್ಯತೆಯತ್ತ

ಭಾರತದ ಮಹಾಭಾಗ್ಯವೆಂದರೆ, ನಮ್ಮಲ್ಲಿ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಅಧ್ಯಾತ್ಮ ಹಾಸುಹೊಕ್ಕಾಗಿರುವುದು. ವಿವಿಧ ಮಜಲುಗಳನ್ನು ಬಿಗಿಯಾಗಿ ಹಿಡಿದಿಡುವ ಸೂತ್ರವಾಗಿ ಅಧ್ಯಾತ್ಮ ನಮ್ಮ ದೇಶದಲ್ಲಿ ಕಾಣಿಸಿಕೊಂಡಿದೆ. ತತ್ತ್ವಶಾಸ್ತ್ರ, ಧರ್ಮ, ನೀತಿ, ಜೀವನದ ವಿವಿಧ ಅಂಗಗಳಾದ ಆಡಳಿತ, ನ್ಯಾಯ, ವಾಣಿಜ್ಯ, ಸಾಮಾಜಿಕ ವ್ಯವಸ್ಥೆ, ವಿವಿಧ ವೃತ್ತಿಗಳು – ಎಲ್ಲೆಲ್ಲೂ ಅಧ್ಯಾತ್ಮದ ಪ್ರಭಾವ ಇಲ್ಲಿ ನಿಚ್ಚಳವಾಗಿದೆ. ಕಲೆ, ಸೌಂದರ್ಯಪ್ರಜ್ಞೆ, ಅದರ ಅಭಿವ್ಯಕ್ತಿ ಇವುಗಳಲ್ಲೂ ಆಧ್ಯಾತ್ಮಿಕತೆ ತುಂಬಿತುಳುಕುವಂತಿದೆ. ಇದರಿಂದ ಜೀವನ ಹಾಗೂ ಸಂಸ್ಕೃತಿ ಶ್ರೀಮಂತವಾಗಿದೆ.(ಆಧ್ಯಾತ್ಮಿಕತೆಯ ಪ್ರಭಾವದಿಂದ ಭಾರತೀಯ ಜೀವನ, ಸಂಸ್ಕೃತಿ ಹಾಗೂ ಕಲೆ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಿದೆ ಎಂದು ವಾದಿಸುವವರಿದ್ದಾರೆ. ಹಲವು ವಿದೇಶೀ ಚಿಂತನೆಗಳಿಂದ ಪ್ರೇರಿತವಾದ ಈ ವಾದವನ್ನು ನಾವು ಒಪ್ಪಲಾರೆವು.) ಇದಕ್ಕಿಂತಲೂ ಹೆಚ್ಚಾಗಿ, ಆಧ್ಯಾತ್ಮಿಕತೆಯು ನಮ್ಮ ಜೀವನ, ಕಲೆ, ಸಂಸ್ಕೃತಿಗಳನ್ನು ಇನ್ನೊಂದು ಅದ್ಭುತ ಆಯಾಮದತ್ತ ಕೊಂಡೊಯ್ದಿದೆ ಎಂಬುದನ್ನಿಲ್ಲಿ ವಿಶೇಷವಾಗಿ ಗಮನಿಸಬೇಕು.

ಹಿಂದೆ ನೋಡಿದಂತೆ ಸೌಂದರ್ಯಪ್ರಜ್ಞೆಯನ್ನು ಕೆಲವು ಮಂದಿ ಶ್ರೇಷ್ಠ ವ್ಯಕ್ತಿಗಳು ಕಲೆಯ ವಿವಿಧ ಪ್ರಕಾರಗಳ ಮಿತಿಯಾಚೆಗೆ ಕರೆದೊಯ್ದು 'ಭವ್ಯತೆ'ಯ ನೆಲೆಗೇರಿಸುತ್ತಾರೆ. ಆ ಮೂಲಕ 'ಸದ್ಯಃ ಪರನಿವೃತಿ'(ಕ್ಷಣಿಕವಾಗಿಯಾದರೂ ತನ್ನನ್ನು ತಾನು ಮರೆಯುವ ಆನಂದ)ಯನ್ನು ಅನುಭವಿಸುವಂತೆ ಮಾಡುತ್ತಾರೆ. ಇದರ ಮುಂದಿನ ಉನ್ನತ ನೆಲೆಯೇ 'ದಿವ್ಯತೆ'. ಕಲಾವಿದನಲ್ಲಿ ಅಥವಾ ಸಹೃದಯದಲ್ಲಿ ಮೂಡಿಮಾಯವಾಗುವ 'ಭವ್ಯತೆ' ಕಾಲದ, ದೇಶದ ಮಿತಿಯನ್ನು ಮೀರಿ ಅನಂತತೆಯತ್ತ ಒಂದು ಇಣುಕುನೋಟವನ್ನು ಬೀರುವುದು. 'ದಿವ್ಯತೆ' ಯಾದರೋ ಎಲ್ಲ ಮಿತಿಗಳಾಚೆ ನೆಲೆನಿಂತ ಶಾಶ್ವತವಾದ, ನಿತ್ಯವೂ ಅನಂತವೂ ಆದ ಪರಬ್ರಹ್ಮನ ಇರುವಿಕೆಯತ್ತ ಒಂದು ನೋಟವನ್ನು ಬೀರುವ ಯತ್ನವನ್ನು ಮಾಡುವುದು. ಋಷಿಗಳೇ ಕವಿಗಳಾಗಿರುವ ನಮ್ಮ ಪರಂಪರೆಯಲ್ಲಿ (ಈ ಪರಂಪರೆ ನಿಂತುಹೋಗಿಲ್ಲ ; ಸ್ವಾಮಿ ವಿವೇಕಾನಂದರಂತಹ ಆಧುನಿಕ ಸಂತರ ಮೂಲಕ ಇದು ಮುಂದುವರಿಯುತ್ತ ಬಂದಿದೆ) ಆಧ್ಯಾತ್ಮಿಕ ಅನುಭೂತಿಯ ರಸವು ಘನೀಭೂತವಾಗಿ ಅಭಿವ್ಯಕ್ತಗೊಂಡಿದೆ. ವ್ಯಾಸ, ವಾಲ್ಮೀಕಿ ಮುಂತಾದ ಮಹಾತ್ಮರಿರಲಿ, ಮೀರಾಬಾಯಿ, ತುಳಸೀದಾಸ, ಬಸವಣ್ಣ, ಪುರಂದರದಾಸರಂಥ ಭಕ್ತಕವಿಗಳಿರಲಿ, ತಾನಸೇನ, ತ್ಯಾಗರಾಜರಂಥ ನಾದಯೋಗಿಗಳಿರಲಿ, 'ದಿವ್ಯತೆ'ಯನ್ನು ಅನುಭವಿಸಿದರು; ಹೀಗೆ ಪಡೆದ ಆತ್ಮಾನುಭೂತಿಯ ಆಧಾರದಲ್ಲಿ ಸೌಂದರ್ಯಾನುಭೂತಿಯನ್ನು ಕಂಡುಕೊಂಡರು. ಇಂತಹ ಸಂತರ ವೈವಿಧ್ಯಮಯವಾದ ಸೌಂದರ್ಯಾಭಿವ್ಯಕ್ತಿಯೇ ನಮ್ಮ ಸಂಸ್ಕೃತಿಯ ಮೇರುಶಿಖರಗಳು; ನಾಮರೂಪಾತ್ಮಕ ಭೌತಿಕ ಪ್ರಪಂಚದ ಮಿತಿಯನ್ನು ಭೇದಿಸಿ ತಲೆಯೆತ್ತಿ ನಿಂತ, ಅವ್ಯಕ್ತ ನೆಲೆಯತ್ತ ನೋಡಿ ಬೆಳಗುತ್ತಿರುವ ಹಿಮಶಿಖರಗಳು.

ಜೂನ್ ತಿಂಗಳ ಕಾರ್ಯಕ್ರಮಗಳು

೧೦	ಭಾನುವಾರ	ಏಕಾದಶಿ
೨೩	ಶನಿವಾರ	ಏಕಾದಶಿ

ಭಗವಂತನ ಅರಿವು



❁ ಭಗವಂತನನ್ನು ಯಾರು ತಾನೇ ಅರಿತುಕೊಳ್ಳಬಲ್ಲರು? ನಾನು ಆ ಪ್ರಯತ್ನವನ್ನೇ ಮಾಡುವುದಿಲ್ಲ. ನಾನು ಆತನನ್ನು ಕೇವಲ 'ತಾಯಿ' ಅಂತ ಮಾತ್ರ ಕೂಗುತ್ತೇನೆ. ತಾಯಿ ತನ್ನ ಇಚ್ಛೆಯಿದ್ದಂತೆ ಮಾಡಲಿ. ಆಕೆಯ ಇಚ್ಛೆಯಿದ್ದರೆ ತಾನೇ ತೋರಿಸಿಕೊಡುತ್ತಾಳೆ — ತಾನು ಏನು ಎಂಬುದನ್ನು. ಇಲ್ಲದಿದ್ದರೆ ಇಲ್ಲ. ನನ್ನದು ಬೆಕ್ಕಿನ ಮರಿಯ ಸ್ವಭಾವ. ಕೇವಲ ಅದು, 'ಮಿಯಾವ್!' 'ಮಿಯಾವ್!' ಅಂತ ಕೂಗುತ್ತದೆ. ಉಳಿದ ತನ್ನ ಯೋಗಕ್ಷೇಮವನ್ನೆಲ್ಲಾ ತಾಯಿಗೆ ಬಿಟ್ಟುಬಿಟ್ಟಿರುತ್ತದೆ. ತಾಯಿಬೆಕ್ಕು ಕೆಲವು ವೇಳೆ ಮರಿಯನ್ನು ಅಡಿಗೆಮನೆಯಲ್ಲಿ, ಇನ್ನು ಕೆಲವು ವೇಳೆ ಯಜಮಾನನ ಹಾಸಿಗೆ ಮೇಲೆ ಇಡುತ್ತದೆ. ಚಿಕ್ಕ ಮಗುವಿಗೆ ತಾಯಿ ಮಾತ್ರ ಬೇಕು. ತನ್ನ ತಾಯಿಗೆ ಎಷ್ಟು ಐಶ್ವರ್ಯವಿದೆ ಎಂಬುದು ಅದಕ್ಕೆ ಗೊತ್ತಿರುವುದಿಲ್ಲ; ತಿಳಿಯಲಿಚ್ಛಿಸುವುದೂ ಇಲ್ಲ. ಅದಕ್ಕೆ ಕೇವಲ ಗೊತ್ತಿದೆ: 'ನನ್ನ ತಾಯಿ ಇದ್ದಾಳೆ; ಇನ್ನು ನನಗೇನು ಯೋಚನೆ?' ದಾಸಿಯ ಮಗುವಿಗೂ ಗೊತ್ತಿದೆ, ತನಗೊಬ್ಬಳು ತಾಯಿ ಇದ್ದಾಳೆ ಅಂತ. ಅದಕ್ಕೂ ಯಜಮಾನನ ಮಗುವಿಗೂ ಜಗಳ ಬಂತು ಎಂದರೆ, ಆಗ ಅದು ಹೇಳುತ್ತದೆ, 'ನನ್ನ ತಾಯಿ ಇದ್ದಾಳೆ, ನೋಡಿಕೊ. ಹೋಗಿ ಹೇಳಿ ಬಿಡುತ್ತೇನೆ.' ನನ್ನದು ಸಂತಾನ ಭಾವ.

❁ ಪ್ರತಿಯೊಬ್ಬನೂ ತನ್ನ ಬುದ್ಧಿಶಕ್ತಿಗನುಸಾರ ಭಾವಿಸುತ್ತಾನೆ, ಭಗವಂತನ ಸಂಬಂಧವಾಗಿ ತಾನು ಎಲ್ಲವನ್ನೂ ಅರಿತುಕೊಂಡುಬಿಟ್ಟಿದ್ದೇನೆ ಎಂಬುದಾಗಿ. ನೀವು ಹೇಳುತ್ತೀರಲ್ಲ, ಒಂದು ಇರುವೆ ಸಕ್ಕರೆಯ ಗುಡ್ಡದ ಹತ್ತಿರ ಹೋಗಿ ಅದರ ಒಂದು ಕಣ ತಿನ್ನುವುದರಲ್ಲೇ ಅದರ ಹೊಟ್ಟೆ ತುಂಬಿಹೋದರೂ ಭಾವಿಸುತ್ತದೆ, ಮುಂದಿನ ಸಲ ಬಂದು ಈ ಇಡೀ ಗುಡ್ಡವನ್ನೇ ತನ್ನ ಗೂಡಿಗೆ ಸಾಗಿಸಿಬಿಡುತ್ತೇನೆ ಎಂಬುದಾಗಿ.

❁ ಪರಬ್ರಹ್ಮನ ಸ್ವರೂಪ ಏನೆಂಬುದಾಗಿ ಬಾಯಲ್ಲಿ ಹೇಳಲಾಗುವುದಿಲ್ಲ. ಅದರ ಸಂಬಂಧವಾಗಿ ಮಾತೇ ಹೊರಡುವ ಹಾಗಿಲ್ಲ. ಅನಂತವನ್ನು ಯಾರು ತಾನೇ ಮಾತಿನಿಂದ ವರ್ಣಿಸಬಲ್ಲರು? ಹಕ್ಕಿ ಎಷ್ಟೇ ಎತ್ತರಕ್ಕೆ ಹಾರಿಹೋದರೂ, ಅದು ಹಾರಿಹೋಗಬೇಕಾದ ಎತ್ತರ ಇನ್ನೂ ಉಳಿದುಕೊಂಡೇ ಇರುತ್ತದೆ.

❁ ಬ್ರಹ್ಮಜ್ಞಾನಾವಸ್ಥೆಗೂ ಅತೀತವಾದ್ದು ಬೇರೊಂದಿದೆ. ಜ್ಞಾನ ದೊರೆತ ಮೇಲೆ ವಿಜ್ಞಾನ. ಯಾರಿಗೆ ಜ್ಞಾನದ ಅರಿವು ಇದೆಯೋ, ಆತನಿಗೆ ಅಜ್ಞಾನದ ಅರಿವೂ ಇರುತ್ತದೆ. ವಸಿಷ್ಠ ತನ್ನ ನೂರು ಮಕ್ಕಳನ್ನೂ ಕಳೆದುಕೊಂಡಿದ್ದಕ್ಕಾಗಿ ಶೋಕಾಕ್ರಾಂತನಾದ. ವಸಿಷ್ಠನಂಥ ಜ್ಞಾನಿ ಏಕೆ ಪುತ್ರಶೋಕಾಕ್ರಾಂತನಾಗಬೇಕು ಎಂಬುದಾಗಿ ಲಕ್ಷ್ಮಣ ರಾಮನನ್ನು ಕೇಳಿದಾಗ, ಆತ ಹೇಳಿದ: 'ನೀನು ಜ್ಞಾನಾಜ್ಞಾನಗಳಿಗೆ ಅತೀತನಾಗು.' ಯಾರಲ್ಲಿ ಜ್ಞಾನವು ಇರುತ್ತದೆಯೋ, ಆತನಲ್ಲಿ ಅಜ್ಞಾನವೂ ಇರುತ್ತದೆ. ಕಾಲಿಗೆ ಮುಳ್ಳು ಚುಚ್ಚಿಕೊಂಡರೆ, ಬೇರೊಂದು ಮುಳ್ಳನ್ನು ಹುಡುಕಿ ತಂದು ಅದನ್ನು ತೆಗೆಯಬೇಕಾಗುತ್ತದೆ; ಬಳಿಕ ಎರಡನೆಯ ಮುಳ್ಳನ್ನೂ ಬಿಸಾಡಿಬಿಡಬೇಕು.

❁ ವಿಜ್ಞಾನವೆಂದರೇನು? ಭಗವಂತನನ್ನು ವಿಶೇಷ ರೂಪದಿಂದ ಅರಿಯುವಿಕೆ. ಕಟ್ಟಿಗೆಯಲ್ಲಿ ಬೆಂಕಿಯಿದೆ ಎಂಬ ಅರಿವು ಮತ್ತು ದೃಢ ಶ್ರದ್ಧೆಗೆ 'ಜ್ಞಾನ' ಅಂತ ಹೆಸರು. ಅದರ ಬೆಂಕಿಯಿಂದ ಅನ್ನ ಬೇಯಿಸಿ ಉಂಡು ತಿಂದು, ಹೃಷ್ಟಪುಷ್ಟರಾಗುವುದಕ್ಕೆ 'ವಿಜ್ಞಾನ' ಅಂತ ಹೆಸರು. ಭಗವಂತನಿದ್ದಾನೆ ಎಂಬುದರ ಸ್ವಾತ್ಮಾನುಭವ ಹೊಂದುವುದಕ್ಕೆ 'ಜ್ಞಾನ' ಅಂತ ಹೆಸರು. ಆದರೆ ಆತನೊಡನೆ ಸಲಿಗೆಯಿಂದ ಮಾತುಕತೆಯಾಡುವುದಕ್ಕೆ, ಆತನೊಡನೆ ವಾತ್ಸಲ್ಯ, ಸಖ್ಯ, ದಾಸ್ಯ, ಮಧುರ — ಈ ಭಾವಗಳಿಂದ ಆನಂದಪಡುವುದಕ್ಕೆ 'ವಿಜ್ಞಾನ' ಅಂತ ಹೆಸರು. ಭಗವಂತನೇ ಈ ಜೀವಜಗತ್ತು ಎಲ್ಲವೂ ಆಗಿದ್ದಾನೆ ಎಂಬುದರ ಪ್ರತ್ಯಕ್ಷ ದರ್ಶನಕ್ಕೆ 'ವಿಜ್ಞಾನ' ಅಂತ ಹೆಸರು.

❁ ಭಗವಂತನಲ್ಲಿ ಭಕ್ತಿಯಿಲ್ಲದ ನಾಮಮಾತ್ರ ಪಂಡಿತರು ಅಸಂಬದ್ಧವಾಗಿ ಮಾತುಕತೆ ಆಡುತ್ತಾರೆ. ಪಂಡಿತ ಸಮಾಧ್ಯಾಯಿ, ತನ್ನ ಸಂಭಾಷಣೆಯ ಸಮಯದಲ್ಲಿ ಒಮ್ಮೆ ಹೇಳಿದ: 'ಭಗವಂತ ನೀರಸ, ನಾವು ನಮ್ಮ ಪ್ರೇಮ ಭಕ್ತಿಗಳಿಂದ ಆತನನ್ನು ಸರಸನನ್ನಾಗಿ ಮಾಡಿಕೊಳ್ಳಬೇಕು.' ಹಾಗೇ ನೋಡಿ! ವೇದ ಯಾರನ್ನು 'ರಸಸ್ವರೂಪ' ಅಂತ ಘೋಷಿಸುತ್ತಿದೆಯೋ ಆತನನ್ನು 'ನೀರಸ' ಅಂತ ವರ್ಣಿಸುವುದು! ಇದು ತೋರಿಸುತ್ತದೆ, ಆ ಪಂಡಿತನಿಗೆ ಭಗವಂತನ ನಿಜಸ್ವರೂಪ ಏನು ಎಂಬುದು ಸ್ವಲ್ಪವೂ ಗೊತ್ತಿಲ್ಲ ಎಂಬುದನ್ನು. ಅದಕ್ಕಾಗಿಯೆ ಆತನ ಮಾತಿನಲ್ಲಿ ಅಸಂಬದ್ಧತೆ.

❁ ಪ್ರತಿಯೊಬ್ಬನೂ ತನ್ನ ತನ್ನ ಭಾವದಂತೆ ಭಗವಂತನನ್ನು ನೋಡುತ್ತಾನೆ. ಉದಾಹರಣೆಗೆ ತಾಮಸಿಕ ಭಕ್ತನನ್ನು ತೆಗೆದುಕೊಳ್ಳಿ. ಆತ ಭಾವಿಸುತ್ತಾನೆ, ಭಗವತಿ ಆಡನ್ನು ತಿನ್ನುತ್ತಾಳೆ ಎಂದು. ಅದಕ್ಕಾಗಿ ಆಕೆಗೆ ಬಲಿಯನ್ನು ಅರ್ಪಿಸುತ್ತಾನೆ. ಹಾಗೆಯೇ ರಾಜಸಿಕ ಭಕ್ತ ಅನೇಕ ಬಗೆಯ ಪಲ್ಯ ಮತ್ತು ಅನ್ನವನ್ನು ಅರ್ಪಿಸುತ್ತಾನೆ. ಆದರೆ ಸಾತ್ತ್ವಿಕ ಭಕ್ತನಲ್ಲಿ ಯಾವ ವಿಧವಾದ ಬಾಹ್ಯಪೂಜೆಯ ಆಡಂಬರವಿರುವುದಿಲ್ಲ. ಆತ ಪೂಜೆ ಮಾಡುತ್ತಿರುವುದು ಜನರಿಗೆ ಗೊತ್ತೇ ಇರುವುದಿಲ್ಲ. ಹೂವು ಇಲ್ಲದೆ ಇತ್ತು ಎಂದರೆ ಬಿಲ್ವಪತ್ರೆ, ಗಂಗಾಜಲ ಇವುಗಳಿಂದಲೇ ಪೂಜೆ ಮಾಡಿಬಿಡುತ್ತಾನೆ. ಆತನ ನೈವೇದ್ಯಕ್ಕೆ ಒಂದು ಹಿಡಿ ಬೆಲ್ಲದ ಪುರಿಯೋ ಅಥವಾ ಒಂದೆರಡು ಬತ್ತಾಸವೋ ಇದ್ದರೆ ಸಾಕು. ಅಪರೂಪಕ್ಕೆ ಒಮ್ಮೊಮ್ಮೆ ಭಗವಂತನಿಗೆ ಪಾಯಸ ಮಾಡಿ ಅರ್ಪಿಸುತ್ತಾನೆ.

ಶ್ರೀರಾಮಕೃಷ್ಣ ವಚನವೇದದಿಂದ

ಇಳಿ ವಯಸ್ಸಿನಲ್ಲಿ ಆನಂದವನ್ನು ಪಡೆಯುವುದು ಹೇಗೆ

ಸ್ವಾಮಿ ರಂಗನಾಥಾನಂದ

ಪ್ರಸ್ತಾವನೆ: ಸ್ವಾಮಿ ರಂಗನಾಥಾನಂದರು ರಾಮಕೃಷ್ಣ ಮಹಾಸಂಘದ ೧೩ನೇ ಪರಮಾಧ್ಯಕ್ಷರಾಗಿದ್ದರು. ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಹೊಂದಿದ್ದ ವಾಗ್ಮಿಗಳಾಗಿದ್ದರು. ಅವರ ಪ್ರಭಾವಶಾಲೀ ಭಾಷಣಗಳು ಭಾರತ ಹಾಗೂ ವಿದೇಶಗಳಲ್ಲಿನ ಸಾವಿರಾರು ಮಂದಿ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದವು. ಅವರು ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳು: *The Message of the Upanishads* (ಕನ್ನಡದಲ್ಲಿ: 'ಉಪನಿಷತ್ತುಗಳ ಸಂದೇಶ'), *A Piligrim looks at the World, Eternal Values for a Changing Society (4 Vol.s)* ('ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು' – ೪ ಸಂಪುಟಗಳಲ್ಲಿ), *Vedanta and the future of Mankind* ಹಾಗೂ *Social Responsibilites of Public Administrators.* ಇತ್ತೀಚೆಗೆ ಭಗವದ್ಗೀತೆ ಹಾಗೂ ಬೃಹದಾರಣ್ಯಕ ಉಪನಿಷತ್ತುಗಳ ಮೇಲೆ ಬರೆದಿರುವ ವಿವರಣಾತ್ಮಕವಾದ ಗ್ರಂಥಗಳೂ ಕೂಡ ಗಮನಾರ್ಹವಾಗಿವೆ.

೧೯೮೬ರಲ್ಲಿ ಸ್ವಾಮೀಜಿಯವರು ನವದೆಹಲಿಗೆ ಭೇಟಿಯಿತ್ತ ಸಂದರ್ಭದಲ್ಲಿ ವಸಂತ ವಿಹಾರದಲ್ಲಿರುವ 'ರಾಮಕೃಷ್ಣ ಕುಟೀರ'ದಲ್ಲಿ (ಶ್ರೀರಾಮಕೃಷ್ಣ ಆಶ್ರಮದ ಆತ್ಮೀಯ ಭಕ್ತರಾದ ಶ್ರೀ ಸಿ.ಎಂ. ಮಲಿಕ್ ಅವರ ನಿವಾಸ) ನವೆಂಬರ್ ೨೬ರಂದು ನೀಡಿದ ಪ್ರವಚನವೇ **'ಇಳಿವಯಸ್ಸಿನಲ್ಲಿ ಆನಂದವನ್ನು ಪಡೆಯುವುದು ಹೇಗೆ.'** *(ಕನ್ನಡಾನುವಾದ: ಸ್ವಾಮಿ ಜ್ಞಾನಯೋಗಾನಂದ)*

ಭಾಗ ೧

ಕಳೆದ ಬಾರಿ ನಾನು ಇಲ್ಲಿ ಭಾಷಣ ಮಾಡಿದಾಗ ಬಹಳ ಜನ ಸೇರಿದ್ದರು ಎಂದು ಶ್ರೀ ಮಲಿಕ್ ಅವರು ತಿಳಿಸಿದರು. ಆಧ್ಯಾತ್ಮಿಕ ಜೀವನದ ಸ್ವರೂಪ ಎಂತಹದು, ಅದರ ಹಿಂದಿರುವ ತತ್ತ್ವವೇನು ಎಂಬುದನ್ನು ತಿಳಿದುಕೊಳ್ಳಲು ನಮ್ಮ ಜನರಿಗೆ ವಿಶೇಷ ಆಸಕ್ತಿಯಿದೆ ಎಂಬುದನ್ನು ಇದು ಸೂಚಿಸುತ್ತದೆ. ಹಲವು ದೇಶಗಳಲ್ಲಿ ವೃದ್ಧಾಪ್ಯ ವೆಂದರೆ ಒಂದು ರೀತಿಯ ಹೊರೆ, ಅತ್ಯಂತ ಬೇಜಾರಿನದು, ಯಾವುದೇ ಸ್ವಾರಸ್ಯವಿಲ್ಲದ ಒಂದು ಅವಸ್ಥೆ. ಅದನ್ನು ಬಾಹ್ಯ ವಸ್ತುಗಳಿಂದ – ವಿಶೇಷವಾಗಿ ಮದ್ಯಪಾನದ ಮೂಲಕ ಸ್ವಾರಸ್ಯ ಕರವನ್ನಾಗಿ ಮಾಡಲು ಪ್ರಯತ್ನಿಸುತ್ತಾರೆ. ಇತ್ತೀಚೆಗೆ ಅದಕ್ಕಾಗಿ ಮಾದಕ ದ್ರವ್ಯವನ್ನು ಸೇವಿಸುತ್ತಾರೆ. ಹೆಚ್ಚಾಗಿ ಅಲ್ಲಿ ಧೂಮಪಾನ ಇದ್ದೇ ಇದೆ. ನಾನು ಅಮೆರಿಕದಲ್ಲಿ ಕೆಲವು ವೃದ್ಧಾಶ್ರಮಗಳಿಗೆ ಭೇಟಿ ಕೊಟ್ಟಿದ್ದೆ. ಆದರೆ ಅಲ್ಲಿರುವವರಿಗೆ ಯಾವುದೇ ರೀತಿಯ ಆನಂದವಿದ್ದಂತೆ ನನಗೆ ಕಂಡುಬರಲಿಲ್ಲ. ಅವರಿಗಾಗುವ ಬೇಜಾರನ್ನು ಕೊಲ್ಲಲು ಅವರು ಎಲ್ಲ ರೀತಿಯ ಬಾಹ್ಯವಸ್ತುಗಳನ್ನು ಅವಲಂಬಿಸುತ್ತಿದ್ದರು — ಆದರೆ ಅವು ಖಂಡಿತ ಒಳ್ಳೆಯವಲ್ಲ. ಭಾರತದಲ್ಲಿ ಹೀಗಾಗಬಾರದು. ಏಕೆಂದರೆ ನಮ್ಮಲ್ಲಿ ಅದ್ಭುತವಾದ ಆಧ್ಯಾತ್ಮಿಕ ಪರಂಪರೆಯಿದೆ. ಈ ಪರಂಪರೆಯಲ್ಲಿ ನಮಗೆ ಆಸಕ್ತಿಯಿದೆ.

ಭಾರತೀಯ ಆಧ್ಯಾತ್ಮಿಕ ಪರಂಪರೆಯ ಬಗ್ಗೆ ಅನೇಕ ಮಂದಿ ಆಸಕ್ತಿ ಹೊಂದುತ್ತಿದ್ದಾರೆ. ಇದರಿಂದಾಗಿ, ನಾವು ವೃದ್ಧರಾಗಿದ್ದರೂ ದುರ್ಬಲರಾಗಿದ್ದರೂ ಸರಿ, ನಮ್ಮ ಮನಸ್ಸು ಆನಂದದಿಂದ ಇರಬಹುದು. ಉಪನಿಷತ್ತುಗಳೇ ಮೊದಲಾದ ಹಾಗೂ ಇತರ ಗ್ರಂಥಗಳ ಮೂಲಕ ನಮಗೆ ನೀಡಲಾಗಿರುವ, ಮಾನವನ ಬೆಳವಣಿ



ಗೆಯ ಅಸಾಧಾರಣ ತತ್ತ್ವದಿಂದ ಇದು ಸಾಧ್ಯವಾಗುವುದು. ಮಾನವನ ಸಮಗ್ರ ಬೆಳವಣಿಗೆ ಹಾಗೂ ಪರಿಪೂರ್ಣತೆಗಾಗಿ ಇರುವ ಸುಂದರವಾದ ದರ್ಶನಶಾಸ್ತ್ರವನ್ನು ನಾವು 'ವೇದಾಂತ' ವೆಂಬ ಪದದಿಂದ ಕರೆಯುತ್ತೇವೆ. ಉಪನಿಷತ್ತುಗಳು, ಗೀತೆ, ಬುದ್ಧನ ಉಪದೇಶಗಳು, ಶ್ರೀ ಶಂಕರಾಚಾರ್ಯರ ಭಾಷ್ಯಗಳು ಹಾಗೂ ಈಚೆಗೆ ಶ್ರೀರಾಮಕೃಷ್ಣರ, ಸ್ವಾಮಿ ವಿವೇಕಾನಂದರ ಹಾಗೂ ರಮಣ ಮಹರ್ಷಿಗಳಂತಹ ಮಹಾತ್ಮರ ಉಪದೇಶಗಳ ರೂಪ ದಲ್ಲಿ ಇದನ್ನು ನಾವು ಕಾಣಬಹುದು.

ಪಾಶ್ಚಾತ್ಯ ತತ್ತ್ವಶಾಸ್ತ್ರ ಹಾಗೂ ನಮ್ಮ ತತ್ತ್ವಶಾಸ್ತ್ರ ಇವುಗಳ ದೃಷ್ಟಿ ಕೋನಗಳಲ್ಲಿರುವ ಭಿನ್ನತೆಯೆಂದರೆ, ನಮ್ಮ ತತ್ತ್ವಗಳನ್ನು ನೀವು ಪ್ರಶ್ನಿಸಬಹುದು, ಅದನ್ನು ಪರೀಕ್ಷೆಗೆ ಒಳಪಡಿಸಬಹುದು. ಆದರೆ ಪಶ್ಚಿಮದಲ್ಲಿ ತತ್ತ್ವಗಳಿರುತ್ತವೆ – ಅವುಗಳನ್ನು ಯಾರೂ ಪ್ರಶ್ನಿಸು ವಂತಿಲ್ಲ. ಆದ್ದರಿಂದ ಅಲ್ಲಿ ವೈಚಾರಿಕ ಮನಸ್ಸು ತೃಪ್ತವಾಗದು. ಆದರೆ ಭಾರತದಲ್ಲಿ ಅತ್ಯಂತ ವೈಚಾರಿಕ ಮನಸ್ಸುಗಳೂ ಕೂಡ ಪ್ರಶ್ನಿಸುವ ಮೂಲಕ ತೃಪ್ತಿ ಹೊಂದಬಹುದು; ಅದಕ್ಕೆ ಸೂಕ್ತವಾದ ಉತ್ತರ ಲಭಿಸುವುದು. ಉದಾಹರಣೆಗೆ, ಶಂಕರಾಚಾರ್ಯರ **'ವಿವೇಕಚೂಡಮಣಿ'**ಯನ್ನೇ ತೆಗೆದುಕೊಳ್ಳಿ. ಅದೊಂದು ಅದ್ಭುತ ವಾದ ಗ್ರಂಥ. ಅಲ್ಲಿ ಶಿಷ್ಯನೊಬ್ಬ ಗುರುವಿಗೆ ಮಾನವನ ಜೀವನದ ಸ್ವಭಾವವೇನು, ನಮ್ಮ ನಿಜವಾದ ಗುರಿ ಯಾವುದು ಮೊದಲಾದ ಪ್ರಶ್ನೆಗಳನ್ನು ಹಾಕುತ್ತಾನೆ. ಅದಕ್ಕೆ ಉತ್ತರವಾಗಿ ಗುರು ಹಂತಹಂತ ವಾಗಿ ಉತ್ತರಿಸುತ್ತಾ, ಶಿಷ್ಯನ ನೈತಿಕ ಬೆಳವಣಿಗೆಯನ್ನೂ ಮಾಡು ತ್ತಾನೆ. ಅನಂತರ ಆ ಶಿಷ್ಯನಲ್ಲಿ ತುಸು ಆಧ್ಯಾತ್ಮಿಕ ಹಸಿವು ಜಾಗೃತ ವಾಗುವುದು; ಅದರ ನಂತರ ಅವನು ಅನುಸರಿಸಬೇಕಾದ ವಿಧಾನ ಗಳನ್ನು ಕುರಿತಂತೆ ಅನ್ವೇಷಣೆ ಆರಂಭವಾಗುವುದು. ಅಂತಿಮ ವಾಗಿ ಆ ವಿಧಾನಗಳು ಅವನನ್ನು ಸಾಕ್ಷಾತ್ಕಾರದತ್ತ ಕೊಂಡೊಯ್ಯು ವುವು. **'ವಿವೇಕಚೂಡಾಮಣಿ'**ಯಲ್ಲಿ ೫೮೦ ಶ್ಲೋಕಗಳಿವೆ. ಅತ್ಯಂತ ಸುಂದರವಾದ ಸಂಸ್ಕೃತ ಭಾಷೆಯಲ್ಲಿ ಮಾನವನ ಆಧ್ಯಾ ತ್ಮಿಕ ಜೀವನದ ಅದ್ಭುತ ವಿವರಣೆ ಅಲ್ಲಿದೆ. ಈ ಗ್ರಂಥದ ಮೇಲೆ ನಾನು ೧೨ ತರಗತಿಗಳಲ್ಲಿ ನೀಡಿರುವ ಉಪನ್ಯಾಸಗಳು ಇಂದು ಧ್ವನಿಸುರಳಿಗಳ ರೂಪದಲ್ಲಿ ಲಭ್ಯವಾಗಿವೆ. ಅವುಗಳನ್ನು ಕೇಳು ತ್ತಿರುವಾಗ ಅಲ್ಲಿ ಗ್ರಂಥದ ಪ್ರತಿಯೊಂದನ್ನೂ ವಿವರಿಸಿದ್ದನ್ನು ಕಾಣ ಬಹುದು. ಹೀಗೆ ಅತ್ಯುನ್ನತ ಭಾವನೆಗಳನ್ನು ಕುರಿತು ಚಿಂತಿಸು ತ್ತಿದ್ದರೆ ನಮ್ಮ ಜೀವನ ಹೆಚ್ಚು ಅರ್ಥಪೂರ್ಣವೂ, ಹೆಚ್ಚು ಆನಂದ ದಾಯಕವೂ ಆಗುವುದು. ಯಾವುದೇ ಬಾಹ್ಯವಸ್ತುಗಳ ಮೂಲಕ ನಮ್ಮ ಬೇಜಾರನ್ನು ನೀಗಲು ಮಾಡುವ ನಮ್ಮ ಪ್ರಯತ್ನಗಳೆಲ್ಲವೂ ನಮ್ಮನ್ನು ದುರ್ಬಲಗೊಳಿಸುವುವು. ಅದರಿಂದ ನಮಗೆ ಯಾವುದೇ ಆನಂದ ದೊರಕದು. ಆದರೆ ನಮ್ಮ ನೈಜ ಸ್ವಭಾವವೇ ಆಗಿರುವ ನಮ್ಮ ಅನಂತ ಆತ್ಮನೊಂದಿಗೆ ನಾವು ಸಂಪರ್ಕ ಬೆಸೆದಾಗ ನಮ್ಮೊಳ ಗಿಂದಲೇ ಆಂತರಿಕವಾದ ಆನಂದ ಹೊರಹೊಮ್ಮುವುದು. ಇಲ್ಲಿ ಯಾವುದೇ ಬಾಹ್ಯವಸ್ತುವಿನ ಉತ್ತೇಜನದ ಅಗತ್ಯವಿಲ್ಲ. ಬಾಹ್ಯ ವಸ್ತುಗಳಂತೂ ಬಹಳ ದುಬಾರಿ ಕೂಡ. ಈ ಕಾರಣದಿಂದಾ ಗಿಯೇ, ಮಾದಕದ್ರವ್ಯಗಳನ್ನು ಸೇವಿಸುವವರು ಸಾಮಾನ್ಯವಾಗಿ ಕಳ್ಳರಾಗಿರುತ್ತಾರೆ. ಅವರು ತಮ್ಮ ತಂದೆಯಿಂದಲೇ ಕದಿಯುತ್ತಾರೆ. ಈ ಸಮಸ್ಯೆಯಿಂದ ನಮ್ಮನ್ನು ಪಾರುಮಾಡಬಲ್ಲ ಉಪದೇಶ ವೊಂದು ಇಲ್ಲಿದೆ. ಆದರೆ ಅದನ್ನು ನಾವು ಆಚರಣೆಗೆ ತರಬೇಕು. ಇಲ್ಲಿಯತನಕ ನಮಗದರ ಅಗತ್ಯವಿರಲಿಲ್ಲ; ಏಕೆಂದರೆ ನಾವು ಊಳಿಗಮಾನ್ಯ ಸಮಾಜದಲ್ಲಿ ಬದುಕಿದ್ದೆವು. ಆದರೆ ಈಗ ಅದರ ಅಗತ್ಯವಿದೆ, ಎಲ್ಲರಿಗೂ ಅಗತ್ಯವಿದೆ. ಆಗಾಗ ಇಂಥ ಸಮಾರಂಭ ಗಳನ್ನು ನಡೆಸುವುದರ ಪ್ರಾಮುಖ್ಯತೆ ಇದೇ ಆಗಿದೆ. ದೈನಂದಿನ ಬದುಕಿನಲ್ಲಿ ಯಾವುದಾದರೊಂದು ಬಗೆಯ ಆಧ್ಯಾತ್ಮಿಕ ಸಾಧನೆ, ತುಸು ಧ್ಯಾನ ಹಾಗೂ ಭಜನೆ – ಇವೆಲ್ಲವೂ ನಮ್ಮ ಬದುಕನ್ನು ಶ್ರೀಮಂತ ಗೊಳಿಸುವ ಅನುಭವಗಳು. ಈಚೆಗೆ ನಮ್ಮ ಭಜನ್ ಸಂಸ್ಕೃತಿ ಪಾಶ್ಚಾತ್ಯ ಜಗತ್ತನ್ನು ಆಕ್ರಮಿಸುತ್ತಿದೆ. ಅಲ್ಲಿ ಎಲ್ಲರೂ ಭಜನೆಗಾಗಿ ಹಾತೊರೆಯುತ್ತಾರೆ. ಕಾರುಗಳಲ್ಲಿ ಅವರು ಭಜನೆಯ ಕ್ಯಾಸೆಟ್ಟುಗಳನ್ನು ಹಾಕುತ್ತಾರೆ. ನನ್ನನ್ನು ಕಾರುಗಳಲ್ಲಿ ಕರೆದೊಯ್ಯು ವಾಗ ಅವರು ಈ ಭಜನೆಗಳನ್ನು ಕೇಳಿಸುತ್ತಾರೆ. ಎಲ್ಲ ಮನೆಗಳಲ್ಲೂ ನಾನು ಭಜನೆಯ ಕ್ಯಾಸೆಟ್ಟುಗಳನ್ನು ಕಂಡಿದ್ದೇನೆ. ಇದು ಅಲ್ಲೆಲ್ಲ ತೀರ ಸಾಮಾನ್ಯ.

ಭಜನೆಯೆಂದರೆ ಅದೊಂದು ಅಸಾಧಾರಣ ಅನುಭವ. ನಿಮಗೆ ಬ್ರಹ್ಮಜ್ಞಾನವುಂಟಾಗದಿದ್ದರೆ, ಕಡೇಪಕ್ಷ ಭಜನೆಗಳನ್ನು ಹಾಡುವ ಮೂಲಕ ಬ್ರಹ್ಮಾನಂದವನ್ನು ಹೊಂದಬಹುದಲ್ಲ. ಆದ್ದರಿಂದ, ಭಜನೆಯೆಂಬುದು ಒಂದು ಆಧ್ಯಾತ್ಮಿಕ ಅನುಭವ. ಧ್ಯಾನವೂ ಆಧ್ಯಾತ್ಮಿಕ ಅನುಭವವೇ. ಕೇವಲ ದೇವಸ್ಥಾನಕ್ಕೆ ಹೋಗುವುದು, ತೆಂಗಿನಕಾಯಿ ತೆಗೆದುಕೊಂಡು ಹೋಗುವುದು, ಗಂಟೆ ಬಾರಿಸುವುದು ಇತ್ಯಾದಿಗಳು ಆಧ್ಯಾತ್ಮಿಕ ಅನುಭವವಲ್ಲ. ಆದರೆ ಭಜನೆಯಲ್ಲಿ ಆಧ್ಯಾತ್ಮಿಕ ಅನುಭವವಿದೆ. ಇಡೀ ಜಗತ್ತು ಅಂಥ ಆಧ್ಯಾತ್ಮಿಕ ಅನುಭವವನ್ನು ಅರಸುತ್ತಿದೆ.

ಮಾನವನಿಗೆ ಮೂರು ಬಗೆಯ ಆನಂದಗಳು ದೊರಕಬಲ್ಲವು ಎಂದು ಶ್ರೀರಾಮಕೃಷ್ಣರು ತಮ್ಮ ಉಪದೇಶಗಳಲ್ಲಿ ಹೇಳುತ್ತಾರೆ. *('ಶ್ರೀರಾಮಕೃಷ್ಣ ವಚನವೇದ', ಭಾಗ ೧, ಪು ೫೧೮)* ಇಲ್ಲಿ ಅವರು ಬಳಸಿರುವ ಪದ **'ಆನಂದ'**. ಪ್ರತಿಯೊಬ್ಬರಿಗೂ ಮೂರು ಬಗೆಯ ಆನಂದಗಳು ಉಂಟಾಗಬಲ್ಲವು. ಮೊದಲನೆಯದು **ವಿಷಯಾನಂದ.** 'ವಿಷಯ'ವೆಂದರೆ ಇಂದ್ರಿಯಗಳಿಗೆ ವಿಷಯ ವಾಗುವ ವಸ್ತುಗಳು, ತಿನ್ನುವುದು ಮೊದಲಾದ ಇಂದ್ರಿಯಾನು ಭವಗಳು. ಇದೇ **'ವಿಷಯಾನಂದ'** – ಬಾಹ್ಯವಸ್ತುಗಳಿಂದ ಲಭಿ ಸುವ ಆನಂದ. ವೇದಾಂತದಲ್ಲಿ ನಾವು ವಿಷಯಾನಂದವನ್ನು ಕೀಳಾಗಿ ಭಾವಿಸುವುದಿಲ್ಲ. ಚಿಕ್ಕ ಮಗುವಿಗೆ ಬರೀ ವಿಷಯಾನಂದ ವೊಂದೇ ಬೇಕು; ಅದಕ್ಕೆ ಬೇರೇನೂ ಗೊತ್ತಿಲ್ಲ. ಎಲ್ಲರೂ ವಿಷಯಾ ನಂದವನ್ನು ಹೊಂದಬಹುದು. ಆದರೆ ಅದಕ್ಕಿಂತ ಉನ್ನತ ಹಂತದ ಆನಂದಗಳಿವೆ ಎಂಬುದನ್ನು ತಿಳಿದಿರಬೇಕು. ವೇದಾಂತ ಹೀಗೆ

ಹೇಳುತ್ತದೆ. ಮಗುವಿಗೆ ವಿಷಯಾನಂದ ಮಾತ್ರವೇ ಇಷ್ಟವಾಗುವುದು; ಆದರೆ ಅದಕ್ಕೆ ಇತರ ಆನಂದಗಳೂ ಲಭ್ಯವಾಗಬೇಕು. ಶಾಲೆಗೆ ಹೋಗುವುದು, ಜ್ಞಾನ ಸಂಪಾದನೆ ಮಾಡುವುದು ಇತ್ಯಾದಿ. ಭೌತಿಕ ಹಂತದ ವಿಷಯಾನಂದದಿಂದ ಅದು ಆರಂಭಿಸಲಿ. ಎರಡನೆಯದೇ **ಭಜನಾನಂದ.** ನಮ್ಮ ಅಂತರಂಗದಿಂದ ಹೊರಹೊಮ್ಮುವ ಅದ್ಭುತವಾದ ಆನಂದವಿದು; ಬಾಹ್ಯದಿಂದಲ್ಲ. ಈ ಆನಂದದ ಒಂದು ಭಾಗ ಬರುವುದು ಭಜನೆ, ಧ್ಯಾನ, ಶಾಸ್ತ್ರಾಧ್ಯಯನ ಅಥವಾ ವೈಜ್ಞಾನಿಕ ಸಂಶೋಧನೆಯಿಂದ ಕೂಡ. ಈ ಆನಂದಗಳೆಲ್ಲವೂ ನಮ್ಮ ಒಳಗಿನಿಂದಲೇ ಬರುತ್ತವೆ. ಇದನ್ನೇ ಭಜನಾನಂದ ಎನ್ನುತ್ತೇವೆ. ಇದರ ಸಾರಾಂಶವಿಷ್ಟೆ: ಭಗವಂತನ ನಾಮವನ್ನು ಸ್ತುತಿಸಿ ಹಾಡುವುದು. ನಮ್ಮ ಸಂತರುಗಳೆಲ್ಲ ಭಜನೆಗಳನ್ನು ಹಾಡಿದ್ದಾರೆ: ಗುರುನಾನಕ್ ಹಾಡಿದ್ದಾರೆ, ಅದೇ ರೀತಿ ಇತರ ಸಿಕ್ಖ್ ಗುರುಗಳೂ ಕೂಡ ಹಾಡಿದ್ದಾರೆ. ಅಂತೆಯೇ ಅಸ್ಸಾಮಿನಲ್ಲಿ ಶಂಕರದೇವ, ಉತ್ತರ ಭಾರತದಲ್ಲಿ ಮೀರಾಬಾಯಿ, ಸೂರದಾಸ, ದಕ್ಷಿಣದಲ್ಲಿ ಹಲವಾರು ಸಂತರುಗಳು ಕೂಡ. ಅವರ ಹಾಡುಗಳು ನಮ್ಮ ದೇಶಕ್ಕೆ ಅಭೂತಪೂರ್ವವಾದ ಆಧ್ಯಾತ್ಮಿಕ ಶಿಕ್ಷಣ ಹಾಗೂ ಶಕ್ತಿಯನ್ನು ನಿರ್ಮಿಸಿಕೊಟ್ಟಿವೆ. ಭಾರತದಾದ್ಯಂತ ಅವು ಹರಡಿವೆ; ಪ್ರತಿಯೊಬ್ಬರನ್ನೂ ಅವು ಪ್ರಭಾವಿಸಿವೆ. ಆದ ಕಾರಣವೇ ದೆಹಲಿಯಲ್ಲಿರುವ ಅಮೆರಿಕದ ರಾಯಭಾರಿಗಳಾದ ಕೆನೆತ್ ಗಾಲ್‌ಬ್ರೈತ್ ಒಂದು ಸಲ ಯೋಜನಾ ಆಯೋಗಕ್ಕೆ ಬಂದಿದ್ದಾಗ ಆಯೋಗದ ಸದಸ್ಯರಿಗೆ ಹೀಗೆಂದರು: ''ನಾನು ಜಗತ್ತಿನಲ್ಲೆಡೆ ಭೀಕರ ಬಡತನವನ್ನು ಕಂಡಿದ್ದೇನೆ. ಭಾರತದಲ್ಲೂ ಬಡತನವನ್ನು ಕಂಡಿದ್ದೇನೆ. ಆದರೆ ಭಾರತದಲ್ಲಿನ ಬಡತನವೆಂದರೆ ಬಹಳ ವಿಶೇಷ – ಏಕೆಂದರೆ, ಇಲ್ಲಿನ ಬಡಜನರ ಕಣ್ಣುಗಳಲ್ಲಿ ಬೆಳಕು ಮಿನುಗುತ್ತಿರುತ್ತದೆ; ಅದನ್ನು ನಾನು ಬೇರೆಲ್ಲೂ ಕಂಡಿಲ್ಲ. ಭಾರತದಲ್ಲಿ ಮಾತ್ರ ಬಡತನ ಒಂದು ಅಪರಾಧವಲ್ಲ, ಬೇರೆ ಎಲ್ಲ ದೇಶಗಳಲ್ಲೂ ಬಡತನವೆಂದರೆ ಕುಡಿತ, ಅಪರಾಧ ಹಾಗೂ ಪ್ರತಿಕ್ಷಣದ ಉದ್ವೇಗ.''

ಡೊಮಿನಿಕ್ ಲ್ಯಾಪಿಯರ್ ಎಂಬುವನು ಕಲ್ಕತ್ತದ ಕೊಳಗೇರಿಗಳ ಬಗ್ಗೆ 'The City of Joy' ಎಂಬ ಪುಸ್ತಕವನ್ನು ರಚಿಸಿದ್ದಾನೆ. ಅನಿರೀಕ್ಷಿತವಾಗಿ ಯಾರೋ ಈ ಪುಸ್ತಕವನ್ನು ನನಗೆ ಕೊಟ್ಟರು. ಪ್ರಯಾಣ ಮಾಡುತ್ತಿದ್ದಾಗ ನಾನು ಈ ಪುಸ್ತಕವನ್ನು ಓದಿದೆ. ತುಂಬ ಕುತೂಹಲಕರವಾದ ಪುಸ್ತಕ. ಕಲ್ಕತ್ತದ ಕೊಳಗೇರಿಯಲ್ಲಿ ಎಲ್ಲವೂ ಭಯಾನಕ; ಪ್ರತಿಯೊಂದು ದೃಷ್ಟಿಕೋನದಿಂದ ನೋಡಿದಾಗಲೂ ಕೂಡ. ಆದರೆ ಅಲ್ಲಿ ಜನರು ಆನಂದವಾಗಿದ್ದಾರೆ, ಬರೀ ಆನಂದವೇ! ಎಲ್ಲೆಲ್ಲೂ ಕೊಳೆ ತುಂಬಿದೆ, ಆದರೆ ಮಕ್ಕಳ ನಗುವೋ ನಗು. ಇಡೀ ಪುಸ್ತಕವೇ ಈ ಒಂದು ವಿಷಯವನ್ನು ಕುರಿತಾಗಿದೆ. ಕಲ್ಕತ್ತದ ಆ ಭಾಗದ ಹೆಸರು 'ಆನಂದನಗರ'ವೆಂದು. ನಾನು ಇದನ್ನು ಹೇಳುವುದೇಕೆಂದರೆ, ನಮ್ಮ ಬಡಜನರ ಜೇಬು ಖಾಲಿಯಾಗಿದ್ದಿರಬಹುದು; ಆದರೆ ಅವರ ಹೃದಯ ಖಾಲಿಯಲ್ಲ. ಅವರು ಪರಸ್ಪರ ಸಹಾಯ ಮಾಡುತ್ತಾರೆ. ನೀವು ಅವರ ಬಳಿಗೆ ಹೋದರೆ, ನಿಮಗೂ ಸಹಾಯ ಮಾಡುತ್ತಾರೆ. ಅವರು ಎಷ್ಟೊಂದು ಉದಾರಿಗಳೆಂಬುದನ್ನು ತೋರಿಸಿಕೊಡುವ ಹಲವು ಸಂದರ್ಭಗಳು ಈ ಲೇಖಕನಿಗೆ ಲಭಿಸಿದ್ದವು. ಉದಾರತೆ, ಅನುಕಂಪ ಹಾಗೂ ಆದರ — ಇವನ್ನು ಬಿಟ್ಟರೆ ಇನ್ನೇನು ಬೇಕಾಗಿದೆ? ಇವು ಸಂಸ್ಕೃತಿಯ ಗುರುತುಗಳು. ಆದ್ದರಿಂದ ನಮ್ಮ ಜನರು (ದಕ್ಷಿಣ ಹಾಗೂ ಉತ್ತರ ಭಾರತದ ಸಂತರು ನೀಡಿದ) ಆ **ಭಜನಾನಂದ**ವನ್ನು ಉಳಿಸಿಕೊಳ್ಳಬೇಕು. ಅದು ಬರುವುದು ಒಳಗಿನಿಂದ. ನಾವು ಚಿಕ್ಕ ಬಾಲಕ-ಬಾಲಕಿಯರಾಗಿದ್ದಾಗ ಕೆಲವೊಂದು ಬಗೆಯ **ಭಜನಾನಂದ**ವನ್ನು ಅನುಭವಿಸಿರುತ್ತೇವೆ. ಆದರೆ ನಮ್ಮ ಎಲ್ಲ ಜವಾಬ್ದಾರಿಗಳೂ ಮುಗಿದಿರುವಾಗ, ನಮ್ಮ ದೈನಂದಿನ ಒತ್ತಡಗಳಿಂದ ನಾವು ನಿವೃತ್ತಿ ಹೊಂದಿದ್ದಾಗ ನಾವು ಇದನ್ನು ನಿಜವಾಗಿ ಅನುಭವಿಸಬಲ್ಲೆವು. ನಾವೇಕೆ ಇಂದು **ಭಜನಾನಂದ**ವನ್ನೇ ನೆಚ್ಚಿಕೊಳ್ಳಬೇಕು? ಏಕೆಂದರೆ, ಮೂರನೇ ಹಂತದ ಆನಂದ ತುಂಬಾ ಉನ್ನತವಾದುದು. ಅದನ್ನು '**ಬ್ರಹ್ಮಾನಂದ**'ವೆನ್ನುತ್ತಾರೆ. ಭಗವದ್ ಸಾಕ್ಷಾತ್ಕಾರವಾದಾಗ ನಿಮಗೆ ಅಸಾಧಾರಣ ಆನಂದದ ಅನುಭವವಾಗುವುದು. ಆದರೆ ಭಜನಾನಂದ ನಮಗೆಲ್ಲ ಲಭಿಸಬಹುದು; ಆದ ಕಾರಣವೇ **ಭಜನಾನಂದ**ವು ನಮಗೆಲ್ಲರಿಗೂ ಬಹಳ ಮುಖ್ಯ. ದಿನದ ಕೆಲಸಗಳೆಲ್ಲ ಮುಗಿದಾಗ, ಜವಾಬ್ದಾರಿಯೆಲ್ಲ ಮುಗಿದ ನಂತರ ನಾವು ಭಜನೆಗಳನ್ನು ಹಾಡುತ್ತೇವೆ, ಅಥವಾ ಕೇಳುತ್ತೇವೆ. ಬಹಳ ಒಳ್ಳೆಯ ಕಾರ್ಯ, ತುಂಬ ಒಳ್ಳೆಯ ಅನುಭವ. ಗಾಂಧೀಜಿಯವರು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಕೂಡ 'ರಾಮಧುನ್' ಭಜನೆಗಳನ್ನು ಹಾಡುತ್ತಿದ್ದರು. ಕೆಲವೊಂದು ಬಾರಿ ಅಲ್ಲಿ ಒಂದು ಲಕ್ಷ ಜನ ನೆರೆದಿರುತ್ತಿದ್ದರು. ಅವರೆಲ್ಲ ಗಾಂಧೀಜಿಯವರ 'ರಾಮಧುನ್'ದಿಂದ ಎಷ್ಟೊಂದು ಪ್ರಭಾವಿತರಾಗುತ್ತಿದ್ದರು!

ಭಜನಾನಂದವು ಎಲ್ಲರಿಗೂ ಸಾಧ್ಯ, ಎಲ್ಲರಿಗೂ ಲಭ್ಯ. ನೀವೆಲ್ಲರೂ ನಮ್ಮ ಅಂತರಂಗದ ಆನಂದವನ್ನು ಒಂದಿಷ್ಟು ಸವಿಯಬಹುದು. ಅದರಿಂದ ನಮ್ಮಲ್ಲಿ ಹೊಸ ಸ್ಫೂರ್ತಿ ಮೂಡುವುದು. ಸರಿಯಾದ ವಿಧಾನಗಳನ್ನು ಅನುಸರಿಸುವ ಮೂಲಕ ನಾವು ಆಧ್ಯಾತ್ಮಿಕ ಜೀವನವನ್ನು ಬೆಳೆಸಿಕೊಳ್ಳುವುದು ಹೀಗೆ. ನಾವು ಯುವಕರಾಗಿದ್ದಾಗ **ವಿಷಯಾನಂದ**ವೇನೋ ಸರಿಯೆನಿಸುವುದು. ಯೌವನವೆಂಬುದು ಸುಂದರ. ಆದರೆ ಜೀವನದ ಸಂಜೆ ಬಂದಾಗ ನಾವು ಆನಂದವನ್ನು ನಮ್ಮ ಒಳಗೆ ಕಾಣಬೇಕು; ಹೊರಗಲ್ಲ. ಈ ರೀತಿ ಮಾಡದಿದ್ದರೆ ಬಹಳ ತೊಂದರೆಯಾಗುವುದು. ಕಾರ್ಲ್ ಯುಂಗ್ ತನ್ನ 'Man in Search of a Soul' ಎಂಬ ಗ್ರಂಥದಲ್ಲಿ ವಿಶೇಷವಾಗಿ ಹೀಗೆ ಹೇಳುತ್ತಾನೆ: ''ಜೀವನದ ಮುಂಜಾನೆಯೆಂಬುದು ಒಂದು ಹಂತ. ಜೀವನದ ಮಧ್ಯಾಹ್ನ ಇನ್ನೊಂದು ಹಂತ. ಮುಂಜಾನೆಯನ್ನು ಮಧ್ಯಾಹ್ನಕ್ಕೆ ಒಯ್ಯದಿರು.'' 'ಮುಂಜಾನೆ' ಎಂಬ ಶಬ್ದದಿಂದ ಅರ್ಥವಾಗುವುದೇನೆಂದರೆ, ಜಗತ್ತಿನಲ್ಲಿ ಸುಭದ್ರವಾದ ಜೀವನದಲ್ಲಿ ನೆಲೆಗೊಳ್ಳುವುದು ಹೇಗೆ; ಹಣ ಸಂಪಾದನೆ, ಕುಟುಂಬ ಜೀವನ, ಇವುಗಳಿಂದ ಬದುಕಿನ ಸುಖಸಂತೋಷಗಳನ್ನು ಅನುಭವಿಸಿ ಸಮಾಜದಲ್ಲಿ ಒಳ್ಳೆಯ ಹೆಸರು ಗಳಿಸುವುದು ಹೇಗೆ –

ಇತ್ಯಾದಿ. 'ಮುಂಜಾನೆ' ಎಂದರೆ ಇದೇ. ಇದನ್ನು ಮಧ್ಯಾಹ್ನದ (ವೃದ್ಧಾಪ್ಯದ) ತನಕ ಒಯ್ಯಬೇಡ; ಹಾಗೆ ಮಾಡಿದರೆ ನಿಮ್ಮ ವ್ಯಕ್ತಿತ್ವಕ್ಕೆ ಹೆಚ್ಚಿನ ಧಕ್ಕೆಯುಂಟಾಗುವುದು, ಆಂತರಿಕವಾದ ಶ್ರೀಮಂತಿಕೆ ಕಡಿಮೆಯಾಗುವುದು. ಪ್ರಪಂಚದಲ್ಲಿ ನಮ್ಮ ಕರ್ತವ್ಯ ಮುಗಿದ ಮೇಲೆ ನಮ್ಮ ಇಳಿವಯಸ್ಸನ್ನು ಹೇಗೆ ಬೆಳಗಬಹುದು, ೬೦ನೇ ವಯಸ್ಸಿನ ನಂತರ ಹೇಗೆ ಬದುಕನ್ನು ಉಜ್ಜ್ವಲಗೊಳಿಸಬಹುದು ಎಂಬುದನ್ನು ಕಂಡುಕೊಳ್ಳಬೇಕು. ವೃದ್ಧಾಪ್ಯವೆಂಬುದು ಖಂಡಿತ ಭಯಾನಕವಲ್ಲ; ಅದನ್ನು ನೀವು ಉಜ್ಜ್ವಲಗೊಳಿಸಬಹುದು.

ಶ್ರೀರಾಮಕೃಷ್ಣರು ತಮ್ಮ ಸುಂದರವಾದ ನುಡಿಗಟ್ಟಿನ ಮೂಲಕ ಇದನ್ನು ಈ ರೀತಿ ಹೇಳುತ್ತಾರೆ: ''ಮೊದಲು ಭಗವಂತನ ಸಾಕ್ಷಾತ್ಕಾರವನ್ನು ಮಾಡಿಕೊಂಡು ಅನಂತರ ಈ ಜಗತ್ತಿನ ಕಾರ್ಯವನ್ನು ಮಾಡಿ. ಒಂದು ಕೈಯಿಂದ ಭಗವಂತನ ಪಾದಪದ್ಮಗಳನ್ನು ಬಿಗಿಯಾಗಿ ಹಿಡಿದುಕೊಂಡು ಇನ್ನೊಂದು ಕೈಯಿಂದ ಸಾಂಸಾರಿಕ ಕೆಲಸಕಾರ್ಯಗಳನ್ನು ಮಾಡಿ.'' *('ವಚನವೇದ' ಭಾಗ ೧, ಪು.೩೧೮)* ಇದು ಅವರು ಹೇಳುವ ರೀತಿ.

ಹೀಗೆ **ಭಜನಾನಂದ**ವು ಆಧ್ಯಾತ್ಮಿಕ ಶಕ್ತಿ ಹಾಗೂ ಸ್ಫೂರ್ತಿಯ ಮೂಲವಾಗುತ್ತದೆ. ಇದರಿಂದ ಹಲವು ಮಂದಿ ವೃದ್ಧರನ್ನು ಕಾಡುವ ಹಿಂಜರಿತ, ಚಿಂತೆಗಳು ಇನ್ನು ಮುಂದೆ ಇರಲಾರವು. ಯಾವಾಗಲೂ ಉತ್ಸಾಹದಿಂದಿರುವ ನೀವು, 'ನನ್ನ ದೇಹ ದುರ್ಬಲವಾಗಿದ್ದರೂ ಕೂಡ, ಯಾವಾಗಲೂ ನನಗೆ ಉತ್ಸಾಹ ನೀಡುವ ಏನೋ ಒಂದು ನನ್ನಲ್ಲಿದೆ' ಎಂದು ಭಾವಿಸುತ್ತೀರಿ. **'ಪಾಯೋ ಜೀ ಮೈ ನೇ, ರಾಮ್ ರತನ್ ಧನ್ ಪಾಯೋ'** ಎಂಬ ಒಂದು ಅತ್ಯುತ್ತಮ ಹಿಂದೀ ಭಜನೆಯನ್ನು ನಾವು ಹಾಡುತ್ತೇವೆ. ಅದರ ಅರ್ಥ, 'ರಾಮನೆಂಬ ರತ್ನವನ್ನೇ ನನ್ನ ಹೃದಯದಲ್ಲಿ ಪಡೆದಿರುವೆ; ಏನನ್ನೂ ನಾನು ಕಳೆದುಕೊಂಡಿಲ್ಲ'; ನಮ್ಮಲ್ಲೇ ನಾವು ಹೀಗೆ ಹೇಳಿಕೊಳ್ಳಬೇಕು. ಹೌದು, ಅಗಾಧವಾದ ಸತ್ಯವೊಂದು ಲಭಿಸಿದೆ. ನಿಜವಾಗಿಯೂ ಈ ಜೀವನ ಅತ್ಯದ್ಭುತ. ಬೇರೇನೂ ಕೆಲಸವಿಲ್ಲದಾಗ, ಮಾಡಬಹುದಾದ ಏನೋ ಒಂದು ಕಾರ್ಯ ನನಗೆ ಲಭಿಸಿದೆ. ನನ್ನ ಕಷ್ಟದ ದಿನಗಳಲ್ಲಿ ಇದನ್ನು ನಾನು ಗಮನಿಸಿರಲಿಲ್ಲ. ಈಗ ನಾನು ಸ್ವತಂತ್ರ. ನಿವೃತ್ತಿಯನ್ನು ಪಡೆದ ನಂತರದ ಜೀವನವೆಲ್ಲ ಬೇರೆಯೇ ಆದ ಒಂದು ಆನಂದದ ಜೀವನವಾಗುವುದು ಹೀಗೆ. ಪರಿಶುದ್ಧವಾದ, ಸುಸಂಸ್ಕೃತವಾದ ಈ ರೀತಿಯ ಜೀವನದಿಂದ ಮನೆಯಲ್ಲಿರುವ ಎಲ್ಲರ ಮೇಲೂ ನಿಮ್ಮ ಅನುಗ್ರಹವುಂಟಾಗುವುದು. ಅವರನ್ನೆಲ್ಲ ನೀವು ನಗುನಗುತ್ತಲೇ ಆಶೀರ್ವದಿಸಬಹುದು. ಯಾರಿಂದಲೂ ನೀವು ಏನನ್ನೂ ನಿರೀಕ್ಷೆ ಮಾಡಬೇಡಿ. ಏಕೆಂದರೆ ನೀವು ನಿಮ್ಮ ಒಳಗಿರುವ ಆನಂದವನ್ನು ಕಂಡುಕೊಂಡಿದ್ದೀರಿ. ಈ ಆನಂದವನ್ನೇ ನೀವು ಇತರರಿಗೆ ದಾಟಿಸುತ್ತಿದ್ದೀರಿ – ಸಾಮಾನ್ಯವಾಗಿ ಅಲ್ಲಿ ಆನಂದವಿರುವುದಿಲ್ಲ. ಜೀವನದಲ್ಲಿ ಆಧ್ಯಾತ್ಮಿಕ ಹಿನ್ನೆಲೆಯಿಲ್ಲದಿದ್ದರೆ ಆನಂದವನ್ನು ನಾವು ಇತರರಿಗೆ ದಾಟಿಸಲಾರೆವು. ನಮ್ಮ ಚಿಂತೆ, ತೊಂದರೆಗಳನ್ನಷ್ಟೇ ನಾವು ದಾಟಿಸುತ್ತೇವೆ. ಇಲ್ಲಿ ನಾವು ನಮ್ಮ ಎಲ್ಲ ತೊಂದರೆಗಳನ್ನೂ ಜೀರ್ಣಿಸಿಕೊಂಡಿದ್ದೇವೆ – ಇದನ್ನು ಗಮನಿಸಬೇಕು. ದೈಹಿಕ ನೋವಂತೂ ಇದ್ದೇ ಇರುವುದು. 'ಇರಲಿ, ನೀವು ಹೇಳುವಂತೆ ಈ ನನ್ನ ಸವಾರಿ ಗಾಡಿ (ನಮ್ಮ ದೇಹ) ಹಳೆಯದಾಗಿದೆ. ಆದರೆ ನನ್ನ ಮನಸ್ಸು ಮಾತ್ರ ಬೇರೆಯೇ ಆಗಿದೆ. ಈಗತಾನೇ ನಾನು ಅದಕ್ಕೆ ತರಬೇತಿ ನೀಡಿದ್ದೇನೆ.' ಈ ರೀತಿ ನಾವು ನಮ್ಮ ಜೀವನದಲ್ಲಿ ಆಧ್ಯಾತ್ಮಿಕ ಗುಣವನ್ನು ತಂದುಕೊಳ್ಳಬಹುದು.

ಹಲವು ಪಾಶ್ಚಾತ್ಯ ದೇಶಗಳಲ್ಲಿ ಭಾರತದಿಂದ ಈ ಸ್ಫೂರ್ತಿಯನ್ನು ಪಡೆದುಕೊಳ್ಳುತ್ತಾರೆ. ಆದಕಾರಣವೇ ಈ ದಿನಗಳಲ್ಲಿ ವೃದ್ಧರು ಧ್ಯಾನ ಮಾಡಲು ಕುಳಿತುಕೊಳ್ಳುತ್ತಾರೆ. ಇಂಥ ಪ್ರಾರ್ಥನಾ ಶಿಬಿರಗಳಲ್ಲಿ ಪಾಲ್ಗೊಂಡು ಆನಂದಿಸುತ್ತಾರೆ. ಘೋರ ಪ್ರಾಪಂಚಿಕತೆಯಲ್ಲಿ ಮುಳುಗಿದವರು ಅಥವಾ ಉನ್ನತ ಧ್ಯೇಯಾದರ್ಶಗಳಿಲ್ಲದವರು ಮಾತ್ರ ಹೀಗೆ ಮಾಡಲಾರರು. ಆದರೆ ಹಲವು ಮಂದಿ ತಮ್ಮ ಜೀವನವನ್ನು ಶ್ರೀಮಂತಗೊಳಿಸಲು, ಪರಿಶುದ್ಧಗೊಳಿಸಲು ಈ ದಿಕ್ಕಿನತ್ತ ಹೊರಳುತ್ತಿದ್ದಾರೆ. ಇದು ಇಡೀ ಜಗತ್ತಿಗೆ ಭಾರತ ನೀಡಿರುವ ಕೊಡುಗೆ. ಇದನ್ನು ನಾವೇ ಬಳಸೋಣ; ನಮ್ಮ ಜೀವನದಲ್ಲಿಯೇ ಬಳಸಿಕೊಳ್ಳೋಣ. ಹೀಗಾಗಿ, 'ದೇಹಕ್ಕೆ ಮುಪ್ಪು ಬಂದು ಅದು ದುರ್ಬಲವಾಗುವುದು; ಅದು ಹಾಗಾಗಲೇಬೇಕು. ಆದರೆ ನಮ್ಮಲ್ಲಿರುವ ಕೆಲವು ಅಂಶಗಳು ಮುಪ್ಪು, ದೌರ್ಬಲ್ಯಗಳಿಗೆ ಒಳಗಾಗಲಾರವು' ಎಂದು ಭಾವಿಸುವುದು ಅತ್ಯಂತ ಪ್ರಾಯೋಗಿಕವಾಗಿದೆ. ೨೫೦೦ ವರ್ಷಗಳ ಹಿಂದೆ ಭಗವಾನ್ ಬುದ್ಧನು ಇಲ್ಲಿ ಜೀವಿಸಿದ್ದ; ೮೦ ವರ್ಷವಾಗಿದ್ದಾಗ ಅವನು ತನ್ನ ಸಹಾಯಕ ಆನಂದನಿಗೆ ಹೇಳಿದ: ''ಆನಂದ, ನನ್ನ ಈ ದೇಹವನ್ನು ನೋಡು. ಎಷ್ಟೊಂದು ಬೆಟ್ಟ, ಗುಡ್ಡಗಳನ್ನು ಅದು ಏರಿಲ್ಲ , ಎಷ್ಟೊಂದು ಮೈಲಿಗಳ ದಾರಿ ನಡೆದಿಲ್ಲ! ಈಗ ಈ ದೇಹ ತಾನೇ ತಾನಾಗಿ ನಿಲ್ಲಲಾರದು. ಹಗ್ಗ ಕಟ್ಟಿ ಎಳೆಯದೆ ಮುಂದೆ ಸಾಗದ ಹಳೆಯ ಎತ್ತಿನ ಗಾಡಿಯಂತಾಗಿದೆ. ಈ ದೇಹದ ಅವಸ್ಥೆ ಕೂಡ ಅಷ್ಟೇ – ಒಂದು ಕಾಲದಲ್ಲಿ ಇದು ಎಷ್ಟೊಂದು ಕೆಲಸ ಮಾಡಿತ್ತು! ಈಗ ಈ ದೇಹವನ್ನು ನೋಡು.'' 'ನಾನು ದೇಹವಲ್ಲ; ಈ ದೇಹ ಎತ್ತಿನ ಗಾಡಿಯಂತೆ' – ಇದು ಭಾರತೀಯ ಮನೋಭಾವ. ದೇಹಕ್ಕಿಂತಲೂ ಆಳವಾದುದನ್ನು ನಾವು ನೋಡಬೇಕು. ದೇಹದ ಒಳಗೆ ಇನ್ನೇನೋ ಇದೆ – ಅದೇ ನಮ್ಮ ನಿಜವಾದ ಆತ್ಮ.

ನಮ್ಮ ದೇಹವೆಂಬುದು ಬಾಹ್ಯ ಆವರಣ — ನಮ್ಮ ಸಂಸ್ಕೃತಿಯು ಈ ತಿಳುವಳಿಕೆಯನ್ನು ನಮ್ಮ ಮನಸ್ಸಿನ ಮೇಲೆ ಮುದ್ರಿಸಿಬಿಟ್ಟಿದೆ. ಆದಕಾರಣವೇ ನಮ್ಮ ಭಾಷೆಯಲ್ಲಿ ಸಾವನ್ನು ಕುರಿತು ನಾವು, 'ನನ್ನ ದೇಹವನ್ನು ಬಿಟ್ಟುಬಿಟ್ಟೆ' ಎನ್ನುತ್ತೇವೆ. 'ಸಾವು' ಎಂಬುದನ್ನು ನಾವು ಕರೆಯುವುದು ಹೀಗೆ . **'ಮೈ ನೇ ಶರೀರ್ ಛೋಡ್‌ದಿಯಾ'** – ನಾನು ದೇಹವನ್ನು ಬಿಟ್ಟುಬಿಟ್ಟೆ – ಎಂದು. ಪಾಶ್ಚಾತ್ಯರಲ್ಲಿ ಇದು ಬೇರೆ ರೀತಿ. 'I cast away my soul' 'ನನ್ನ ಆತ್ಮವನ್ನು ನಾನು ಬಿಟ್ಟುಬಿಟ್ಟೆ' – ಇದು ಪಾಶ್ಚಾತ್ಯರ ಭಾಷೆ. 'ನಾನು ನನ್ನ ದೇಹ, ನನ್ನ ಆತ್ಮವನ್ನು ನಾನು ತ್ಯಜಿಸಿದೆ' ಎನ್ನುತ್ತಾರೆ. ಈ ಕಾರಣದಿಂದಲೇ ಅವರು ದೇಹವನ್ನು ಸಂರಕ್ಷಿಸಿ ಇಡು

ತ್ತಾರೆ. ಅವರು ದೇಹವನ್ನು ರಕ್ಷಿಸಿಡುವಂತೆ ನಾವು ಮಾಡುವುದಿಲ್ಲ; ನಾವು ಶವವನ್ನು ಸುಡುತ್ತೇವೆ. ಕಾರಣ, ಅದರ ಕೆಲಸ ಮುಗಿದು ಹೋಯಿತು. ಇದು ಶವವನ್ನು ಸುಡುವ ಕ್ರಿಯೆಯ ಹಿಂದಿರುವ ಅರ್ಥ. ಇನ್ನುಮೇಲೆ ನಮಗೆ ಅದರಿಂದೇನೂ ಉಪಯೋಗವಿಲ್ಲ. ನಮಗೆ ಸೂಕ್ಷ್ಮ ಶರೀರವೂ ಇದೆ; ಅದು ಹೊಸದಾಗಿ ಸ್ಥೂಲ ಶರೀರವನ್ನು ಧರಿಸಿಕೊಳ್ಳಬಲ್ಲದು. ಈ ಎಲ್ಲ ಭಾವನೆಗಳು ಲಕ್ಷಾಂತರ ಪಾಶ್ಚಾತ್ಯರನ್ನು ಆಕರ್ಷಿಸುತ್ತದೆ. ಈಚೆಗೆ ಈ ಭಾವನೆ ನಿಜವೆಂದು ಸ್ವೀಕೃತವಾಗಿಲ್ಲ. ಈ ಸಿದ್ಧಾಂತವನ್ನು ನಾಶಮಾಡಲು ಚರ್ಚುಗಳು ಪ್ರಯತ್ನಿಸಿದವು. ಕ್ರಿ.ಶ. ೬ ನೇ ಶತಮಾನದವರೆಗೂ ಕ್ರೈಸ್ತ ಧರ್ಮದಾದ್ಯಂತ ಪುನರ್ಜನ್ಮ ಸಿದ್ಧಾಂತ ಪ್ರಚಲಿತವಿತ್ತು. ಅನಂತರ ನಡೆದ ಒಂದು ಸಮಾರಂಭದಲ್ಲಿ ಬಹುಮತ ಸಿಕ್ಕಿದ್ದರಿಂದ ಈ ಸಿದ್ಧಾಂತವನ್ನು ಇಡೀ ಕ್ರೈಸ್ತ ಮತದಿಂದ ಹೊರಗಟ್ಟಲಾಯಿತು. ಈಚೆಗೆ ಇದು ಹಿಂಬಾಗಿಲಿನಿಂದ ಪ್ರವೇಶ ಪಡೆಯುತ್ತಿದೆ. ಜನರು ಈ ತತ್ತ್ವವನ್ನು ಸ್ವೀಕರಿಸುತ್ತಿದ್ದಾರೆ, ಏಕೆಂದರೆ ಇದು ಸತ್ಯ. ಮನುಷ್ಯ ಕೇವಲ ದೇಹವಲ್ಲ; ಅವನ ಒಳಗೆ ಇನ್ನೂ ಏನೋ ಇದೆ. ಇದು ಕೇವಲ ಬಾಹ್ಯ ಆವರಣ, ಅದನ್ನು ನಾವು **ಸ್ಥೂಲ ಶರೀರ**ವೆಂದು ಕರೆಯುತ್ತೇವೆ. ಇದನ್ನು ಧರಿಸಿರುವ ಆತ್ಮವು ಒಳಗೇ ಉಳಿಯುವುದು. ಶ್ರೀಕೃಷ್ಣನು ಗೀತೆಯಲ್ಲಿ ಹೇಳುತ್ತಾನೆ: 'ಆತ್ಮವು ಜನನಕಾಲದಲ್ಲಿ ಸ್ಥೂಲದೇಹವನ್ನು ಪ್ರವೇಶಿಸುವಾಗ, ಮತ್ತು ಮರಣಕಾಲದಲ್ಲಿ ದೇಹವನ್ನು ಬಿಡುವಾಗ ಏನಾಗುವುದು?' ಈ ಕುರುಡು ಕಣ್ಣು ಆ ಸತ್ಯವನ್ನು ಕಾಣಲಾಗದು ಎಂದು ಋಷಿಗಳು ಅರಿತಿದ್ದರು. **'ವಿಮೂಢಾಃ ನಾನು ಪಶ್ಯಂತಿ, ಪಶ್ಯಂತಿ ಜ್ಞಾನಚಕ್ಷುಷಃ'** – 'ಯಾರಲ್ಲಿ ಜ್ಞಾನಚಕ್ಷುಗಳು (ದಿವ್ಯವಾದ ಕಣ್ಣುಗಳು) ಇವೆಯೋ ಅವರು ಮಾತ್ರ ಇದನ್ನು ನೋಡಬಲ್ಲರು.' ದೇಹ ಮಾತ್ರ ಹೊರಟುಹೋಗುವುದು. ಆತ್ಮವು ಅಮೃತಸ್ವರೂಪದ್ದಾಗಿದೆ. ಜನನ-ಮರಣಗಳಿಲ್ಲದ್ದೇ ಆತ್ಮ. ಭಾರತದ ಜನತೆಯನ್ನು ಈ ಭಾವನೆ ತೀವ್ರವಾಗಿ ಪ್ರಭಾವಗೊಳಿಸಿದೆ.

''ನಿಮಗೆ ಪುನರ್ಜನ್ಮದಲ್ಲಿ ನಂಬಿಕೆಯಿದೆಯೆ?'' ಎಂದು ಯಾರಾದರೂ ಕೇಳಿದರೆ ನೀವು ಹೇಳುತ್ತೀರಿ, ''ಇದು ನಂಬಿಕೆಯ ಪ್ರಶ್ನೆಯಲ್ಲ ; ಇದು ನನ್ನ ರಕ್ತದಲ್ಲೇ ಇದೆ. ನಮಗೆಲ್ಲ ಇದು ಅತ್ಯಂತ ಸ್ವಾಭಾವಿಕ'' ಎಂದು. ಬಾಲ್ಯದಿಂದ ನಾವು ಹಲವು ಬಗೆಯ ಮಾನವ ಸಹಜವಾದ ಅನುಭವಗಳ ಮೂಲಕ ಹಾದು ಹೋಗುತ್ತೇವೆ – ಸುಖ, ವೈಭೋಗಗಳು; ಕಷ್ಟ ಹಾಗೂ ಯಾತನೆಗಳು, ಹಲವು ಬಗೆಯ ಸವಾಲುಗಳು ಇತ್ಯಾದಿ. ಕ್ರಿಯಾಶೀಲ ಬದುಕಿನಿಂದ ನಾವು ನಿವೃತ್ತರಾಗುವ ವೇಳೆಗೆ ನಮಗೆ ಒಂದು ರೀತಿಯ ಪ್ರೌಢತೆ ಬರುತ್ತದೆ. ಅದರಿಂದಾಗಿ ನಮಗೆ ಜಗತ್ತಿನ ಮೇಲೆ ಅನುಕಂಪ ಮೂಡುತ್ತದೆ. ಹಾಗಾದಾಗ, 'ಈ ಹಿಂದೆ ಕಳೆದ ಅನೇಕ ವರ್ಷಗಳಿಂದ ನಾನು ಎಲ್ಲವನ್ನೂ ಚೆನ್ನಾಗಿ ಮಾಡುತ್ತ ಬಂದೆ. ಎಲ್ಲ ಹೋರಾಟಗಳು, ಸೋಲುಗಳು ನನ್ನನ್ನು ಪಳಗಿಸಿವೆ' ಎಂಬ ಮನೋಭಾವ ನಮ್ಮಲ್ಲಿ ಮೂಡುತ್ತವೆ. **ಪಳಗಿಸುವುದು** – ಇದು ಅದ್ಭುತವಾದ ಮಾತು. ಯುವಕರಾಗಿದ್ದಾಗ ನಮ್ಮ ಮನಸ್ಸು ಅಷ್ಟೊಂದು ಶಾಂತವಾಗಿರುವುದಿಲ್ಲ ; ಆದರೆ ಇಳಿವಯಸ್ಸಿನಲ್ಲಿ ಅದು ಪಳಗಿರುತ್ತದೆ. ಆಗ ಏನಾಗುವುದು? ಇಡೀ ಪ್ರಪಂಚದ ಮೇಲೆ ನಮಗೆ ಅನುಕಂಪ ಮೂಡುತ್ತದೆ — ಹೋರಾಡುತ್ತಿರುವ ಯುವಕರ ಮೇಲೆ ವೃದ್ಧರಾದ ನಮಗೆ ಅನುಕಂಪ ಮೂಡುವುದು; ನಗುನಗುತ್ತ ಅವರಿಗೆ ಸಹಾಯ ಮಾಡುವೆವು. ಅವರನ್ನು ಹರಸುವೆವು. ಏಕೆಂದರೆ ನಮ್ಮ ಹೃದಯವೀಗ ತುಂಬಿಬಂದಿದೆ. ಈ ತುಂಬಿದ ಅನುಭವ ನಿಜವಾದದ್ದು; ಇಲ್ಲಿ ಯಾವುದೇ ಶೂನ್ಯತೆಯಿಲ್ಲ. ಆಧ್ಯಾತ್ಮಿಕತೆ ಕಾಲಿಡುವುದು ಇಲ್ಲೇ. ಯಾವುದೇ ಆಚರಣೆಗಳು ನಮಗೆ ಇದನ್ನು ನೀಡಲಾರವು. ಈ ಆಂತರಿಕ ಶ್ರೀಮಂತಿಕೆಯನ್ನು ಆಧ್ಯಾತ್ಮಿಕ ಅನುಭವವೊಂದೇ ನೀಡಬಲ್ಲುದು. ಆದ್ದರಿಂದ ಪ್ರತಿದಿನವೂ ಸ್ವಲ್ಪ ಹೊತ್ತು ಧ್ಯಾನ ಮಾಡುವ ಅಭ್ಯಾಸ ನಮ್ಮನ್ನು ಈ ಬಾಹ್ಯ ಪ್ರಪಂಚದಿಂದ ದೂರ ಕೊಂಡೊಯ್ಯುವುದು; ನಿಧಾನವಾಗಿ ಮನಸ್ಸನ್ನು ಅಂತರ್ಮುಖಿಗೊಳಿಸುವುದು. ನಮ್ಮ ಪ್ರಜ್ಞೆಯ ಆಳದಲ್ಲಿಯೇ ಭಗವಂತ ಅಡಗಿದ್ದಾನೆ. ಅವನನ್ನು ನಾವು ಹುಡುಕಿ ಕಂಡುಹಿಡಿಯಬೇಕು; ಅವನ ಸಮೀಪಕ್ಕೆ ಹೋಗಬೇಕು. ಕಾಡಿನಲ್ಲಿ ಚಿನ್ನದ ನಿಧಿ ಸಿಕ್ಕಿದರೆ, ಅದನ್ನು ದೋಚಲು ಜನರು ಧಾವಿಸಿ ಹೋಗುತ್ತಾರಲ್ಲ , ಹಾಗೆ. ದಾರಿಮಧ್ಯೆ ಸಾವೇ ಎದುರಾದರೂ ಅವರು ಲೆಕ್ಕಿಸುವುದಿಲ್ಲ. ಚಿನ್ನದ ವಿಷಯದಲ್ಲೇ ಹಾಗೆ ಮಾಡಬಹುದಾದರೆ, ಇಲ್ಲೇಕೆ ಅದು ಅಸಾಧ್ಯ? ನಮ್ಮೆಲ್ಲರ ಒಳಗೆ ಭಗವಂತ ಅಡಗಿಕೊಂಡಿದ್ದಾನೆ — ಇದು ಅತ್ಯಂತ ಶ್ರೇಷ್ಠವಾದ ಸತ್ಯ. 'ಇಲ್ಲಿಯತನಕ ನಾನು ಬಾಹ್ಯಪ್ರಪಂಚದಲ್ಲಿ ಮುಳುಗಿಹೋಗಿದ್ದೆ, ನನಗೆ ಇಲ್ಲಿಗೆ ಬರಲಾಗಲಿಲ್ಲ. ಈಗ ನನಗೆ ಸಾಕಷ್ಟು ಸಮಯವಿದೆ, ಹಾಗಾಗಿ ಈ ಉನ್ನತ ಧ್ಯೇಯಕ್ಕಾಗಿ ಇಲ್ಲಿಗೆ ಬರುತ್ತೇನೆ' – ಹೀಗೆ ಹೇಳುವ ವೃದ್ಧರ ಮೇಲೆ ಯುವಜನತೆಗೆ ಒಂದು ರೀತಿಯ ಅಸೂಯೆ. ಈಚೆಗೆ ಕೆಲವು ಮಂದಿ ವೃದ್ಧರು ಕೂಡ ವಿಶೇಷವಾಗಿ ಕಾರ್ಯಪ್ರವೃತ್ತರು. ಅವರು ಯುವಕರೊಂದಿಗೆ ಸ್ಪರ್ಧಿಸುತ್ತಾರೆ. ಆದರೆ ಸುಲಭವಾಗಿ ಸೋತುಹೋಗುತ್ತಾರೆ. ಕಾರಣ, ಯುವಕರು ಓಡುವುದರಲ್ಲೂ , ನೆಗೆಯುವುದರಲ್ಲೂ ವೃದ್ಧರಿಗಿಂತ ಹೆಚ್ಚು ಸಮರ್ಥರು. ವೃದ್ಧರು ಅವರೊಡನೆ ಸ್ಪರ್ಧಿಸಲಾರರು. ಆದರೆ ಆಂತರಿಕ ಆನಂದ, ಶಾಂತಿಯ ಭಾವವುಂಟಾಗುವುದು ವೃದ್ಧರಿಗೆ. ಈ ವಿಷಯದಲ್ಲಿ ಯುವಕರು ಅವರೊಂದಿಗೆ ಸ್ಪರ್ಧಿಸಲಾರರು. ಇದಕ್ಕಾಗಿ ಅವರಿಗೆ ಅಸೂಯೆ. ಆದರೆ ಅದೂ ಒಳ್ಳೆಯದೆ!

ಯುವಜನತೆ ಹಿರಿಯ ತಲೆಮಾರಿನವರ ಮೇಲೆ ಅಸೂಯೆ ಹೊಂದುವುದೇಕೆಂದರೆ, 'ಇಳಿ ವಯಸ್ಸಿನವರಿಗೆ ಅಂಥ ಅಪೂರ್ವ ನಿಧಿಯನ್ನು ಅರಸಲು ಅವಕಾಶ ಸಿಕ್ಕಿದೆ, ಆದರೆ ಯುವ ತಲೆಮಾರಿಗೆ ಅದು ಸಿಕ್ಕಿಲ್ಲ' ಎಂದು. ತಾವು ವೃದ್ಧರಾದಾಗ ಅವರೂ ಆ ನಿಧಿಯನ್ನು ಅರಸಬೇಕು. ಮುಂದಿನ ಜನಾಂಗಕ್ಕೆ ಅವರು ಉತ್ತಮ ಉದಾಹರಣೆಯಾಗಬೇಕು. ನಮ್ಮ ಶಾಸ್ತ್ರಗ್ರಂಥಗಳಲ್ಲಿ ಇದನ್ನು ಹೇಳಲಾಗಿದೆ.

(ಮುಂದಿನ ಸಂಚಿಕೆಗೆ)



ಜೀವನದ ಸಂಕೀರ್ಣತೆ

ಡಾ. ವಸಂತ ಕುಮಾರ್

ಜಗತ್ತು ಬದಲಾದಂತೆ ಸಾಮಾಜಿಕ ಪರಿಸರ, ಜನಜೀವನ ಬದಲಾಗುತ್ತದೆ. ಆಧುನಿಕ ಜೀವನದಲ್ಲಿ ನಗರೀಕರಣ, ಜನಸಂಖ್ಯೆಯ ಹೆಚ್ಚಳ, ಜಾಗತೀಕರಣ ಮೊದಲಾದ ವಿದ್ಯಮಾನಗಳೊಂದಿಗೆ ಜೀವನಶೈಲಿ ವೇಗವಾಗಿ ಮಾರ್ಪಡುತ್ತಿದೆ. ಹಿಂದಿನ ಸರಳ ಜೀವನಕ್ರಮ ಮರೆಯಾಯಿತೇನೋ ಎಂಬ ಮಾತು ಎಲ್ಲೆಡೆ ಕೇಳಿಬರುತ್ತಿದೆ. ಈ ಹಿನ್ನೆಲೆಯಲ್ಲಿ ಸಂಕೀರ್ಣ ಬದುಕಿನ ಬಗ್ಗೆ ಚಿಂತನೆ ನಡೆಸಿರುವ ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರು. ರಾಮಕೃಷ್ಣ ಮಠದ ಭಕ್ತರಾಗಿರುವ ಅವರು ಈ ಪತ್ರಿಕೆಯಲ್ಲಿ ಅನೇಕ ಉತ್ತಮ ಲೇಖನಗಳನ್ನು ಬರೆದಿದ್ದಾರೆ.

ನಮ್ಮೆಲ್ಲರ ಜೀವನವೂ ಕ್ಲಿಷ್ಟತೆಯಿಂದ ಕೂಡಿದೆ. ಅದರಲ್ಲಿ ವೈವಿಧ್ಯತೆ ಇರಬಹುದು. ಅದಕ್ಕೆ ಕಾರಣಗಳೂ ವಿಧವಿಧವಾಗಿರಬಹುದು. ಬಹು ಜನರಿಗೆ ಹಣ ಸಾಲದಾಗಿರಬಹುದು, ಕೆಲವರಿಗೆ ಸುಖ ಕಡಿಮೆಯಾಗಿರಬಹುದು. ಕೆಲವರಿಗೆ ಕಾಲ ಸಾಲದೆನ್ನಿಸಿರಬಹುದು. ಇನ್ನು ಕೆಲವರಿಗೆ ತೃಪ್ತಿ, ಸಮಾಧಾನಗಳ ಕೊರತೆ ಇರಬಹುದು. ಮತ್ತೆ ಕೆಲವರನ್ನು ಅಸೂಯೆ, ಅಸಹನೆ ಕಾಡುತ್ತಿರಬಹುದು. ಇನ್ನು ಕೆಲವರಿಗೆ ಹೆಸರು, ಕೀರ್ತಿ ಕಡಿಮೆಯಾಯಿತೆನ್ನಿಸಿರಬಹುದು. ಅನೇಕರಿಗೆ ಶಾಂತಿ ಇಲ್ಲದಿರಬಹುದು. ಜಗನ್ಮಾತೆ ಹೇಗೆ ಹಲವು ನಾಮ ರೂಪಗಳಿಂದ ಕೂಡಿದ ಅವಳ ಹಲವು ಅಂಶಗಳಿಂದ ಬಹು ಬಗೆಯಾಗಿ ಈ ಪ್ರಪಂಚದಲ್ಲಿ ಆವಿರ್ಭಾವ ಹೊಂದಿ ರಾರಾಜಿಸುತ್ತಿರುವಳೋ ಹಾಗೆಯೇ ಈ ಕೊರತೆಗಳೂ ಕೂಡ ವಿಧವಿಧವಾಗಿ ಬೇರೆ ಬೇರೆ ಹೆಸರು ರೂಪಗಳಿಂದ ನಮ್ಮ ಜೀವನ ದಲ್ಲಿ ವಿಹರಿಸುತ್ತಾ ನಮ್ಮನ್ನು ಕಾಡುತ್ತಿವೆ. ಇದು ಬಹುಶಃ ಎಲ್ಲಾ ಕಾಲಗಳಲ್ಲಿಯೂ ಇದ್ದಂತೆ ಕಾಣುವುದು; ಎಲ್ಲಾ ವಯಸ್ಸಿನವರನ್ನೂ ಕಾಡುತ್ತಿರುವುದು, ಹಾಗೂ ಎಲ್ಲಾ ಸ್ತರದ ವ್ಯಕ್ತಿಗಳಲ್ಲೂ ಕಾಣಬಹುದಾಗಿದೆ. ಇವುಗಳಿಂದ ಆಗಾಗ್ಗೆ ಮಾನಸಿಕ ಸ್ವಾಸ್ಥ್ಯಕ್ಕೆ ಭಂಗವುಂಟಾಗುವುದು. ಅದು ದೇಹಾರೋಗ್ಯದ ಮೇಲೂ ಪ್ರಭಾವ ಬೀರುವುದು. ದೇಹದ ಅನಾರೋಗ್ಯಕ್ಕೆ ಔಷಧಿಗಳು ಇವೆ. ಮಾನಸಿಕ ಪ್ರಕ್ಷುಬ್ಧತೆಗೂ ಕೆಲವು ಮದ್ದುಗಳು ಇವೆ. ಅವು ತಕ್ಕಮಟ್ಟಿಗೆ ಕೆಲಸ ಮಾಡುತ್ತವೆ. ಅವನ್ನು ಬಿಡಲಾಗದೆ ತೆಗೆದುಕೊಳ್ಳುತ್ತೇವೆ. ಈ ಕ್ಲೇಶಗಳ ಹಿಂದೆ ಅವಿತು ಕೊಂಡಿರುವ, ಸದಾ ಕ್ರಿಯಾಶೀಲವಾದ, ಕಾರಣವೊಂದಿದೆ. ಅದೇ ಆಸೆ. ಅದು ನಮ್ಮ ಎಲ್ಲಾ ಕರ್ಮಗಳ ಹಿಂದೆ, ಪ್ರಯತ್ನಗಳ ಹಿಂದೆ ಇದ್ದು ನಮ್ಮನ್ನು ಆಟವಾಡಿಸುತ್ತಿದೆ.

ಹಣ

ಹಣವೇ ಜೀವನಕ್ಕೆ ಮುಖ್ಯ, ಅದೊಂದಿದ್ದರೆ ನೀನು ಏನನ್ನಾದರೂ ಮಾಡಬಹುದು ಎಂದು ಆಸೆ ನಮ್ಮ ಮನಸ್ಸಿಗೆ ಹೇಳಿಕೊಡುವುದು. ನಾವು ಹಣವನ್ನು ಬೆನ್ನಟ್ಟಿ ಹೋದರೆ ಅದು ಬೇರೊಂದೆಡೆಗೆ ಹರಿದು ಹೋಗುತ್ತಾ ನಮ್ಮನ್ನು ಸೆಳೆದುಕೊಂಡು ಹೋಗುವುದು. ಹಣವಿದ್ದರೆ ಏನಂತೆ, ಅದಕ್ಕೆ ತಕ್ಕಂತೆ ಅಂತಸ್ತು, ಗೌರವ ಇರಬೇಡವೇ ಎಂದು ಆಸೆ ಇನ್ನೊಂದು ಮೆಟ್ಟಲನ್ನು ಏರಿಸುವುದು. ಇವು ಇನ್ನಷ್ಟು ಪರಿಕರ, ವಸ್ತು, ವಾಹನ, ಸಂಬಂಧ, ಪ್ರತಿಷ್ಠೆಗಳನ್ನು ನಮ್ಮ ಜೀವನಕ್ಕೆ ಸೇರಿಸುವುವು. ಇಷ್ಟಾದರೆ ಆಯಿತೆ, ಅಂತಸ್ತಿಗೆ ಸಮನಾದ ಕೀರ್ತಿ ದೊರಕಬೇಡವೆ? ಆಗ ತಾನೇ ಹೆಚ್ಚು ಹಣ ಬರುವುದು? ಎಂದು ಆಸೆ ಮದವೇರಿಸುವುದು. ಈ ಪ್ರಯತ್ನಗಳ ಗುಂಗಿನಲ್ಲಿ ವಿವೇಕ ಜಾರುವುದು. ಮೆಟ್ಟಿಲಿನಿಂದ ಉರುಳಿದ ಚೆಂಡಿನಂತೆ ನಮ್ಮ ಜೀವನ ಜಾರಿ ಬೀಳಲಾರಂಭಿಸುವುದು. ಒಡೆದ ಗಾಜಿನಂತೆ, ಅನಿರೀಕ್ಷಿತ ದಿಕ್ಕುಗಳಲ್ಲಿ ಹಣ ಹಾರಿಹೋಗಲಾರಂಭಿಸುವುದು. ಅವನ್ನು ಹಿಡಿಯಲಾರದೆ ಜೀವಿ ಕಂಗಾಲಾಗುವನು. ಹಣದ ಆಸೆಯ ಕುದುರೆ ನಮ್ಮನ್ನು ಕಷ್ಟಗಳ ಮಧ್ಯೆ ಉರುಳಿಸಿ ಹಾರಿ ಹೋಗುವುದು.

ಆಸ್ತಿ-ಪಾಸ್ತಿ

ಸುಖವನ್ನು ನಾವು ಅನುಭವಿಸಿದರೆ ಸಾಕೆ? ನಮ್ಮ ಮುಂದಿನ ಪೀಳಿಗೆ ನಮ್ಮಂತೆ ಕಷ್ಟಪಡದೆ, ನಮಗಿಂತ ಹೆಚ್ಚು ಸುಖವಾಗಿರಲು ನಾವು ಪ್ರಯತ್ನಿಸಬೇಕಲ್ಲವೆ? ಅದಕ್ಕಾಗಿ ನಾವು ಸ್ವಲ್ಪ ಕಷ್ಟಪಡಲು, ತ್ಯಾಗ ಮಾಡಲು ಹಿಂಜರಿಯಬಾರದಲ್ಲವೆ? ಎಂದು ಆಸ್ತಿಯ

ಗಳಿಕೆಗೆ ಆಸೆ ನಮ್ಮ ಮನಸ್ಸಿನಲ್ಲಿ ಅಸ್ತಿಭಾರ ಹಾಕುವುದು. ಮಗು ಒಂದೇ ಇದ್ದರೂ ನಾಲ್ಕಾರು ದಿಕ್ಕುಗಳಲ್ಲಿ ನಿವೇಶನಗಳ ಖರೀದಿಗೆ ತಂದೆತಾಯಿಗಳು ಮುಂದಾಗುವರು. ಮಕ್ಕಳ ಭವಿಷ್ಯ ಜೀವನ ಕ್ಕಾಗಿ ಆಭರಣಗಳನ್ನು ಕಲೆ ಹಾಕುವರು. ಇಂದಿನ ದಿನಗಳಲ್ಲಿ ನಾವು ಕಾಣುವಂತೆ, ಮಕ್ಕಳು ಸ್ವತಂತ್ರರಾದ ಮೇಲೆ ಇವನ್ನೆಲ್ಲಾ ತಂದೆತಾಯಿಗಳ ಬಳಿಯೇ ಬಿಟ್ಟು ತಮಗೆ ಅನುಕೂಲವಾದೆಡೆ ತಮ್ಮ ಮನೆಗಳನ್ನೋ ಆಸ್ತಿಯನ್ನೋ ಸೃಷ್ಟಿಸಿ, 'ನೀವು ಮಾಡಿರುವು ದನ್ನು ಜೋಪಾನವಾಗಿ ಇಟ್ಟಿರಿ, ಸಮಯ ಬಂದಾಗ ಮತ್ತಾರಿ ಗಾದರೂ ಕೊಡಿ, ನಾವು ಅವನ್ನು ರಕ್ಷಿಸಲಾರೆವು, ಅನುಭವಿಸ ಲಾರೆವು' ಎಂದು ತಿಳಿಸುವರು. ಮಕ್ಕಳಿಗೇ ಆಸ್ತಿ ಸಮೃದ್ಧವಾಗಿ ಇರುವಾಗ ಮತ್ತಾರಿಗೆ ನಾವು ಇವನ್ನೆಲ್ಲ ಕೊಡುವುದು ಎಂಬ ಯೋಚನೆ ಗಳಿಸಿದವರನ್ನು ಕಾಡುತ್ತಿರುವುದು.

ಸುಖಾಪೇಕ್ಷೆ

ಜೀವನದಲ್ಲಿ ಸುಖ, ಪ್ರಪಂಚದಲ್ಲಿ ಸುಖ, ಸಂಸಾರದಲ್ಲಿ ಸುಖ — ಇವನ್ನು ಅರಸುವುದು ಸ್ವಾಭಾವಿಕ. ಇತರರು ಸುಖ ವಾಗಿರಲೆಂದು ಹರಸುವುದು ಸಾಮಾನ್ಯ. ಹೀಗೆ ಜೀವನ ಪ್ರಾರಂಭವಾದರೂ ಕ್ರಮೇಣ ನಮ್ಮ ಅನುಭವಕ್ಕೆ ಬರುವುದು, ಇದಕ್ಕೆ ಕೊನೆಯಿಲ್ಲ , ಸುಖವನ್ನು ಎಷ್ಟೇ ಅರಸಿದರೂ ತೃಪ್ತಿ ಬರುವುದಿಲ್ಲ, ಇನ್ನೂ ಬೇಕೆನಿಸುವುದು. ಅದರಿಂದ ಕಷ್ಟನಷ್ಟಗಳು ಬರುತ್ತವೆ. ಅವನ್ನು ಎದುರಿಸುವುದರಲ್ಲಿ ಸುಖದ ಬೇಟೆ ಸಾಗು ತ್ತದೆ. ಸುಖ ನೀರಸವಾಗುತ್ತದೆ. ಅನೇಕ ವೇಳೆ, ತಾಯಿ ಮಗಳಿಗೆ ಹೇಳುತ್ತಾಳೆ, 'ನೀನು ಸುಖವಾಗಿರಬೇಕು, ನನ್ನಂತೆ ಕಷ್ಟಗಳಿಗೆ ಒಳಗಾಗಬಾರದು' ಎಂದು. ಆದರೆ ಅವಳ ತಾಯಿಯೂ ಅವಳಿಗೆ ಹೀಗೆಯೇ ಬಯಸಿದ್ದಳು ಎಂಬುದನ್ನು ಗಮನಿಸಿದಾಗ, ಸುಖದ ಬೇಟೆ ಕಷ್ಟದಲ್ಲಿ , ನಿರಾಶೆಯಲ್ಲಿ , ದುಃಖದಲ್ಲಿ ಪರ್ಯವಸಾನ ವಾಗುವುದು ಕಾಣಬರುತ್ತದೆ. ಇನ್ನು, ತಮ್ಮ ಸುಖಗಳಿಗಾಗಿ ಇತರರಿಗೆ ಹಾನಿಯುಂಟುಮಾಡುವ, ಮೋಸ ಮಾಡುವ ದಾರಿ ಯನ್ನು ಹಿಡಿಯುವವರ ಗತಿ ಜೈಲಿನಲ್ಲಿಯೋ ಸಮಾಜದಲ್ಲಿಯೋ ಶಿಕ್ಷೆ ಅನುಭವಿಸುತ್ತಿರುವುದನ್ನು ಕಾಣಬಹುದಾಗಿದೆ. ಆಮೋದ ಪ್ರಮೋದಗಳೂ ನಮ್ಮ ಬಯಕೆಗಳನ್ನು ತಾತ್ಕಾಲಿಕವಾಗಿ ತೃಪ್ತಿ ಪಡಿಸುತ್ತವೆ. ಮಿತ್ರರು, ಇಷ್ಟರು, ನೆಂಟರುಗಳ ಮೂಲಕ ದೊರೆ ಯುವ ಸಂತೋಷವೂ ಅಲ್ಪಕಾಲದ್ದಾಗಿ ನಿಷ್ಠುರದಲ್ಲಿ ಕೊನೆ ಯಾಗುತ್ತವೆ. ರಂಜನೆಗಾಗಿ ನಮ್ಮವರೆಂದು ಅವರೊಡನೆ ಹೊರ ಟರೆ ದಾಕ್ಷಿಣ್ಯ, ವೈಮನಸ್ಯ, ನಷ್ಟ ಕಾದಿರುತ್ತವೆ. ಅಂತೂ ಸುಖ ಅಸುಖದಿಂದ ಸುತ್ತುವರಿಯಲ್ಪಟ್ಟಿರುತ್ತದೆ.

ಹೆಸರು-ಕೀರ್ತಿ

ಕೆಲವರು ಹೆಸರು, ಕೀರ್ತಿಗಳ ಸುಖಕ್ಕೆ ಕಷ್ಟ ಪಡುತ್ತಾರೆ. ನಾವು ಮಾಡುವ ಕೆಲಸಕ್ಕಿಂತ ಹೆಚ್ಚಾಗಿ ನಾವು ಮಾಡಿದೆವೆಂಬುದು ಮುಖ್ಯ ಅವರಿಗೆ. ಪ್ರಶಂಸೆ ಪಾರಿತೋಷಕ ಮನ್ನಣೆಗಳನ್ನು ನಿರೀ ಕ್ಷಿಸುತ್ತಾರೆ. ದಿನೇ ದಿನೇ ಅವರ ಕೀರ್ತಿ ಹೆಚ್ಚಬೇಕೆಂದು ಆಶಿಸಿ ಅದಕ್ಕಾಗಿ ಹೆಚ್ಚು ಪ್ರಯತ್ನ ಮಾಡುತ್ತಾರೆ. ಹೊಗಳಿಕೆಯ ಲಂಚಕ್ಕೆ ಕೈಯೊಡ್ಡುತ್ತಾರೆ. ಆ ಕೈಗಳಿಗೆ ಪೆಟ್ಟು ಬಿದ್ದಾಗ ಪರಿತಪಿಸುತ್ತಾರೆ. ಕೀರ್ತಿಯ ಹಿಂದೆ ಹೋದವರಿಗೆ ಅಪಕೀರ್ತಿಯ ನೆರಳು ಬೀಳು ವುದು. ಕೆಲವು ವೇಳೆ ಕೀರ್ತಿಯ ಹಿಂದೆ ಹಣದ ಆಸೆ ಇರುವುದು. ಅದನ್ನು ಮುಚ್ಚಿಕೊಳ್ಳಲು ತಾವು ಸೇವೆ ಮಾಡುತ್ತಿರುವುದಾಗಿ ಹೇಳಿಕೊಳ್ಳುವರು. ಕೆಲವರು ಹೆಸರಿಗಾಗಿ ಸೇವೆ ಮಾಡಬಯಸು ತ್ತಾರೆ. ಸೇವಾಸಂಸ್ಥೆಗಳನ್ನು ತೆರೆಯುತ್ತಾರೆ. ಸೇವೆಯ ಹಿಂದೆಯೂ ಹಣ, ಕೀರ್ತಿಯ ಆಸೆ ಇರುವುದರಿಂದ ಅಪಕೀರ್ತಿ ಅವಮಾನ ಮುಂತಾದ ಕಹಿ ಫಲಗಳು ಬಂದು ಅವರ ಸೇವಾಕಾರ್ಯಕ್ಕೆ ತೆರೆ ಬೀಳುವುದು.

ಲೋಭ

ಹೆಚ್ಚು ಹಣದ ಬಯಕೆ ಅದಕ್ಕೆ ಸಂಬಂಧಪಟ್ಟ ಸ್ನೇಹಿತರನ್ನು ಒದಗಿಸುವುದು. ಗಳಿಸುವ ಚಟ ಅದನ್ನು ಸಂಗ್ರಹಿಸುವ ಚಟಕ್ಕೆ ದಾರಿ ಮಾಡಿಕೊಡುತ್ತದೆ. ಅದೇ ಲೋಭ. ಹಣ ಬಂದದ್ದೆಲ್ಲಾ ನನಗೇ ಬರಲಿ ಎಂಬ ಅತಿ ಆಸೆಯೂ ಮೂಡುವುದು. ಅವರ ಲ್ಲಿರುವ ಹೆಚ್ಚು ಹಣ ಇತರರ ಗಮನಕ್ಕೆ ಬಾರದಂತೆ ಮಾಡಲು ಸರಳತೆಯ ಸೋಗಿನಿಂದ ಹೊರಗೆ ಸರಳರಂತೆ ಕಾಣಲು ಯತ್ನಿಸು ತ್ತಾರೆ. ಇದು ಅಂಗೈಯಿಂದ ದೇಹವನ್ನು ಮುಚ್ಚಿಕೊಳ್ಳಲು ಪ್ರಯ ತ್ನಿಸಿದಂತಾಗುವುದು. ಬರಬೇಕು, ಆದರೆ ಹೋಗಬಾರದು ಎಂಬ ದೃಷ್ಟಿ ಅವರನ್ನು ಲೋಭಿಗಳನ್ನಾಗಿ ಮಾಡುತ್ತದೆ. ಸುಖಜೀವನಕ್ಕೆ ಬೇಕಾದುದೆಲ್ಲ ಯಥೇಚ್ಛವಾಗಿ ಇದ್ದರೂ ಕೊಡಬೇಕಾಗಿ ಬಂದಾಗ ಸಣ್ಣತನ ತೋರುವರು. ಮರ್ಯಾದೆ ಹೋದರೂ ಪ್ರಾಣ ಹೋದರೂ ಹಣ ಅವರ ಕೈಯಿಂದ ಹೋಗಬಾರದು. ಪುಕ್ಕಟೆ ಯಾಗಿ ಏನು ಸಿಕ್ಕಿದರೂ ಸರಿಯೆ, ನನಗೆ ಎರಡಿರಲಿ ಎನ್ನುವರು. ಸಾಮಾನ್ಯವಾಗಿ ಅವರು ಕೊಳಕಾಗಿರುವರು. ರೋಗ ಬಂದರೆ ಅದಕ್ಕೇ ಹೊಂದಿಕೊಳ್ಳುವರು, ವೈದ್ಯರಿಗೆ ಕೊಡುವ ಹಣವನ್ನು ಉಳಿಸಲು ಯತ್ನಿಸುವರು. ಯೋಗ್ಯವಾದುದನ್ನು ಅವರು ಸ್ವೀಕರಿ ಸುವುದಿಲ್ಲ. ಎಲ್ಲವನ್ನೂ ಎಲ್ಲರನ್ನೂ ಸಂದೇಹಿಸುತ್ತಾ ಋಜು ಮಾರ್ಗವನ್ನು ಹಳಿಯುವರು. **ನಾಸ್ತಿ ಲೋಭಸಮೋ ವ್ಯಾಧಿಃ** — 'ಲೋಭಕ್ಕೆ ಸಮನಾದ ವ್ಯಾಧಿ ಇಲ್ಲ' ಎಂಬ ಸುಭಾಷಿತದಂತೆ, ಹಣ ಇದ್ದೂ ಇಲ್ಲದವರಂತೆ ಅವರು ನರಳುತ್ತಾರೆ.

ಲೋಭಸಂಭವರು ಇನ್ನಿಬ್ಬರಿರುವರು. ಅವರೇ ಕಳ್ಳತನ ಮತ್ತು ಸುಳ್ಳುತನ. ಇವರು ಅನ್ಯೋನ್ಯ ಸಹೋದರರು; ಒಬ್ಬ ರನ್ನು ಬಿಟ್ಟು ಇನ್ನೊಬ್ಬರಿರಲಾರರು. ತಮ್ಮದಲ್ಲದುದನ್ನು ಪಡೆ ಯಲು ಪ್ರಯತ್ನಿಸುತ್ತಾರೆ. ನೋಡಲು ಭಕ್ತರು. ದೇವಸ್ಥಾನಗಳಲ್ಲಿ, ಮಠಗಳಲ್ಲಿ ಭಕ್ತರ ವಸ್ತುಗಳನ್ನು ಸ್ವಲ್ಪವೂ ಸುಳಿವು ಸಿಗದಂತೆ ತೆಗೆದುಕೊಳ್ಳುವರು. ಅವರೆಂತಹ ಭಾಷಾಪ್ರೇಮಿಗಳೆಂದರೆ, ರವೀಂದ್ರ ನಾಥ ಠಾಕೂರರ ನೊಬೆಲ್ ಪಾರಿತೋಷಕವನ್ನು ಕದ್ದರು. ಅವ ರನ್ನು ಕಂಡುಹಿಡಿಯಲು ಪರಿಣತ ಪೋಲೀಸ್ ಅಧಿಕಾರಿಗಳು ಹಲವು ವರ್ಷ ಪ್ರಯತ್ನಿಸಿ ಸೋಲೊಪ್ಪಿಕೊಂಡರು. ಅದರ ನಕ ಲನ್ನು ನೊಬೆಲ್ ಸಮಿತಿಯಿಂದ ಸರಕಾರ ಪಡೆಯಬೇಕಾಯಿತು. ಸೋದರಿ ನಿವೇದಿತೆಯ ಜಪಮಾಲೆ, ಶ್ರೀರಾಮಕೃಷ್ಣರು ಮತ್ತು

ಶಾರದಾದೇವಿಯವರಿಗೆ ಸಂಬಂಧಪಟ್ಟ ಕೆಲವು ವಸ್ತುಗಳನ್ನು ಹಾರಿಸಿಕೊಂಡು ಹೋದವರು ಇದೇ ಗುಂಪಿಗೆ ಸೇರಿದವರು. ಸಮಯಕ್ಕೊಂದು ಸುಳ್ಳನ್ನು ಸೃಷ್ಟಿಸುವ ಚಮತ್ಕಾರ ಇವರಿಗಿರುತ್ತದೆ. ವ್ಯವಹಾರನಿಪುಣರಂತೆ ವರ್ತಿಸುತ್ತಾರೆ. ತಾವೇ ನೇಯ್ದ ಸುಳ್ಳಿನ ಬಲೆಯಲ್ಲಿ ಸಿಲುಕಿ ಅವರ ಜೀವನ ಕ್ಲಿಷ್ಟವಾಗುವುದು.

ಕ್ರೋಧ

ಮುಖ್ಯವಾಗಿ ಹಣ, ವಸ್ತು ಅಥವಾ ಕೀರ್ತಿಯ ಕಾಮನೆಯಿಂದ ಸಾಮಾನ್ಯವಾಗಿ ಉದ್ಭವಿಸುವ ಭಾವನೆ ಕ್ರೋಧ. ಕಾಮನೆಗಳಿಗೂ ತಮಗೂ ಅಡ್ಡಿಯಾಗುವವರ ಮೇಲೆ ಕ್ರೋಧ ವುಂಟಾಗುತ್ತದೆ. ಕೆಲವರು ಕೋಪಿಸಿಕೊಳ್ಳುತ್ತಾರೆ, ಕೆಲವರು ಅವರಿಗೆ ಹಾನಿಯುಂಟುಮಾಡುತ್ತಾರೆ. ಅವರು ತಾಮಸಿಕರಾದರೆ ಕೊಲ್ಲುತ್ತಾರೆ. ವೈರ, ದ್ವೇಷ, ಮಾತ್ಸರ್ಯ, ಕೊಲೆಗಡುಕತನ ಇವೆಲ್ಲಾ ಕ್ರೋಧದ ರೂಪಗಳು. ತಮಗೆ ಅತ್ಯಂತ ಪ್ರಿಯರಾದವರನ್ನು ಕೊಂದರು ಎಂಬ ವಾರ್ತೆಯನ್ನು ಕೇಳಿದಾಗ ಇದು ಹೇಗೆ ಸಾಧ್ಯ ಎಂದು ಅರ್ಥವಾಗದೆ ಆಶ್ಚರ್ಯಪಡುತ್ತೇವೆ. **ಕಾಮಾತ್ ಕ್ರೋಧೋಽಭಿಜಾಯತೇ**–'ಕಾಮನೆಯಿಂದ ಕ್ರೋಧ ಉಂಟಾಗುತ್ತದೆ ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಕೊಟ್ಟಿರುವ ವಿವರಣೆಯಿಂದ ಇದು ನಮಗೆ ಅರ್ಥವಾಗುತ್ತದೆ *(ಭಗವದ್ಗೀತಾ: ೨-೬೨)*. ಕ್ರೋಧದಿಂದ ಇತರರಿಗಷ್ಟೇ ಅಲ್ಲದೆ ಅವರನ್ನು ನೆಚ್ಚಿರುವವರಿಗೂ ಹಾನಿಯುಂಟಾಗುತ್ತದೆ. ಆದರೆ ಅತ್ಯಂತ ಹೆಚ್ಚಾಗಿ ಆಗುವುದು ಅವರಿಗೆ. ಏಕೆಂದರೆ, ಅವರ ಜೀವನದಲ್ಲಿ ಪ್ರಗತಿ ಕಲ್ಯಾಣಗಳನ್ನು ಸಾಧಿಸುವ ಬದಲು, ಜೈಲಿನಲ್ಲಿಯೋ ಅಥವಾ ಕದಡಿದ ಬುದ್ಧಿ, ನಷ್ಟ, ದುಃಖ, ಪಶ್ಚಾತ್ತಾಪದ ಉರಿಯಲ್ಲಿ ಜೀವಮಾನವೆಲ್ಲಾ ಬೇಯುವ ನರಕಸದೃಶ ಜೀವನದಲ್ಲೋ ಅವರು ಕಾಲಯಾಪನೆ ಮಾಡಬೇಕಾಗುತ್ತದೆ. ಕ್ರೋಧ ಅವರ ನಾಶಕ್ಕೆ ಕಾರಣವಾಗುತ್ತದೆ. ಆದುದರಿಂದಲೇ ನಮ್ಮ ಹಿರಿಯರು, **ನಾಸ್ತಿ ಕ್ರೋಧಸಮೋ ರಿಪುಃ** –'ಕ್ರೋಧಕ್ಕೆ ಸಮನಾದ ಶತ್ರುವಿಲ್ಲ' ಎಂಬ ಸುಭಾಷಿತವನ್ನು ನಮ್ಮ ಮುಂದಿಟ್ಟಿರುವರು. ಪ್ರಸ್ತುತ ನಮ್ಮ ದೇಶವನ್ನು ಯುವ ದೇಶವೆಂದು ಸಂಬೋಧಿಸಲಾಗುತ್ತಿದೆ. ಇದಕ್ಕೆ ಕಾರಣ, ನೂರರಲ್ಲಿ ೬೭ ಮಂದಿ ೩೫ ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರುತ್ತಾರೆ. ಮೂರನೆ ಎರಡು ಭಾಗದ ಜನಸಂಖ್ಯೆ ೩೫ ವರ್ಷ ದಾಟದ ತರುಣರಿಂದ ತುಂಬಿದೆ ಭರತಖಂಡ! ತಂದೆತಾಯಿಗಳ ಸಂಖ್ಯೆ ಹೆಚ್ಚು, ಮಕ್ಕಳ ಸಂಖ್ಯೆ ಕಡಿಮೆ. ಆದ್ದರಿಂದ ಮಕ್ಕಳ ನಿರ್ದೇಶನದಂತೆ ತಂದೆತಾಯಿಗಳು ನಡೆದುಕೊಳ್ಳಬೇಕು. ಇಂದಿನ ಮಕ್ಕಳಿಗೆ ಎಂದೂ ಇಲ್ಲದ ಪ್ರೀತಿ, ಸೌಕರ್ಯಗಳು ಇವೆ. ಇದು ಸಂತೋಷದ ವಿಷಯ. ಇಂತಹ ದೇಶ ಏನನ್ನಾದರೂ ಸಾಧಿಸಬಹುದು. ಇಂದಿನ ಯುವಪೀಳಿಗೆಯಲ್ಲಿ ಬೇಕಾದಷ್ಟು ಹಣ, ಆಸ್ತಿ ಇದೆ. ಅವರಿಗೆ ಅಧಿಕಾರ ಮತ್ತು ಕೀರ್ತಿ ದೊರೆಯುತ್ತಿದೆ. ಇದರೊಂದಿಗೆ ವಿವೇಕ ಬೇಕಾಗಿದೆ. ಇಂದಿನ ತಾರುಣ್ಯದ ಸಮಾಜವನ್ನು ಗಮನಿಸಿದಾಗ ಸುಭಾಷಿತವೊಂದು ನೆನಪಾಗುತ್ತದೆ:

ಯೌವನಂ ಧನಸಂಪತ್ತಿಃ ಪ್ರಭುತ್ವಂ ಅವಿವೇಕತಾ ।
ಏಕೈಕಮಪಿ ಅನರ್ಥಾಯ ಕಿಂ ಯತ್ರ ಚತುಷ್ಟಯಂ ॥

ಯೌವನ, ಧನಸಂಪತ್ತು, ಅಧಿಕಾರ ಮತ್ತು ಅವಿವೇಕ – ಇವುಗಳಲ್ಲಿ ಒಂದು ಇದ್ದರೂ ಅನರ್ಥ ಉಂಟಾಗುವಾಗ, ಇವು ನಾಲ್ಕೂ ಇದ್ದರೆ ಏನಾಗಬಹುದು ಎಂದು ಉದ್ಗರಿಸಿದ್ದಾರೆ ನಮ್ಮ ಹಿರಿಯರು. ಯಾವುದು ಜೀವನಕ್ಕೆ ಮುಖ್ಯ, ಒಳ್ಳೆಯದು, ಯಾವುದಲ್ಲ ಎಂಬುದು ತಿಳಿಯದಿದ್ದರೆ ಜೀವನ ಕ್ಲಿಷ್ಟವಾಗುತ್ತದೆ.

ಅಸೂಯೆ

ಕೆಲವರನ್ನು ಅಸೂಯೆ ಕಾಡುವುದು. ಅಸೂಯೆ ಸಂಕುಚಿತ ಮನೋಭಾವದ ಮತ್ತೊಂದು ರೂಪ. ತಮಗೆ ಎಲ್ಲಾ ಇದ್ದರೂ ಇತರರಿಗೆ ಒಳ್ಳೆಯದಾದರೆ ಅಸೂಯಾಪರರು ಸಹಿಸಲಾರರು. 'ಅವರಿಗೆ ಯೋಗ್ಯತೆ ಇಲ್ಲದಿದ್ದರೂ ಅದೃಷ್ಟ ಒಲಿದು ಏನೆಲ್ಲ ಸಿಕ್ಕಿಬಿಟ್ಟಿದೆ!' ಎಂದು ಕರುಬುವರು. ಅವರ ಮನಸ್ಸು ತಳಮಳಗೊಂಡು ಅಶಾಂತವಾಗುವುದು. ಸುಖಜೀವನಕ್ಕೆ ಬೇಕಾದುದೆಲ್ಲ ಇದ್ದರೂ ಅದನ್ನು ಅನುಭವಿಸಲಾರದೆ ಹೋಗುವರು. ಕೈಗೆ ಬಂದದ್ದು ಬಾಯಿಗಿಲ್ಲವಾಗುವುದು. ಜೀವನದಲ್ಲಿ ಗಳಿಸಲು ಪಡೆಯಲು ಸಾಧಿಸಲು ಅನುಭವಿಸಲು ಎಲ್ಲರಿಗೂ ಅವಕಾಶವಿದೆ. ಅದನ್ನು ಉಪಯೋಗಿಸಿಕೊಂಡು ಅವರವರ ಗುರಿ ತಲುಪಲು ಸಾಧ್ಯವಿದೆ. ಮಾಡಬೇಡಿ ಎಂದು ಯಾರೂ ಹೇಳಿಲ್ಲ. ನಾವು ಪ್ರಯತ್ನಿಸಿ ನಮ್ಮ ಪುರೋಭಿವೃದ್ಧಿಗೆ ಶ್ರಮಿಸುವುದಕ್ಕೆ ಬೇಕಾದ ಶಕ್ತಿ ಸಾಮರ್ಥ್ಯಗಳು ನಮಗೆ ಲಭಿಸಿವೆ. ನಾವೂ ಸಾಧಿಸಿ ನಮ್ಮ ಗುರಿಯೆಡೆಗೆ ಮುಂದುವರಿಯಬಹುದು. ಇತರರ ಬಗ್ಗೆ ಅಸೂಯೆ ಉಂಟಾದರೆ ಪ್ರಶಸ್ತವಾದ ಆ ಶಕ್ತಿಯ ಬಹುಭಾಗ ವ್ಯರ್ಥವಾಗುತ್ತದೆ. ಇದೇ ಅಸೂಯೆಯಿಂದ ನಮಗಾಗುವ ಹಾನಿ. ಇತರರ ಬಗ್ಗೆ ಅಸೂಯೆಪಡುವ ಕಾಲ ಮತ್ತು ಶಕ್ತಿಯನ್ನು ನಮ್ಮ ಜೀವನಕ್ಕೆ ತೊಡಗಿಸಿದರೆ ನಾವು ಉದ್ಧಾರವಾಗುವೆವು. ನಮಗೆ ಶಾಂತಿ, ಸಮಾಧಾನ ಬೇಕಾದರೆ ಅನಸೂಯರಾಗಬೇಕು. ಎಲ್ಲಾ ವ್ಯಾಧಿಗಳಿಗೂ ಔಷಧವಿದೆ. ಆದರೆ ಅಸೂಯೆಯ ವ್ಯಾಧಿಯಿಂದ ಪಾರಾಗಬೇಕಾದರೆ ಅದನ್ನು ಬಿಡುವುದೊಂದೇ ಔಷಧ.

ಪಾಂಡಿತ್ಯ

ಹಣ ಅಥವಾ ಆಸ್ತಿಯ ಲೋಭದಿಂದ ಮಾತ್ರವೇ ನಮ್ಮ ಜೀವನ ಕ್ಲಿಷ್ಟವಾಗುತ್ತಿಲ್ಲ. ಪಾಂಡಿತ್ಯದ ಮದವೂ ಅಷ್ಟೇ ಹಾನಿಕಾರಕವಾಗಿದೆ. ಕೇವಲ ಪಾಂಡಿತ್ಯದಿಂದ ಸೃಷ್ಟಿಯಾಗುವುದು, ಕೆಲಸಕ್ಕೆ ಬಾರದ ಆಲೋಚನೆಗಳು, ದಾರಿ ತಪ್ಪಿಸುವ ಸಂಶೋಧನೆಗಳು, ಸಾಮಾನ್ಯರ ಮನಸ್ಸು ಬುದ್ಧಿಗಳನ್ನು ಕದಡಿಸುವ ಭಾಷ್ಯಗಳು, ಶಾಸ್ತ್ರದ ಕಗ್ಗಂಟುಗಳು. ಪಾಂಡಿತ್ಯದೊಂದಿಗೆ ಅನುಭವ ಸೇರಬೇಕು. ನಾವು ತಿಳಿದಿರುವುದನ್ನು ಉಪಯೋಗಿಸಿ ನೋಡಬೇಕು. ಅದು ಸರಿಯೇ ಎಂದು ಪರೀಕ್ಷಿಸಬೇಕು. ಅವಕಾಶ ದೊರೆತಾಗಲೆಲ್ಲ ಮತ್ತೆ ಮತ್ತೆ ನಮ್ಮ ತಿಳಿವಳಿಕೆಯನ್ನು ಪರೀಕ್ಷಿಸಬೇಕು. ಆಗಲೇ ಅದು ಯಾವಾಗಲೂ ಸರಿಯಾಗಿ ಕೆಲಸ ಮಾಡು

ತ್ತದೆಯೇ ಇಲ್ಲವೇ ಎಂದು ತಿಳಿಯುವುದು. ಶ್ರೀರಾಮಕೃಷ್ಣರು ತಮ್ಮ ಅನುಭವಗಳನ್ನು ಯಾವಾಗಲೂ ಪರೀಕ್ಷಿಸುತ್ತಿದ್ದರು. ಅವರ ಅನುಭವಗಳನ್ನು ಪರೀಕ್ಷಿಸುವಂತೆ ತಮ್ಮ ಶಿಷ್ಯರಿಗೂ ಹೇಳುತ್ತಿದ್ದರು. ಪರೀಕ್ಷಿಸದೆ ಸ್ವೀಕರಿಸಬೇಡಿ ಎಂದು ಎಚ್ಚರಿಸುತ್ತಿದ್ದರು.

ನಿರ್ದುಷ್ಟ ಪಾಂಡಿತ್ಯ

ನಾವು ಇತರರ ಮುಂದಿಡುವ ವಿಷಯಗಳು – ಅವು ನಿಯಮಗಳಾಗಿರಲಿ, ತತ್ತ್ವಗಳಾಗಿರಲಿ, ಅಭಿಪ್ರಾಯಗಳಾಗಿರಲಿ ಅಥವಾ ಸಂಶೋಧನೆಯ ಫಲವಾಗಿರಲಿ – ಮೊದಲನೆಯದಾಗಿ ಅವು ಸರಿಯಾಗಿರಬೇಕು, ಸತ್ಯವಾಗಿರಬೇಕು, ಎರಡನೆಯದಾಗಿ ಉಪಯೋಗಕರವಾಗಿರಬೇಕು. ಸತ್ಯದೂರವಾದ ವಿಷಯಗಳನ್ನು ತಿಳಿಸುವುದರಿಂದ, ಹರಡುವುದರಿಂದ ಇತರರಿಗೆ ಹಾನಿಯುಂಟಾಗುತ್ತದೆ. ಅನುಪಯೋಗಿಯಾದ ವಿಷಯಗಳಿಂದ ಅವರ ಬುದ್ಧಿ ಕದಡುತ್ತದೆ ಮತ್ತು ಕಾಲ ವ್ಯರ್ಥವಾಗುತ್ತದೆ. ಪಾಂಡಿತ್ಯಕ್ಕಾಗಿ ಪಾಂಡಿತ್ಯವೆಂದು ನಂಬಿರುವವರಿಂದ ಸಾಮಾನ್ಯರ ಜೀವನ ಕ್ಲಿಷ್ಟವಾಗುತ್ತದೆ. ಪಾಂಡಿತ್ಯದ ಉಪಯೋಗ, ಕ್ಲಿಷ್ಟವಾದ ವಿಷಯಗಳನ್ನು ತತ್ತ್ವಗಳನ್ನು ಎಲ್ಲರಿಗೂ ಅರ್ಥವಾಗುವಂತೆ ಸರಳವಾಗಿ ತಿಳಿಸುವುದು; ಸರಳವಾದುದನ್ನು ಕ್ಲಿಷ್ಟಗೊಳಿಸುವುದಲ್ಲ! ಪಾಂಡಿತ್ಯದ ಉಪಯೋಗ ತತ್ತ್ವಪ್ರತಿಪಾದನೆ, ತತ್ತ್ವಗಳನ್ನು ಸುಲಭವಾಗಿ ಸಾಮಾನ್ಯರಿಗೆ ತಿಳಿಯುವಂತೆ ವಿವರಿಸುವುದು. ಇದೇ ಸಮಾಜಕ್ಕೆ ಅವರು ನೀಡುವ ಕೊಡುಗೆ. ಅದರಲ್ಲಿ ಪ್ರಾಮಾಣಿಕತೆ ಇರಬೇಕು, ಸರಳತೆ ಇರಬೇಕು. ಅದೇ ನಿರ್ದುಷ್ಟ ಪಾಂಡಿತ್ಯ. ಈ ವಿಷಯದಲ್ಲಿ ಶ್ರೀರಾಮಕೃಷ್ಣರು ಅದ್ವಿತೀಯರು. ಎಂತಹ ಪಂಡಿತರಿಗೂ ವಾಗ್ಮಿಗಳಿಗೂ ಯೋಗಿಗಳ ಅನುಭವಗಳಿಗೂ ನಿಲುಕದ ಆಧ್ಯಾತ್ಮಿಕ ತತ್ತ್ವಗಳನ್ನು ನಿರಕ್ಷರಕುಕ್ಷಿಗಳಿಗೂ ಅರ್ಥವಾಗುವಂತೆ, ಕೆಲವು ವೇಳೆ ಹಾಸ್ಯವಾಗಿ, ನಿತ್ಯಜೀವನದ ಉದಾಹರಣೆಗಳೊಂದಿಗೆ ವಿವರಿಸುತ್ತಾರೆ. ಅವರ ವಿವರಣೆಯನ್ನು ಪಂಡಿತರು ಅವಾಕ್ಕಾಗಿ ಕೇಳುತ್ತಿದ್ದರು. ಇದಕ್ಕೆ ಕಾರಣ, ವಿವರಿಸುವ ಸತ್ಯಗಳನ್ನು ಅವರು ಅನುಭವಿಸಿದ್ದರು. ಅವರ ವಿವರಣೆ ಅನುಭವದ ಆಳದಿಂದ ಬರುತ್ತದೆ. ತತ್ತ್ವದ ಯಾವ ಭಾವವನ್ನು ವಿವರಿಸುತ್ತಿದ್ದರೋ ಅದರಲ್ಲಿ ಅವರು ತಲ್ಲೀನರಾಗಿರುತ್ತಿದ್ದರು.

ಶೋಷಣೆ

ಇನ್ನೊಂದು ಬಗೆಯ ಧಾರ್ಮಿಕ ಪ್ರವಚನಕಾರರಿದ್ದಾರೆ. ಅವರ ಪ್ರವಚನ ಕೀರ್ತಿಯ ಆಸೆಯಿಂದ ಪ್ರಚೋದಿತವಾಗಿ ಆಧಾರರಹಿತ, ಸತ್ಯದೂರವಾದ ವಿಷಯಗಳನ್ನು ಆಕರ್ಷಕವಾಗಿ ಮಂಡಿಸುತ್ತಾರೆ. ಅವರ ಶಬ್ದಝರಿ, ಶಾಸ್ತ್ರವ್ಯಾಖ್ಯಾನಕೌಶಲದಿಂದ ಆಕರ್ಷಿತರಾದವರು, ಅವರು ಎಷ್ಟೇ ವಿದ್ಯಾವಂತರಾಗಿದ್ದರೂ, ಮೋಸಹೋಗಿ ಅವರ ಜೀವನ ಅಪಾರ ಹಾನಿಗೆ ಒಳಗಾಗುತ್ತದೆ. ತಪ್ಪಾಗಿ ತಿಳಿದ ತತ್ತ್ವದಿಂದ ನಮ್ಮ ಜೀವನಕ್ಕೆ ಆಘಾತವಾಗುತ್ತದೆ. ಆಧಾರವಿಲ್ಲದ ವಿಷಯಗಳನ್ನು ಸತ್ಯಗಳಂತೆ ನಂಬಿಕೆಗಳಂತೆ ಹರಡಿದರೆ ಸಮಾಜಕ್ಕೆ ಮೋಸ ಮಾಡಿದಂತೆ ಆಗುವುದು. ಇದು ಹಣ ಅಧಿಕಾರ ಮುಂತಾದ ವಿಷಯಗಳಲ್ಲಿ ಮೋಸ ಮಾಡುವುದಕ್ಕಿಂತ ಕಡಿಮೆಯೇನಲ್ಲ. ಸಾಮಾನ್ಯರ ಜೀವನದ ಕ್ಲಿಷ್ಟತೆಗೆ ತಮ್ಮ ಕೊಡುಗೆಯನ್ನೂ ಸೇರಿಸಿದಂತಾಗುತ್ತದೆ.

ಸಾಧನ, ಗುರಿಯಲ್ಲ

ಮೇಲಿನ ವಿವರಣೆಯಿಂದ ಧನಾರ್ಜನೆ, ಸುಖಾಪೇಕ್ಷೆ, ಇವೆಲ್ಲಾ ವಿನಾಶಕಾರಿ ಎಂದು ಭಾವಿಸಬೇಕಾಗಿಲ್ಲ. ನಿತ್ಯಜೀವನದ ಆವಶ್ಯಕತೆಗಳನ್ನು ಪೂರೈಸಲು ಬಡವರು ಕಷ್ಟಪಟ್ಟು ಹಣ ಸಂಪಾದಿಸಬೇಕಾಗಿದೆ. ಅನೇಕರು ತಮ್ಮ ಆದಾಯದ ಮಿತಿಯಲ್ಲಿ ಸಂಯಮದಿಂದ ಯೋಗ್ಯ ಜೀವನ ನಡೆಸುತ್ತಿರುವರು, ಅಪಾರ ಸಂಪತ್ತಿನ ಒಡೆಯರಾಗಿರುವವರು. ಅದನ್ನು ದೇಶದ ಸೇವೆಗೆ ಅಭ್ಯುದಯಕ್ಕೆ ವಾಣಿಜ್ಯ ಕೈಗಾರಿಕೆ ಶಿಕ್ಷಣ ಆರೋಗ್ಯ ಮೊದಲಾದ ಕ್ಷೇತ್ರಗಳಲ್ಲಿ ತೊಡಗಿಸಿರುವರು. ಯುವ ಉದ್ಯಮಿಗಳು ಆಧುನಿಕ ತಂತ್ರಜ್ಞಾನವನ್ನಾಧರಿಸಿದ ಉದ್ಯಮಗಳಲ್ಲಿ ಯಶಸ್ವಿಯಾಗಿ ದೇಶದ ಆರ್ಥಿಕ ಸಂಪನ್ನತೆಗೆ ಕೊಡುಗೆ ನೀಡುತ್ತಿರುವರು. ಹಣ, ನಿತ್ಯ ಜೀವನಕ್ಕೆ ಎಲ್ಲರಿಗೂ ಆವಶ್ಯಕ. ಹಣ ಮತ್ತು ಸಂಪತ್ತು ಜೀವನದ ಗುರಿಗೆ – ಅವು ಎಷ್ಟೇ ಮಹತ್ತಾಗಿರಲಿ ಅಥವಾ ಅಲ್ಪವಾಗಿರಲಿ – ಮುಖ್ಯ ಸಾಧನಗಳು, ಗುರಿಯಲ್ಲ. ಅವನ್ನೇ ಗುರಿ ಎಂದು ತಿಳಿದು ಅವನ್ನು ಬೆನ್ನಟ್ಟಿ ಹೋದಾಗ ಉಂಟಾಗುವ ಪರಿಣಾಮಗಳನ್ನು ಇಲ್ಲಿ ಸೂಚಿಸಿದೆ, ಅಷ್ಟೆ. ಸಾಮಾನ್ಯರ ಜೀವನವನ್ನು ಪರಿಗಣಿಸುವುದಾದರೆ, ಹಣ ಅವರ ಆವಶ್ಯಕತೆಗಳನ್ನು ಪೂರೈಸಲು ಬೇಕಾಗುತ್ತದೆ. ಇದನ್ನು ಚೀನೀಯರ ಅನುಭವದ ಮಾತೊಂದು ಚೆನ್ನಾಗಿ ವಿವರಿಸುತ್ತದೆ: 'ಮನುಷ್ಯನ ಆವಶ್ಯಕತೆಗಳಿಗೆ ಸ್ಥಾನವಿದೆ, ಆಶೆಬುರುಕತನಕ್ಕಲ್ಲ.'

ನಮ್ಮ ಜೀವನ ಯಾವುದೋ ಒಂದು ಕಾರಣದಿಂದ ಕ್ಲಿಷ್ಟವಾಗುವುದಿಲ್ಲ. ಮೇಲೆ ತಿಳಿಸಿದ ಎಲ್ಲಾ ಅಂಶಗಳೂ ನಮ್ಮ ಜೀವನವನ್ನು ಕ್ಲಿಷ್ಟಗೊಳಿಸುತ್ತವೆ. ಅವು ಒಂದಕ್ಕೊಂದು ಸಂಬಂಧಪಟ್ಟಿವೆ. ಒಂದು ಮತ್ತೊಂದಕ್ಕೆ ದಾರಿ ಮಾಡಿಕೊಡುತ್ತದೆ. ನಮ್ಮ ಜೀವನ ಕ್ಲೇಶ-ಸಂಕಟಗಳಿಗೆ ಒಳಗಾಗುತ್ತದೆ. ಜೀವನವನ್ನು ಗೋಜಲು ಮಾಡಿಕೊಳ್ಳುವುದು ಸುಲಭ. ಅದರಿಂದ ಬಿಡಿಸಿಕೊಂಡು ಹೊರ ಬರುವುದು ಕಷ್ಟ. ಗೋಜಲನ್ನು ಬಿಡಿಸಬೇಕಾದರೆ, ಮೊದಲು ಅದು ಹೇಗೆ ಆಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ನಮಗೆ ತಲೆನೋವು ಬಂದಿದ್ದರೆ, ಅದು ಯಾವ ಕಾರಣದಿಂದ ಉಂಟಾಗಿದೆ ಎಂದು ಪರೀಕ್ಷಿಸಿದ ನಂತರವೇ ವೈದ್ಯರು ಔಷಧ ಕೊಡುವಂತೆ ಇದು. ನಮ್ಮ ಜೀವನದ ಕ್ಲಿಷ್ಟತೆಯನ್ನು ಸರಳಗೊಳಿಸಲು ನಮಗೊಂದು ದಾರಿ ಬೇಕಾಗುತ್ತದೆ. ಅದರಲ್ಲಿ ಹೋಗಲು ವಿಶೇಷ ಪ್ರಯತ್ನವನ್ನು ಮಾಡಬೇಕಾಗುತ್ತದೆ. ನಮ್ಮ ಜೀವನಶೈಲಿಯನ್ನೇ ಬದಲಾಯಿಸಿಕೊಳ್ಳಬೇಕಾಗುತ್ತದೆ. ನಾವು ಜೀವನವನ್ನು ನೋಡುವ ದೃಷ್ಟಿಯನ್ನು ಬದಲಾಯಿಸಬೇಕಾಗುತ್ತದೆ. ನಮ್ಮ ಜೀವನ ಜಟಿಲವಾಗುವುದಕ್ಕೆ ಎಷ್ಟು ಸಮಯ ಹಿಡಿಯಿತೋ ಅದರಿಂದ ಬಿಡಿಸಿಕೊಳ್ಳಬೇಕಾದರೆ ಅಷ್ಟೇ ಅಥವಾ ಇನ್ನೂ ಹೆಚ್ಚು ಸಮಯ ಹಿಡಿಯುವುದು. ಇದಕ್ಕೆ ಹೋರಾಟ, ತಾಳ್ಮೆ, ಸಾಧನೆ ಬೇಕಾಗುವುದು. ಈ ಹೋರಾಟವೇ ನಮ್ಮ ಜೀವನದ ಸಾರ.

ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಭಾಗ ೧೭

ಭಾರತದ ಬಹಳ ಪ್ರಾಚೀನ ನಗರವಾದ ಮಧುರೆಯ ಸಂಕ್ಷಿಪ್ತ ವಿವರಣೆಯನ್ನಿಲ್ಲಿ ನೀಡುತ್ತೇನೆ. ಭಾರತದಲ್ಲಿ ರೈಲುಮಾರ್ಗ ಆರಂಭವಾಗುವುದಕ್ಕೂ ಬಹಳ ಮೊದಲೇ ಯಾತ್ರಿಕರ ಸೌಲಭ್ಯಕ್ಕಾಗಿ ರಾಣಿ ಅಹಲ್ಯಾಬಾಯಿ ಬಂಗಾಳದ ಮೇದಿನೀಪುರದಿಂದ ಶ್ರೀಜಗನ್ನಾಥ ಕ್ಷೇತ್ರದ ಮೂಲಕ ರಾಮೇಶ್ವರದ ತನಕ ಒಂದು ಅಗಲವಾದ ರಸ್ತೆಯನ್ನು ನಿರ್ಮಿಸಿಕೊಟ್ಟಿದ್ದಳು. ಈ ರಸ್ತೆಯಲ್ಲಿ ಅಲ್ಲಲ್ಲಿ ಸಾಧು-ಸಂನ್ಯಾಸಿಗಳಿಗಾಗಿ ಛತ್ರ ಅಥವಾ ಸದಾವ್ರತಗಳಿವೆ. ಈಗಲೂ ಅನೇಕ ಮಂದಿ ಸಾಧು-ಸಂನ್ಯಾಸಿಗಳು ಈ ರಸ್ತೆಯಲ್ಲಿಯೇ ಶ್ರೀಜಗನ್ನಾಥ ಕ್ಷೇತ್ರದ ದರ್ಶನ ಮುಗಿಸಿ, ಜಿವುಡೇ ನೃಸಿಂಹಜೀ, ವೆಂಕಟಾದ್ರಿ, ಅಥವಾ ಶ್ರೀಶೈಲದ ಬಾಲಾಜಿ, ವಿಷ್ಣುಕಾಂಚಿ ಅಥವಾ ಶಿವಕಾಶಿ, ತಿರುಚಿನಾಪಳ್ಳಿಯ ಶ್ರೀರಂಗಂ, ಮಧುರೈ, ಕೂರ್ಮಕ್ಷೇತ್ರ ಮೊದಲಾದ ದಕ್ಷಿಣದ ಪ್ರಸಿದ್ಧ ತೀರ್ಥಕ್ಷೇತ್ರಗಳ ದರ್ಶನ ಮಾಡಿ ರಾಮೇಶ್ವರಕ್ಕೆ ಬರುತ್ತಿದ್ದಾರೆ. ರಾಮೇಶ್ವರದಿಂದ ಇನ್ನೊಂದು ಇಟ್ಟಿಗೆಯ ರಸ್ತೆ, ಭಾರತದ ಪಶ್ಚಿಮ ಸಾಗರದ ತೀರದ ಮೂಲಕ ದ್ವಾರಕೆಯವರೆಗೂ ಸಾಗುತ್ತದೆ. ಸಾಧುಗಳು ರಾಮೇಶ್ವರ ದರ್ಶನ ಮಾಡಿದ ಮೇಲೆ ಈ ದಾರಿಯಲ್ಲಿ ಪದ್ಮನಾಭ, ಜನಾರ್ದನ, ಕನ್ಯಾಕುಮಾರಿ, ಗೋಕರ್ಣ ಮಹಾದೇವ, ಮಹಾಬಲೇಶ್ವರ, ಪಂಡರಾಪುರ, ಮೊದಲಾದ ತೀರ್ಥಸ್ಥಳಗಳ ದರ್ಶನ ಮಾಡುತ್ತ ಪ್ರಭಾಸ ಹಾಗೂ ದ್ವಾರಕೆಯನ್ನು ತಲುಪುತ್ತಾರೆ.

ಮದುರೆಯು ವೈಗೈ ನದಿಯ ದಕ್ಷಿಣದ ತೀರದಲ್ಲಿದೆ. ಅಲ್ಲಿ ಎರಡು ಧರ್ಮಶಾಲೆಗಳಿವೆ. ಒಂದು ರೈಲ್ವೇ ಸ್ಟೇಶನ್ನಿನ ಸಮೀಪ; ಇನ್ನೊಂದು ವೈಗೈ ನದಿಯ ತೀರದಲ್ಲಿ. ಮಧ್ಯಾಹ್ನ ನಾವು ಮಂದಿರ ದರ್ಶನಕ್ಕಾಗಿ ಹೊರಟೆವು. ಮದುರೆಯಲ್ಲಿ ಮೀನಾಕ್ಷಿ ಮಂದಿರ ಅತ್ಯಂತ ಪ್ರಸಿದ್ಧವಾದುದು. ಇಷ್ಟು ಸುಂದರವಾದ, ಪ್ರಾಚೀನವಾದ ಹಾಗೂ ಬೃಹತ್ತಾದ ಮಂದಿರ ದಕ್ಷಿಣ ಭಾರತದಲ್ಲಿ ಬೇರೆ ಯಾವುದೂ ಇಲ್ಲ. ಶಿಲ್ಪಕಲೆಯ ನೈಪುಣ್ಯದಲ್ಲಿ ಇದು ಇಡೀ ಭಾರತದಲ್ಲೇ ಅದ್ವಿತೀಯವಾಗಿದೆ. ಈ ಮಂದಿರವನ್ನು ಕುರಿತಾಗಿ ಸ್ಥಳಪುರಾಣ ಹೀಗೆ ಹೇಳುತ್ತದೆ:

ದೇವತೆಗಳ ರಾಜನಾದ ಇಂದ್ರನು ಬ್ರಹ್ಮಹತ್ಯಾ ಪಾಪದಿಂದ ಮುಕ್ತನಾಗಲು ಭಾರತದ ತೀರ್ಥಕ್ಷೇತ್ರಗಳನ್ನು ದರ್ಶನ ಮಾಡುತ್ತಾ ಈ ಕ್ಷೇತ್ರಕ್ಕೆ ಬರುವಷ್ಟರಲ್ಲೇ ಅವನ ಪಾಪ ಅವನಿಂದ ತೊಲಗಿ ಹೋಯಿತು. ಆಗ ಅವನು ಈ ಪಾಪವಿಮೋಚನೆಗೆ ಕಾರಣವ



ನ್ನರಿಯಲು ಯತ್ನಿಸಿ, ಅನ್ವೇಷಣೆ ಮಾಡಿದಾಗ ಇಲ್ಲಿ ಒಂದು ಅನಾದಿಲಿಂಗವನ್ನು ನೋಡಿದ. ಬಳಿಕ ವಿಶ್ವಕರ್ಮನ ಮೂಲಕ ಒಂದು ಮಂದಿರವನ್ನು ನಿರ್ಮಿಸಿ, ವೈಶಾಖೀ ಪೂರ್ಣಿಮೆಯ ದಿನದಂದು ವೈದಿಕ ಪದ್ಧತಿ ಪ್ರಕಾರ ಬೃಹಸ್ಪತಿಯ ಮೂಲಕ ಆ ಲಿಂಗವನ್ನು ಪ್ರತಿಷ್ಠಾಪಿಸಿದ. ಆ ಲಿಂಗಮೂರ್ತಿಗೆ 'ಸುಂದರ'ನೆಂದು ನಾಮಕರಣ ಮಾಡಿದ. ಮೇಲೆ ಹೇಳಿದ ಪುರಾಣದಲ್ಲಿ ಇನ್ನೂ ಹೇಳಲಾಗಿದೆ — ಶ್ರೀರಾಮಚಂದ್ರನು ಸೀತೆಯ ಅನ್ವೇಷಣೆ ಮಾಡುತ್ತ ಲಂಕೆಯ ಕಡೆಗೆ ಹೊರಟು, ಇಲ್ಲಿಗೆ ಬಂದಿದ್ದ. ಅಗಸ್ತ್ಯ ಮುನಿಯ ಆದೇಶದಂತೆ ಮದುರೆಯಲ್ಲಿ ಸುಂದರ ಮೂರ್ತಿಯ ಪೂಜೆ ಹಾಗೂ ಆರಾಧನೆ ಮಾಡಿದನಂತೆ.

ಕ್ರಿಸ್ತಶಕ ಹದಿನಾಲ್ಕನೇ ಶತಮಾನದಲ್ಲಿ ದಕ್ಷಿಣ ಭಾರತದ ಮೇಲೆ ಮುಸಲ್ಮಾನ ಅರಸರು ಆಕ್ರಮಣ ಮಾಡಿದಾಗ ಈ ಮಂದಿರದ ಎದುರಿಗಿರುವ ಗೋಡೆ ಹಾಗೂ ಗೋಪುರ (ಅಥವಾ ಪ್ರವೇಶದ್ವಾರ) ವನ್ನು ಒಡೆದು ಹಾಕಿದರು. ಹಾಗೆ ಒಡೆದ ಆ ಗೋಪುರದ ಕೆಳಭಾಗದಲ್ಲಿ ಈಗ ಅಂಗಡಿಗಳಿವೆ. ಮಂದಿರದ

ನಾಲ್ಕೂ ಭಾಗಗಳಲ್ಲಿ ರಾಜಪಥವಿದೆ. ಅವುಗಳಲ್ಲಿ ಒಂಬತ್ತು ಪ್ರವೇಶದ್ವಾರಗಳಿವೆ. ಅವುಗಳಲ್ಲಿ ಒಂದು ೧೫೨ ಅಡಿ ಎತ್ತರವಿದೆ. ಈ ದೇವಾಲಯದ ಪ್ರಾಂಗಣವು ಉತ್ತರದಿಂದ ದಕ್ಷಿಣಕ್ಕೆ ೮೫೭ ಅಡಿ ಹಾಗೂ ಪೂರ್ವದಿಂದ ಪಶ್ಚಿಮಕ್ಕೆ ೭೪೪ ಅಡಿ ವಿಸ್ತಾರವಾಗಿದೆ. ಮಂದಿರದ ಮಧ್ಯದಲ್ಲಿ ಸುಂದರೇಶ್ವರ ಸ್ವಾಮಿ ಅಥವಾ 'ಸುಂದರ' ಲಿಂಗದ ಹಾಗೂ ಮೀನಾಕ್ಷೀದೇವಿಯ ಮೂರ್ತಿ ರಾರಾಜಿಸುತ್ತಿದೆ. ವಿವಿಧ ಸ್ಥಳಗಳಲ್ಲಿ ಸುಂದರೇಶ್ವರನ ಲೀಲೆಗಾಗಿ ಅನೇಕ ಮಂಟಪಗಳಿವೆ. ಅವುಗಳ ನಡುವೆ, 'ಸಹಸ್ರ-ಸ್ತಂಭ-ಮಂಟಪ' ಅಥವಾ 'ವಸಂತ-ಮಂಟಪ' ಎಂಬ ಎರಡು ಮಂಟಪಗಳು ಪ್ರಸಿದ್ಧವಾಗಿವೆ. ಮಂದಿರದ ಒಟ್ಟು ಒಳಭಾಗ ಒಂದು ದೊಡ್ಡಬಂಡೆಯ ಮೇಲೆ ನಿರ್ಮಿತವಾಗಿದೆ. ಸಹಸ್ರ-ಸ್ತಂಭ-ಮಂಟಪ ಅಥವಾ ಒಂದು ಸಾವಿರ ಸ್ತಂಭಗಳಿಂದ ಕೂಡಿದ ಮಂಟಪವು ಶಿಲ್ಪಕಲೆ ಹಾಗೂ ಚಿತ್ರಕಲೆಯ ನೈಪುಣ್ಯದ ದೃಷ್ಟಿಯಿಂದ ವರ್ಣನಾತೀತವಾಗಿದೆ. ಅದು ನೋಡಲೇಬೇಕಾದ ಒಂದು ಸಂಗತಿ. ವಸಂತ-ಮಂಟಪದ ಉದ್ದ ೧೦೦ ಗಜ ಹಾಗೂ ಅಗಲ ೬೦ ಅಡಿ. ಅದರ ಚಾವಣಿ ೧೨೦ ಅಡಿ ಎತ್ತರವಿದೆ; ಅದು ಕಲ್ಲಿನ ಸ್ತಂಭದ ಮೇಲೆ ನಿರ್ಮಿಸಲ್ಪಟ್ಟಿದೆ. ಪ್ರತಿಯೊಂದು ಸ್ತಂಭವೂ ೨೦ ಅಡಿ ಎತ್ತರವಿದೆ. ಇದರ ನಡುವೆ ನೀರು ಹರಿದಾಡಲು, ನೀರಿನ ಕಾಲುವೆಯಿದೆ. ಪೌರ್ಣಿಮಿಯವರೆಗೆ ಸುಂದರೇಶ್ವರ ಸ್ವಾಮಿಯ ವಸಂತ ಕ್ರೀಡಾ ಉತ್ಸವ ನಡೆಯುವುದು. ಆ ಉತ್ಸವಕ್ಕೆ ಅನೇಕ ಮಂದಿ ಬಂದು ಸೇರುತ್ತಾರೆ. ಈ ಮಂಟಪವನ್ನು ಭಕ್ತನಾದ ರಾಜಾ ತಿರುಮಲ ನಾಯಕನು ಇಪ್ಪತ್ತು ಲಕ್ಷ ಮುದ್ರೆ ಖರ್ಚು ಮಾಡಿ ನಿರ್ಮಿಸಿದ. ಮಂದಿರದ ಪಕ್ಕದಲ್ಲಿ ಕಲ್ಲಿನಿಂದ ನಿರ್ಮಿಸಿದ ಶಿವಗಂಗಾ ಎಂಬ ಹೆಸರಿನ ಸರೋವರವಿದೆ. ಆ ಸರೋವರದ ನಾಲ್ಕೂ ದಿಕ್ಕುಗಳಲ್ಲಿ ಚಾಂದಿನಿ ಹಾಗೂ ಮಧ್ಯಭಾಗದಲ್ಲಿ ಸುಂದರ-ಲೀಲಾ-ಮಂಟಪವಿದೆ.

ಶ್ರೀಮಾತೆ ಹಾಗೂ ಇತರರು ಈ ಸರೋವರದಲ್ಲಿ ಮಧ್ಯಾಹ್ನ ಸ್ನಾನ ಮಾಡಿ, ವಿಧಿ ಪ್ರಕಾರ ದರ್ಶನ ಮೊದಲಾದವನ್ನು ಮಾಡಿ, ಸಾಯಂಕಾಲ ಮರಳಿ ಬಂದರು. ಇಲ್ಲಿನ ಪದ್ಧತಿಯ ಪ್ರಕಾರ, ಸ್ತ್ರೀಯರು ಕತ್ತಲಾದ ಮೇಲೆ ದೀಪವನ್ನು ಖರೀದಿಸಿ, ಶಿವಗಂಗೆಯ ತೀರದಲ್ಲಿ ತಮ್ಮ ತಮ್ಮ ಹೆಸರನ್ನು ಹೇಳಿ, ಅಲ್ಲೇ ಬಿಡಬೇಕು. ಶ್ರೀಮಾತೆ ಕೂಡ ತಮ್ಮ ಹೆಸರಿನಲ್ಲಿ ದೀಪವನ್ನು ಬಿಟ್ಟರು. ರಾತ್ರಿ ಮಂದಿರವನ್ನು ಬೆಳಕಿನ ಮಾಲೆಗಳಿಂದ ಬೆಳಗುತ್ತಾರೆ.

ಒಂದು ಮೈಲು ದೂರದಲ್ಲಿರುವ ತಿರುಮಲ ನಾಯಕನ ಚೌಲ್ಟ್ರಿ ಅಥವಾ ರಾಜಭವನ ನೋಡಬೇಕಾದ ಸ್ಥಳವಾಗಿದೆ. ಸಮುದಾಯ ಭವನವನ್ನು ಕಲ್ಲಿನಿಂದಲೇ ಭದ್ರವಾಗಿ ಕಟ್ಟಿದ್ದಾರೆ. ಈ ಉತ್ತಮ ಕಟ್ಟಡದ ಚಾವಣಿಯು ಇಪ್ಪತ್ತು-ಇಪ್ಪತ್ತೈದು ಆಶ್ಚರ್ಯಕರವಾಗಿ ಕೊರೆಯಲಾದ ಕಂಬಗಳ ಮೇಲೆ ಸುರಕ್ಷಿತವಾಗಿದೆ. ಈಗ ಈ ಸ್ಥಳದಲ್ಲಿ ಜಡ್ಜಿಗಳ ಅದಾಲತ್ ಮೊದಲಾದ ಕೆಲವು ಸರ್ಕಾರೀ ಕಚೇರಿಗಳಿವೆ. ಈ ಜಾಗದಲ್ಲಿ ಜಡ್ಜ್‌ಗಳ ಬಂಗಲೆಗೆ ಸೇರಿದಂತಿರುವ ಜಮೀನಿನಲ್ಲಿ ಒಂದು ದೊಡ್ಡ ವಟವೃಕ್ಷವಿದೆ. ಅದರ ಬೇರಿನ ಉದ್ದ ಸುಮಾರು ೭೦ ಅಡಿ ಹಾಗೂ ಅದರ ರೆಂಬೆ ಕೊಂಬೆಗಳು ಸುಮಾರು ೧೮೦ ಅಡಿಯವರೆಗೂ ವ್ಯಾಪಿಸಿದೆ. ಈ ಚೌಲ್ಟ್ರಿಯಿಂದ ಒಂದೂವರೆ ಮೈಲು ಈಶಾನ್ಯ ಭಾಗಕ್ಕೆ ರಾಮೇಶ್ವರಕ್ಕೆ ಹೋಗುವ ಕಾಲುನಡಿಗೆಯ ಹಾದಿಯ ಪಕ್ಕದಲ್ಲಿ ತೇಪ್ಪಕುಳಂ ಎಂಬ ಹೆಸರಿನ ಒಂದು ದೊಡ್ಡ ಸರೋವರವಿದೆ. ಅದರ ಒಂದೊಂದು ಭಾಗವೂ ೧೨೦೦ ಗಜ ದೀರ್ಘವಾಗಿದೆ; ನಾಲ್ಕೂ ಕಡೆ ಕಲ್ಲಿನಿಂದ ನಿರ್ಮಿಸಿದ ಸೌಧಗಳಿವೆ; ಅಲ್ಲಲ್ಲಿ ಕಲ್ಲಿನ ಅಶ್ವ, ನವಿಲು ಮೊದಲಾದ ಮೂರ್ತಿಗಳಿವೆ. ಸರೋವರದ ಮಧ್ಯಭಾಗದಲ್ಲಿ ನಾಲ್ಕೂ ಕಡೆ ಕಲ್ಲಿನಿಂದ ಕಟ್ಟಿರುವ ಒಂದು ಉಪದ್ವೀಪವಿದೆ. ಅದರ ನಡುವೆ ಎರಡಂತಸ್ತಿನ ದೇವಾಲಯ ಹಾಗೂ ನಾಲ್ಕು ಭಾಗಗಳಲ್ಲೂ ಶಿಲ್ಪಕಲೆಗಳಿಂದ ಕೂಡಿದ ನಾಲ್ಕು ಸಣ್ಣ ಗುಡಿಗಳೂ ಇವೆ. ಬೇಸಿಗೆಯಲ್ಲಿ ನಡೆಯುವ ಜಲಯಾತ್ರಾ ಉತ್ಸವದಲ್ಲಿ ರಾತ್ರಿ ಹೊತ್ತು ಸುಂದರೇಶ್ವರ ಸ್ವಾಮಿ ಹಾಗೂ ಮೀನಾಕ್ಷಿದೇವಿಯರನ್ನು ಈ ಸರೋವರಕ್ಕೆ ಕರೆತಂದು, ದೋಣಿಯಲ್ಲಿ ಕುಳ್ಳಿರಿಸಿ, ಈ ಉಪದ್ವೀಪದ ನಾಲ್ಕೂ ಕಡೆ ಸುತ್ತಾಡಿಸುತ್ತಾರೆ. ಆಗ ಸರೋವರದ ನಾಲ್ಕೂ ಕಡೆ ಒಂದು ಲಕ್ಷ ಬತ್ತಿಗಳನ್ನು ಹಚ್ಚಿ ಬೆಳಗಿಸುತ್ತಾರೆ. ಶ್ರೀಮಾತೆ ಹಾಗೂ ಇತರರು ರಾಮೇಶ್ವರಕ್ಕೆ ಹೋಗುವಾಗ ಹಾಗೂ ಮರಳಿ ಬರುವಾಗ ಈ ಸ್ಥಳವನ್ನೆಲ್ಲ ನೋಡಿ ವಿಶೇಷವಾಗಿ ಆನಂದಪಟ್ಟರು. ಬಳಿಕ, ''ಇದೆಲ್ಲ ಏನು ಠಾಕೂರರ ಲೀಲೆ!'' ಎಂದರು.

ಮರುದಿನ ಮದ್ಯಾಹ್ನಕ್ಕೆ ರೈಲಿನಲ್ಲಿ ಯಾತ್ರೆ ಹೊರಟು, ಸಂಜೆ ಪಾಂಬನ್ ಪಾಸ್‌ನ ತೀರಕ್ಕೆ ಬಂದೆವು. ಇಲ್ಲಿ ರೈಲು ಕೊನೆಗೊಳ್ಳುವುದು. ಸ್ಟೇಶನ್ನಿನ ಹೆಸರು 'ಮಂಡಪಂ'. ಇಲ್ಲಿಂದ ಒಂದು ಸಣ್ಣ ಸ್ಟೀಮರ್‌ನಲ್ಲಿ ಖಾರಿಯನ್ನು ದಾಟಿ, ರಾಮೇಶ್ವರ ದ್ವೀಪವನ್ನು ತಲುಪಬೇಕಾಯಿತು. ಈಗ ಈ ಖಾರಿಯ ಮೇಲೆ ರೈಲುಗಾಡಿ ಓಡಾಡುತ್ತದೆ. ಆದರೆ ನಾವು ಹೋದಾಗ ಇನ್ನೂ ಸೇತುವೆಯ ಕಂಬಗಳ ನಿರ್ಮಾಣ ಕೆಲವು ಭಾಗ ಮಾತ್ರ ನಡೆದಿತ್ತು. ತ್ರೇತಾಯುಗದ ಆ ಸೇತುವೆ ಇಂದಿಗೂ ಕೂಡ ಸಮುದ್ರದ ಒಳಗಿನಿಂದ ಆರಂಭವಾಗಿ, ಶ್ರೀಲಂಕೆಯವರೆಗೆ ಸುಮಾರು ೬೦ ಮೈಲಿ ದೂರದವರೆಗೂ ಇದೆ; ನೆಲದಲ್ಲಿ ಮೂರುನಾಲ್ಕು ಮೈಲಿ ವ್ಯಾಪಿಸಿಕೊಂಡಿದೆ. ಅದನ್ನು ಈಗಲೂ ನೋಡಬಹುದು. ಆದರೂ ಮಧ್ಯೆ ಎರಡು-ಮೂರು ಸ್ಥಳಗಳಲ್ಲಿ ಅಂತರವಿರುವುದರಿಂದ, ಈಗ ಅದರ ಮೂಲಕ ದಾಟಿ ಹೋಗಲಾಗದು. ಈಗಲೂ ಕೂಡ ಉಚ್ಚಾಪಲ್ಲಿಯಿಂದ ಖಾಡಿಕಾ ಅಥವಾ ಹರ್ಬಲಾರ್ ಖಾರಿಯವರೆಗೆ ಹನ್ನೊಂದು ಮೈಲು ಇರುವ ಒಂದು ಭಾಗ ಭಾರತಕ್ಕೆ ಸೇರಿದೆ. ಅನಂತರ ಎರಡು ಮೈಲಿ ಅಂತರವಿದೆ – ಅದಕ್ಕೇ 'ಪಾಂಬನ್ ಪಾಸ್' ಎನ್ನುತ್ತಾರೆ. ಹಡಗು ಹೋಗಿ ಬರುವುದಕ್ಕೆ ಅನಂತರ ಅದನ್ನು ಸಿಡಿಮದ್ದಿನಿಂದ ಒಡೆದಿರಬೇಕು. ಈಗಲೂ ನೀರಿನ ನಡುವೆ ಅಲ್ಲಲ್ಲಿ ಕಲ್ಲಿನ ತುಣುಕುಗಳನ್ನು ಕಂಡಾಗ, ಶ್ರೀರಾಮನು ನಿರ್ಮಿಸಿದ ಸೇತುವೆ ಕಲ್ಲಿನಿಂದಲೇ ಕಟ್ಟಿದ್ದಿರಬೇಕು

ಅನ್ನಿಸುತ್ತದೆ. ಪಾಂಬನ್ ಖಾರಿಯ ನಂತರ ೨೪ ಮೈಲಿ ಉದ್ದ ಹಾಗೂ ೩-೪ ಮೈಲಿ ವಿಸ್ತೀರ್ಣವಿರುವ ರಾಮೇಶ್ವರ ದ್ವೀಪವಿದೆ. ಅದರ ನಂತರ ಸುಮಾರು ಮೂರು ಮೈಲಿ ಅಂತರವಿದೆ; ಅನಂತರ ಸಮುದ್ರದ ಉಬ್ಬರ ಬಂದಾಗ ನೀರಿರುತ್ತದೆ, ಇಳಿತವಾದಾಗ ಮರಳು ಹಾಗೂ ಕಲ್ಲುಬಂಡೆಗಳೇ ಕಾಣಿಸುತ್ತವೆ. ಅದರ ನಂತರ ೧೮ ಮೈಲಿ ಉದ್ದ ಹಾಗೂ ಎರಡು ಮೈಲಿ ಅಗಲ ವಿಸ್ತಾರವಾದ ಇನ್ನೊಂದು ಸೇತುವೆಯ ಭಾಗವಿದೆ. ಈ ಭಾಗದ ಹೆಸರು 'ಮನ್ನಾರ್ ದ್ವೀಪ'. ಅಲ್ಲೊಂದು ದುರ್ಗವಿದೆ; ಅಲ್ಲಿ ಬಹಳ ಮಂದಿ ವಾಸ ಮಾಡುತ್ತಾರೆ, ಹಾಗೂ ನಗರವಿದೆ. ಅಲ್ಲಿಂದ ನಂತರ ಪುನಃ ಎರಡು ಮೈಲು ಅಂತರ, ಅದನ್ನು ದಾಟಿ ಹೋದರೆ ಶ್ರೀಲಂಕೆ. ಇಲ್ಲಿ ನೀರು ಬಹಳ ಕಡಿಮೆ. ಎಷ್ಟು ಕಡಿಮೆ ನೀರೆಂದರೆ, ಇಳಿತವಾದಾಗ ಮನ್ನಾರ್ ದ್ವೀಪದಿಂದ ಜನರು, ದನ-ಕರುಗಳು ನಡೆದುಕೊಂಡೇ ಲಂಕೆಗೆ ಹೋಗುತ್ತಾರೆ. ಮೊದಲು ಈ ಸೇತುವೆಯ ಮೂಲಕವೇ ಜನರು ಅಲ್ಲಿಗೆ ಹೋಗಿ ಬರುತ್ತಿದ್ದರು. ಆದರೆ ಸಮುದ್ರದ ಅಲೆಗಳ ಹೊಡೆತಕ್ಕೆ ಆ ಸೇತುವೆ ಒಡೆದು ಹೋಗಿ, ಕ್ರಿ.ಶ. ೧೪೮೮ರ ಹೊತ್ತಿಗೆ ಈ ಓಡಾಟ ನಿಂತುಹೋಗಿತ್ತು. ಈ ಸೇತುವೆಯ ಎರಡೂ ಬದಿಗಳಲ್ಲಿ ಸಮುದ್ರದ ನೀರು ಕಡಿಮೆ; ಇವುಗಳ ನಡುವೆ ಮರಳು ಹಾಗೂ ಪರ್ವತಗಳಿವೆ. ಇದರಿಂದ ಸಣ್ಣ ದೋಣಿಗಳು ಮಾತ್ರ ಅಲ್ಲಿ ಹೋಗಬಲ್ಲವು; ಹಡಗುಗಳು ಅದರ ಮೂಲಕ ಚಲಿಸವು. ಶ್ರೀಮಾತೆ ಇದನ್ನೆಲ್ಲ ನೋಡಿ, ಕೇಳಿ ''ನೋಡಿದೆಯಾ ಮಗೂ, ಯಾವುದೋ ಯುಗದ ಚಿಹ್ನೆ ಈಗಲೂ ಉಳಿದಿದೆ!' ಎಂದರು.

ನಾವು ಸ್ಟೀಮರ್ ಮೂಲಕ ರಾಮೇಶ್ವರಕ್ಕೆ ಬಂದ ಪ್ರದೇಶಕ್ಕೆ ಪಾಂಬನ್ ಅಥವಾ ಪವನ ಬಂದರು ಎನ್ನುತ್ತಾರೆ. ಈ ಬಂದರಿನಿಂದ ಅನೇಕ ಸ್ಟೀಮರ್‌ಗಳು ಕೊಲೊಂಬೋ, ಮದ್ರಾಸ್, ತೂತುಕುಡಿ (Tuticorin) ಮೊದಲಾದ ಸ್ಥಳಗಳಿಗೆ ಹೋಗಿ ಬರುತ್ತವೆ. ಈ ಬಂದರಿನ ಖಾರಿ ಪ್ರದೇಶದಲ್ಲಿ ಸಾಹೇಬರುಗಳ (ವಿದೇಶೀಯರ) ಮೂರು-ನಾಲ್ಕು ಬಂಗಲೆ, ಕೆಲವು ಗೋಡೌನ್ ಹಾಗೂ ಒಂದು ಧರ್ಮಶಾಲೆ ಇವೆ. ನಾವು ಈ ಬಂದರಿನ ಮೂಲಕ ಮತ್ತೆ ರೈಲುಗಾಡಿಯಲ್ಲಿ ರಾಮೇಶ್ವರ ಸ್ಟೇಶನ್ನಿಗೆ ರಾತ್ರಿ ಸುಮಾರು ಹನ್ನೊಂದು ಗಂಟೆಯ ಹೊತ್ತಿಗೆ ತಲುಪಿದೆವು. ಪಂಡಾ ಗಂಗಾರಾಮ ಪೀತಾಂಬರನು ನಡೆಸುವ ಒಂದು ಎರಡಂತಸ್ತಿನ ಮನೆಯಲ್ಲಿ ಉಳಿದುಕೊಂಡೆವು. ಸ್ಟೀಮರ್‌ನಿಂದ ಇಳಿದು ರಾಮೇಶ್ವರ ದ್ವೀಪಕ್ಕೆ ಹೋಗುವ ರೈಲುಗಾಡಿಯನ್ನೇರುವಾಗ ಶ್ರೀಮಾತೆಯವರನ್ನು ಆಧರಿಸಿ ಹಿಡಿದುಕೊಂಡು ಹೋಗಬೇಕಾಯಿತು. ಆ ಕಾರಣದಿಂದ ಒಂದು ಚೀಲವನ್ನು ಕಳೆದುಕೊಳ್ಳಬೇಕಾಯಿತು ಕೂಡ.

ರಾಮೇಶ್ವರ ದೇವಾಲಯದ ನಾಲ್ಕೂ ಭಾಗಗಳಲ್ಲಿನ ಐವತ್ತು-ಅರುವತ್ತು ಕೋಣೆಗಳಲ್ಲಿ ಬ್ರಾಹ್ಮಣರು ಅಥವಾ ಪಂಡಾಗಳು ವಾಸಮಾಡುತ್ತಾರೆ. ಇತರ ಜಾತಿಯ ಜನರೂ ಅಲ್ಲಿ ವಾಸವಾಗಿದ್ದಾರೆ. ಅಲ್ಲಿ ಎಲ್ಲ ಸಂಪ್ರದಾಯದ ಸಾಧುಗಳ ಮಠಗಳಿವೆ. ಈ ಪ್ರದೇಶ ಒಂದು ಸಣ್ಣ ಪಟ್ಟಣದಂತಿದೆ. ಅಂಗಡಿಗಳಲ್ಲಿ ಎಲ್ಲ ಸಾಮಗ್ರಿಗಳೂ ದೊರೆಯುತ್ತವೆ. ಅನೇಕ ಧರ್ಮಶಾಲೆಗಳು, ಯಾತ್ರಿಕರು ತಂಗಲು ಪಂಡಾಗಳು ನಿರ್ಮಿಸಿದ ವಸತಿಮನೆಗಳು ಇಲ್ಲಿವೆ. ಈ ಪಂಡಾಗಳಿಗೆ ಆರ್ಯಾವರ್ತ(ಉತ್ತರ ಭಾರತದ) ವಾಸಿಗಳ ಭಾಷೆ ತಿಳಿಯದ ಕಾರಣ, ಎಲ್ಲರ ಕೆಲಸ ಸುಲಭವಾಗುವಂತೆ ಒಬ್ಬರು-ಇಬ್ಬರು ಆರ್ಯಾವರ್ತವಾಸಿಗಳಾದ ಹಣ ಸಂಗ್ರಹಕಾರರು ಇಲ್ಲಿದ್ದಾರೆ. ರಾಮೇಶ್ವರದಲ್ಲಿ ಎಲ್ಲ ಕಡೆ ಬಾವಿಯ ನೀರನ್ನೇ ಉಪಯೋಗಿಸುತ್ತಾರೆ. ಈ ನೀರು ಸಿಹಿಯಾಗಿದೆ; ನೀರಿಗೆ ಕೊರತೆಯೂ ಇಲ್ಲ. ಈ ದ್ವೀಪದಲ್ಲೆಲ್ಲ ಮರಳು ತುಂಬಿದೆ, ಎಲ್ಲೆಡೆ ಅಕೇಶೀಯಾ ಮರ ಕಾಣಿಸುತ್ತದೆ. ಯಾವುದೇ ಕೃಷಿ ಇಲ್ಲಿಲ್ಲ. ಈ ದ್ವೀಪದ ಬಹುಪಾಲು ಜನರು ದಾನವನ್ನು ಆಶ್ರಯಿಸಿಯೇ ಜೀವನ ಸಾಗಿಸುತ್ತಾರೆ. ಈ ದ್ವೀಪವು ಮದುರೈ ಜಿಲ್ಲೆಗೆ ಸೇರಿದೆ. ರಾಮನಾಡಿನ ರಾಜ ಉಳಿದೆಲ್ಲ ಜಮೀನ್ದಾರರ ನಡುವೆ ಪ್ರಮುಖನಾಗಿದ್ದಾನೆ.

ರಾಮೇಶ್ವರವು ಪ್ರಕಟವಾದ ವಿಷಯವಾಗಿ ಪುರಾಣದಲ್ಲಿ ಹೇಳಿದೆ: ಶ್ರೀರಾಮಚಂದ್ರನು ವಾನರ ಸೈನ್ಯದೊಂದಿಗೆ ಲಂಕೆಗೆ ಹೋಗಲು ಸೇತುಬಂಧನ ಕಾರ್ಯವನ್ನು ಮಾಡುವಾಗ ಬಾಯಾರಿಕೆಯಾಗಿ, ಕುಡಿಯುವ ನೀರನ್ನು ತರಲು ಆದೇಶ ಮಾಡಿದ. ನೀರನ್ನು ತಂದಾಗ ಅವನಿಗೆ ನೆನಪಾಯಿತು, ಇನ್ನೂ ತಾನು ಶಿವಪೂಜೆ ಮಾಡಿಲ್ಲವೆಂದು. ಹೇಗೆತಾನೇ ನೀರು ಕುಡಿಯಲಿ? ಹೀಗಾಗಿ ನೀರು ಕುಡಿಯದೆ ಅವನು ಮಣ್ಣಿನ ಶಿವಲಿಂಗವನ್ನು ನಿರ್ಮಿಸಿ, ಅದನ್ನು ಯಥಾವಿಧಿ ಪೂಜೆ ಮಾಡಿ ಪ್ರಾರ್ಥಿಸಿದ: ''ಹೇ ಶಂಭೋ! ಈ ಸಮುದ್ರದ ನೀರು ಅಗಾಧ. ರಾಕ್ಷಸಾಧಿಪತಿಯಾದ ರಾವಣ ಕೂಡ ಅತ್ಯಂತ ಬಲಶಾಲಿ. ಯುದ್ಧದಲ್ಲಿ ನನಗೆ ಒಂದೇ ಒಂದು ಸಹಾಯವಾಗಿ ಲಭಿಸಿರುವ ಈ ವಾನರ ಕುಲದವರೆಲ್ಲ ಚಪಲರು. ಹೀಗಾಗಿ, ಹೇ ಪ್ರಭೋ! ಈ ವಿಚಾರವಾಗಿ ನೀನು ನನಗೆ ನೆರವಾಗಬೇಕು. ರಾವಣನು ನಿನ್ನ ಭಕ್ತನಾದ್ದರಿಂದ ಮಾನವರಿಗೆ ಅವನು ಯಾವಾಗಲೂ ಅಜೇಯನಾಗಿದ್ದಾನೆ — ಆದರೂ ಶಿವನೆ, ನೀನು ಸರ್ವದಾ ಧರ್ಮದ ಪಕ್ಷಪಾತಿಯಾಗಿರುವವನು; ನನ್ನ ಪ್ರಾರ್ಥನೆಯನ್ನು ಈಡೇರಿಸು.'' ಶ್ರೀರಾಮನ ಈ ಸ್ತುತಿಯಿಂದ ಭಗವಾನ್ ಶಂಕರನು ತನ್ನ ಜ್ಯೋತಿರ್ಮಯವಾದ ರೂಪವನ್ನು ಧರಿಸಿ, ಪಾರ್ವತಿ ಹಾಗೂ ತನ್ನ ಗಣಗಳಿಂದ ಕೂಡಿ ಅವನ ಮುಂದೆ ಪ್ರತ್ಯಕ್ಷನಾದ. ಹೀಗೆ ಶ್ರೀರಾಮನು ಶಿವನ ದರ್ಶನ ಮಾಡಿ, ಮತ್ತೆ ವಿವಿಧ ಉಪಚಾರಗಳಿಂದ ಪೂಜೆ ಹಾಗೂ ಸ್ತವಗಳನ್ನು ಪಠಿಸಿ, ತನ್ನ ವಿಜಯಕ್ಕಾಗಿ ಪ್ರಾರ್ಥಿಸಿಕೊಂಡ. ಆಗ ಮಹಾದೇವ ಹೇಳಿದ, ''ನಿನಗೆ ಜಯವಾಗಲಿ!'' ಆಗ ಶ್ರೀರಾಮ ಮತ್ತೆ ಪ್ರಾರ್ಥಿಸಿದ, ''ಹೇ ದೇವ! ನೀನು ನಿನ್ನ ದಾಸನಾದ ನನ್ನ ಮೇಲೆ ಅಹೇತುಕವಾದ ಕೃಪೆಯನ್ನು ದಾನ ಮಾಡಿದ್ದರೆ, ಲೋಕಹಿತಕ್ಕಾಗಿಯೂ, ಜಗತ್ತನ್ನು ಪವಿತ್ರಗೊಳಿಸುವುದಕ್ಕಾಗಿಯೂ ದಯವಿಟ್ಟು ಈ ಸ್ಥಳದಲ್ಲಿಯೇ ಚಿರಕಾಲ ನೆಲೆಸ


ಬೇಕು.'' ಮಹಾದೇವನು ಭಕ್ತನ ಪ್ರಾರ್ಥನೆಯನ್ನು ಮನ್ನಿಸಿ ''ತಥಾಸ್ತು'' ಎಂದು ಹೇಳಿ, ಅಲ್ಲೇ ಲಿಂಗರೂಪಿಯಾದನು. ಅವನು ಭೂಮಂಡಲದಲ್ಲೆಲ್ಲ 'ರಾಮೇಶ್ವರ' ಎಂಬ ಹೆಸರಿನಿಂದ ಪ್ರಸಿದ್ಧನಾಗಿ ಈ ಸಮುದ್ರತೀರದಲ್ಲಿ ನೆಲೆಸಿರುತ್ತಾನೆ.

ರಾಮೇಶ್ವರನು ಪ್ರಕಟಗೊಂಡ ವಿಷಯವಾಗಿ ಪುರಾಣದಲ್ಲಿ ಮೇಲೆ ಹೇಳಿದಂತೆ ವರ್ಣನೆಯಿದ್ದರೂ, ಇನ್ನೂ ಎರಡು ಸುಂದರ ವಾದ ದಂತಕಥೆಗಳು ಪ್ರಚಲಿತವಾಗಿವೆ: ೧)ಜನರ ನಡುವೆ ಪ್ರಚಲಿತ ವಾಗಿರುವುದು. ೨) ಮಂದಿರದ ಒಂದು ಕೋಣೆಯಲ್ಲಿ ರಾಮ ನಾಡಿನ ರಾಜನು ರಚಿಸಿದ ಮೂರ್ತಿಯನ್ನು ಕುರಿತಾದುದು.

ಲಂಕೆಯಿಂದ ಬಿಡುಗಡೆ ಹೊಂದಿದ ಸೀತಾದೇವಿಯು ಶ್ರೀರಾಮನಿಂದ ವಿಶಾಲ ಸಮುದ್ರದ ಮೇಲೆ ರಚಿತವಾದ 'ಸೇತು ಬಂಧ' ಸೇತುವೆಯನ್ನು ನೋಡಿ ಆಶ್ಚರ್ಯಚಕಿತಳಾದಳು. ವಿಸ್ಮಯ, ಆನಂದಗಳಿಂದ ಕೂಡಿದ ಆಕೆ ತನ್ನ ಪತಿದೇವನ ಕೀರ್ತಿ ಚಿರಕಾಲವೂ ಅಕ್ಷಯವಾಗಿ ಉಳಿಯುವ ಬಯಕೆಯಿಂದ ಈ ಪ್ರದೇಶದಲ್ಲಿ ಶಿವನ ಮೂರ್ತಿಯನ್ನು ಪ್ರತಿಷ್ಠೆ ಮಾಡಲು ಯತ್ನಿಸಿದಳು. ಹೀಗಾಗಿ ಪ್ರತಿಷ್ಠಾಪನೆ ಮಾಡಲು ಉಪಯುಕ್ತರಾದ ಶಿವ ಲಿಂಗವನ್ನು ತರಲು ಹನುಮಂತನು ಪ್ರೇರಿತನಾದನು. ಸೀತೆಯ ಆದೇಶದಂತೆ, ಆ ಲಿಂಗವನ್ನು ಪಡೆಯಲು ಹನುಮಾನ್ ಭಾರತದ ನಾನಾ ಸ್ಥಳಗಳನ್ನೆಲ್ಲ ಸುತ್ತಾಡಿ, ಕೊನೆಗೆ ಕೇದಾರನಾಥ, ಗೋಕರ್ಣ ಹಾಗೂ ಇನ್ನಿತರ ಕೆಲವು ಲಿಂಗಗಳನ್ನು ಅಲ್ಲಿಗೆ ತಂದು ಸೀತೆಗೆ ನೀಡಿದ. ಆ ಲಿಂಗಗಳ ನಡುವೆ ಕಾಶಿಯ ವಿಶ್ವನಾಥ ಲಿಂಗ ವಿಲ್ಲದ್ದನ್ನು ಸೀತಾದೇವಿ ನೋಡಿದಳು. ಅದನ್ನು ತರಲು ಆಕೆ ಮತ್ತೆ ಹನುಮಂತನಿಗೆ ಆಜ್ಞಾಪಿಸಿದಳು. ಹನುಮಂತನು ಬರುವಾಗ ತಡವಾದ್ದರಿಂದ, ಅವನಿಗೆ ಆ ಕಾರ್ಯ ಅಸಾಧ್ಯವೆಂದು ತಿಳಿದ ಸೀತಾದೇವಿ, ತಾನೇ ಖಿಚಡಿ ಹಾಗೂ ಅನ್ನಪಿಂಡವನ್ನು ಆ ಜಾಗದಲ್ಲಿ ಚೆಲ್ಲಿದಳು. ಅದು ಕ್ರಮೇಣ ಗಟ್ಟಿಯಾಗಿ ಕಲ್ಲಿನಂತೆ ಕಠಿಣ ವಾದ, ಹಾಗೂ ಲಿಂಗದ ಆಕಾರವನ್ನು ತಳೆಯಿತು. ಆಗ ಆಕೆ ಅದನ್ನು 'ರಾಮೇಶ್ವರ'ವೆಂದು ಕರೆದಳು. ಹೀಗೆ ರಾಮೇಶ್ವರದ ಸ್ಥಾಪನೆಯಾಯಿತು. ಅನಂತರ ಹನುಮಂತನು ಕಾಶಿಯಿಂದ ವಿಶ್ವೇಶ್ವರನನ್ನು ತಂದ; ರಾಮೇಶ್ವರನನ್ನು ಕಂಡು ಅಪಮಾನ, ಕ್ರೋಧಗಳಿಂದ ತನ್ನ ಬಾಲದಿಂದ ಆ ಲಿಂಗವನ್ನು ಕಿತ್ತು ಎಸೆಯಲು ಯತ್ನಿಸಿದ. ಆದರೆ ಜಾನಕಿಯು ಸ್ಥಾಪಿಸಿದ ಶಿವಲಿಂಗವನ್ನು ಕಿತ್ತೆಸೆಯುವುದಿರಲಿ, ಹನುಮಂತನ ಬಲಪ್ರಯೋಗದಿಂದಾಗಿ ಅವನ ಬಾಲವೇ ಕಿತ್ತು ಬಂತು. ಅವನು ಈ ಸ್ಥಳದಿಂದ ಒಂದು ಮೈಲಿ ದೂರವಿರುವ 'ರಾಮಝುರ್ಕಾ' ಎಂಬ ಪ್ರದೇಶಕ್ಕೆ ಹೋಗಿ ಬಿದ್ದ. ಶ್ರೀರಾಮನು ಇದನ್ನು ಕಂಡು, ತನ್ನ ಭಕ್ತ ಹನುಮಂತನ ಬಳಿಗೆ ಹೋಗಿ ಅವನನ್ನು ಸಮಾಧಾನಪಡಿಸಿದ. ಅವನು ತಂದ ಲಿಂಗ ಗಳನ್ನು ವಿಶ್ವನಾಥ ಹಾಗೂ ಗೋಕರ್ಣವೇ ಮೊದಲಾದ ಪ್ರದೇಶ ಗಳಲ್ಲಿ ಪ್ರತಿಷ್ಠಾಪಿಸಿದ.



ಇನ್ನೊಂದು ಕಥೆ: ಲಂಕೆಯಿಂದ ಜಾನಕಿಯನ್ನು ಬಿಡುಗಡೆ ಮಾಡಿ, ಮರಳಿ ಬರುವಾಗ ಶ್ರೀರಾಮಚಂದ್ರನು ಈ ಸ್ಥಳಕ್ಕೆ ಬಂದ. ಅಲ್ಲಿ ಶಿವಪೂಜೆ ಮಾಡುವ ಇಚ್ಛೆಯಿಂದ ಹನುಮಂತನಿಗೆ ಕಾಶಿಯಿಂದ ಒಂದು ಶಿವಲಿಂಗವನ್ನು ತರುವಂತೆ ಆದೇಶ ನೀಡಿದ. ಆದೇಶ ಪಡೆದ ಕೂಡಲೇ ವಾಯುಪುತ್ರನಾದ ಹನುಮಂತನು ವಾಯುವೇಗದಿಂದ ಹೋಗಿ, ಕಾಶಿಯಲ್ಲಿ ಬಂದಿಳಿದ. ದಾರಿ ಯಲ್ಲಿ ಹಲವಾರು ಶಿವಲಿಂಗಗಳು ಬಿದ್ದಿರುವುದನ್ನು ಕಂಡು, ತನ್ನ ಸ್ವಭಾವಕ್ಕೆ ಅನುಗುಣವಾಗಿ 'ಶಿವ ಓಡಿ ಹೋದನು' ಎಂದು ಭಾವಿಸಿದ. ಒಂದಕ್ಕೆ ಬದಲಾಗಿ ಎರಡು ಲಿಂಗಗಳನ್ನು ತನ್ನೆರಡು ಭುಜ ಗಳಲ್ಲಿ ಹೊತ್ತುಕೊಂಡ. ಶಿವನನ್ನು ಆನಂದಪಡಿಸುವುದಕ್ಕಾಗಿ ತನ್ನ ಬಾಲಕ್ಕೆ ಒಂದು ಗಂಟೆಯನ್ನು ಕಟ್ಟಲು ಯತ್ನಿಸಿದ. ಗಂಟೆಯ ಧ್ವನಿಯಿಂದ ತನಗೆ ಶಿವನ್ನು ಕೊಂಡೊಯ್ಯುವುದು ಸುಲಭವೆಂದು ಅವನು ಭಾವಿಸಿದ. ಆದರೆ ಗಂಟೆ ಕಟ್ಟುತ್ತಿರುವಾಗ ಒಬ್ಬ ಶಿವ ಪಲಾಯನ ಮಾಡಿಬಿಟ್ಟ, ಆ ಲಿಂಗ ಬಿದ್ದುಹೋಯಿತು. ಉಳಿ ದಿರುವ ಶಿವಲಿಂಗದೊಂದಿಗೆ ಹನುಮಂತ ಮರಳಿದ. ಅವನು ಬರುವುದು ತಡವಾದ್ದರಿಂದ ಶ್ರೀರಾಮಚಂದ್ರ ಸಮುದ್ರತೀರ ದಲ್ಲಿದ್ದ ಮರಳಿನಿಂದ ಶಿವಲಿಂಗವನ್ನು ನಿರ್ಮಿಸಿ ಸ್ಥಾಪನೆ ಮಾಡಿದ್ದ. ಅವನು ಆ ಲಿಂಗದ ಪೂಜೆ ಮಾಡಲು ಹೊರಟದ್ದನ್ನು ನೋಡಿದ ಹನುಮಂತ, ಮುಖಬಾಡಿಸಿ ನಿಂತುಕೊಂಡ. ಅವನ ಮನಸ್ಸನ್ನರಿತು, ಭಕ್ತರ ಮಾನ ಕಾಪಾಡುವುದಕ್ಕಾಗಿ ಅವನು ತಂದ ಶಿವಲಿಂಗವನ್ನು ಮೊದಲೇ ಪ್ರತಿಷ್ಠೆ ಮಾಡಿ, ಪೂಜೆ ಮಾಡಿದ ಬಳಿಕವೇ ತಾನು ನಿರ್ಮಿಸಿದ ಶಿವಲಿಂಗವನ್ನು ಪ್ರತಿಷ್ಠೆ ಮಾಡಿದ. ಆದ್ದರಿಂದ ಈ ನಿಯಮದ ಪ್ರಕಾರ ಮೊದಲಿನಿಂದ ಇಲ್ಲಿ ಹನುಮಾನ್ ತಂದ ವಿಶ್ವನಾಥನ ಪೂಜೆಯಾದ ಬಳಿಕ ಶ್ರೀರಾಮನು ಸ್ಥಾಪಿಸಿದ ರಾಮೇಶ್ವರನ ಪೂಜೆ, ನೈವೇದ್ಯಗಳು ನಡೆಯುತ್ತಿದ್ದಿರಬೇಕು. *(ಮುಂದುವರಿಯುವುದು)*



ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

ಭಾಗ ೧೮

ರಾಜಾ ಮಹಾರಾಜರ ಪತ್ರ ಸಂಗ್ರಹದಲ್ಲಿ ಸ್ವಾಮೀಜಿಯವರ ಬಹು ಅಮೂಲ್ಯವಾದ ಸುದೀರ್ಘ ಪತ್ರವೊಂದು ಸಿಕ್ಕಿತ್ತು. ಆ ಪತ್ರದಲ್ಲಿ ಸ್ವಾಮೀಜಿಯವರು ಶ್ರೀಮಾತೆಯವರ ಬಗ್ಗೆ ತಮ್ಮ ನಿಲುವನ್ನು ಬಹಳ ಭಾವೋದ್ದೀಪ್ತ ಭಾಷೆಯಲ್ಲಿ ವ್ಯಕ್ತಪಡಿಸಿದ್ದರು. ಶ್ರೀಮಾತೆಯವರ ಮಹಿಮೆಯನ್ನು ಬಹು ತೇಜೋಭರಿತ ಭಾಷೆಯಲ್ಲಿ ವರ್ಣಿಸಿದ್ದನ್ನು ಓದಿ ವಿರಜಾನಂದರು ಮೂಕವಿಸ್ಮಿತರಾದರು. ಈ ಪತ್ರವನ್ನು ಅವರು ತಾವು ಕೆಲಸ ಮಾಡುತ್ತಿದ್ದ ಮೇಜಿನ ಡ್ರಾಯರಿನಲ್ಲಿ ಭದ್ರವಾಗಿ ಎತ್ತಿಟ್ಟಿದ್ದರು. ಕೆಲವು ದಿನಗಳ ಮಟ್ಟಿಗೆ ಅವರು ಬೇರೊಂದು ಸ್ಥಳಕ್ಕೆ ಹೋಗಿದ್ದಾಗ, ಅವರ ಅನುಪಸ್ಥಿತಿಯಲ್ಲಿ ಆ ಡ್ರಾಯರಿನ ವಸ್ತುಗಳನ್ನು ಸ್ಥಳಾಂತರಿಸುವ ಸಮಯದಲ್ಲಿ ಆ ಪತ್ರವು ಕಳೆದುಹೋಗಿತ್ತು. ಮಠಕ್ಕೆ ಹಿಂದಿರುಗಿ ಸ್ವಾಮೀಜಿಯವರದೇ ಕೈಬರಹದಲ್ಲಿದ್ದ ಆ ಅಮೂಲ್ಯ ಪತ್ರವನ್ನು ಕಾಣದೆ ಅವರು ತುಂಬಾ ದುಃಖಿತರಾದರು.

ರಾಜಾ ಮಹಾರಾಜರಿಗೆ ಈ ಸಮಯದಲ್ಲಿ ಅತ್ಯಂತ ಭೀಕರವಾದ ಟೈಫಾಯಿಡ್ ಬಂದಿತು. ವಿರಜಾನಂದರು ಪ್ರಾಣವನ್ನೇ ಪಣವೊಡ್ಡಿ ಅವರ ಸೇವೆಯನ್ನು ಮಾಡಿದರು. ಟೈಫಾಯಿಡ್‌ನಿಂದ ಸುಧಾರಿಸಿಕೊಂಡ ಮೇಲೆ ರಾಜಾ ಮಹಾರಾಜರು ವಾಯು ಬದಲಾವಣೆ ಹಾಗೂ ವಿಶ್ರಾಂತಿಗಾಗಿ ಸಿಮುಲ್‌ತಲಾ ಎಂಬಲ್ಲಿಗೆ ಹೋದರು. ಅವರ ಸೇವಕರಾಗಿ ವಿರಜಾನಂದರೂ ಹೊರಟರು. ಇವರೊಂದಿಗೆ ಕೊನ್ನಗರದ ಒಬ್ಬ ಡಾಕ್ಟರ್ ಸಹ ಹೋಗಿದ್ದನು. ಈ ಡಾಕ್ಟರ್ ಶ್ರೀರಾಮಕೃಷ್ಣರ ಬಳಿಗೆ ಹೋಗಿಬರುತ್ತಿದ್ದನು. ಈತ ಬಲು ರಸಿಕ. ಈತನೊಂದಿಗೆ ರಾಜಾ ಮಹಾರಾಜ್ ಕೂಡ ತುಂಬ ಹಾಸ್ಯ-ವಿನೋದಗಳಲ್ಲಿ ತೊಡಗುತ್ತಿದ್ದರು. ಡಾಕ್ಟರ್‌ಗೆ ತಂಬಾಕು ಸೇವಿಸುವ ಹಾಗೂ ಇನ್ನಿತರ ಚಟಗಳಿದ್ದವು. ಆತನು ಸ್ವಲ್ಪ ತಂಬಾಕನ್ನೇ ಅದೆಷ್ಟು ಕುಶಲತೆಯಿಂದ ಸಿದ್ಧಪಡಿಸುತ್ತಿದ್ದನೆಂದರೆ, ಅದು ಒಂದು ಗಂಟೆಯವರೆಗೂ ಉರಿಯುತ್ತಿತ್ತು. ಈ ಕೌಶಲವನ್ನು ಕಂಡು ವಿರಜಾನಂದರು ಅವಾಕ್ಕಾದರು! ಸಿಮುಲ್‌ತಲಾದ ನೆನಪುಗಳನ್ನು ವಿರಜಾನಂದರು ಮುಂದೊಮ್ಮೆ ಹೀಗೆ ಹೇಳುತ್ತಿದ್ದರು: ''ಸಿಮುಲ್‌ತಲಾ ಆಗ ತುಂಬ ನಿರ್ಜನವಾಗಿತ್ತು. ಮನೆ-ಮಠಗಳು ಇರಲಿಲ್ಲವೆಂದೇ ಹೇಳಬಹುದು. ರಾಜಾ ಮಹಾರಾಜರು ವಾಯು ಸಂಚಾರಕ್ಕೆ ಬಹಳವಾಗಿ ಹೋಗುತ್ತಿದ್ದರು. ನಾನು ಅವರಿಗೆ 'ಸೂಪ್' ಮಾಡಿಕೊಡುತ್ತಿದ್ದೆ. ಪ್ರಸಾದವಾಗಿ ನಾನೂ ಅದನ್ನೇ



ಕುಡಿಯುತ್ತಿದ್ದೆ. ಅಲ್ಲಿಗೆ ಹೋದದ್ದರಿಂದ ಮಹಾರಾಜರಿಗೆ ಒಳ್ಳೆಯ ಛೇಂಜ್ ಆಯಿತು. ಬೇಗನೆ ಚೇತರಿಸಿಕೊಂಡರು.''

ರಾಜಾ ಮಹಾರಾಜರು ಮಠಕ್ಕೆ ಹಿಂತಿರುಗಿದರು, ವಿರಜಾನಂದರೂ ಅವರ ಸೇವೆಯಲ್ಲಿ ನಿರತರಾದರು. ಅದು ೧೯೦೫ರ ಕೊನೆಯ ಭಾಗ. ಅಷ್ಟರಲ್ಲಿ ನ್ಯೂಯಾರ್ಕಿನಿಂದ ಸ್ವಾಮಿ ಅಭೇದಾನಂದರು ಮಠದಿಂದ ಒಬ್ಬರನ್ನು ಅಲ್ಲಿಗೆ ಕಳುಹಿಸಬೇಕೆಂದು ಕೇಳಿಕೊಂಡರು. ಹಾಗೆಯೇ ತ್ರಿಗುಣಾತೀತಾನಂದರೂ ಸಹ, ತಮ್ಮ ಸ್ಯಾನ್‌ಫ್ರಾನ್ಸಿಸ್ಕೋ ಕೇಂದ್ರದ ಕೆಲಸಗಳೊಂದಿಗೆ ಸಹಕರಿಸಲು ಒಬ್ಬ ಸಂನ್ಯಾಸಿಯನ್ನು ಕಳುಹಿಸಿರೆಂದು ಕೋರಿ ಪತ್ರ ಬರೆದಿದ್ದರು.

''ನೀನು ಹೋಗುವೆಯೇನು?'' ಎಂದು ರಾಜಾ ಮಹಾರಾಜ್ ವಿರಜಾನಂದರನ್ನು ಕೇಳಿದರು. ''ನನಗೆ ಲೆಕ್ಚರ್ ಕೊಡಲು ಬರುವುದಿಲ್ಲ'' ಎಂದು ಹೇಳಿ ಅವರು ಹೋಗಲೊಪ್ಪಲಿಲ್ಲ. ಆಗ ಮಠದಲ್ಲಿ ತುಳಸೀ ಮಹಾರಾಜರು (ಸ್ವಾಮಿ ನಿರ್ಮಲಾನಂದರು) ಇದ್ದರು; ಆಗ ತಾನೇ ಅಮೇರಿಕದಿಂದ ಹಿಂದಿರುಗಿದ್ದರು. ಅವರು ವಿರಜಾನಂದರನ್ನು ಒಪ್ಪಿಸಲಾಗದಿದ್ದಾಗ, ಶರತ್ ಮಹಾರಾಜರಿಗೆ ಒಪ್ಪಿಸುವ ಕೆಲಸವನ್ನು ಹಚ್ಚಿದರು. ಶರತ್ ಮಹಾರಾಜರು ವಿರಜಾನಂದರಿಗೆ ಧೈರ್ಯವೀಯುತ್ತಾ, ಅಮೆರಿಕಾಗೆ ಹೋಗಲು ಹುರಿದುಂಬಿಸಿದರು. ಕೊನೆಗೂ ಅವರ ಒತ್ತಾಯಕ್ಕೆ ಮಣಿಯಬೇಕಾಯಿತು. ವಿರಜಾನಂದರನ್ನು ಸ್ಯಾನ್‌ಫ್ರಾನ್ಸಿಸ್ಕೋಗೂ, ಬೋಧಾನಂದರನ್ನು ನ್ಯೂಯಾರ್ಕಿಗೂ ಕಳುಹಿಸಬೇಕೆಂದು ನಿರ್ಧರಿಸಲಾಯಿತು. ವಿರಜಾನಂದರು ಅಲ್ಲಿಗೆ ಅಗತ್ಯವಿದ್ದ ಪೋಷಾಕಿಗಾಗಿ ಅಳತೆಯನ್ನು ಕೊಟ್ಟು, ಹೊಲಿದಿಡಲು ಹೇಳಿ, ಶ್ರೀಮಾತೆಯವರ ಅನುಮತಿ ಮತ್ತು ಆಶೀರ್ವಾದಗಳನ್ನು ಪಡೆದು ಬರಲು ಜಯರಾಂಬಾಟಿಗೆ ಹೋದರು. ಅಲ್ಲಿಂದ ಕಂಖಲ್‌ಗೆ ಹೋಗಿ ಪೂಜ್ಯ ಹರಿ ಮಹಾರಾಜರನ್ನು ನೋಡಿಕೊಂಡು ಬರುವುದೆಂದು ನಿಶ್ಚಯಿಸಿಕೊಂಡರು. ಏಕೆಂದರೆ ದೂರದ ಅಮೆರಿಕಾಗೆ ಹೋದರೆ ಮತ್ತೆ ಯಾವಾಗ ಸ್ವದೇಶಕ್ಕೆ ಮರಳುವರೋ, ಮತ್ತೆ ಯಾವಾಗ ಶ್ರೀರಾಮಕೃಷ್ಣರ ಲೀಲಾಸಹಚರರೊಂದಿಗೆ ಭೇಟಿಯಾಗುವರೋ — ಯಾರಿಗೆ ಗೊತ್ತು?

ವಿರಜಾನಂದರು ಪ್ರಚಾರಕಾರ್ಯಕ್ಕಾಗಿ ಅಮೆರಿಕಾಗೆ ಹೋಗುತ್ತಿರುವುದನ್ನು ಕೇಳಿ ಶ್ರೀಮಾತೆಯವರು ಸರ್ವಾಂತಃಕರಣದಿಂದ ಅನುಮತಿಯಿತ್ತು ಆಶೀರ್ವದಿಸಿದರು. ವಿರಜಾನಂದರು ಶ್ರೀಮಾತೆಯವರಿಗೆ, ''ಅಮ್ಮಾ, ನಾನು ಶಕ್ತಿಹೀನ, ನನಗೆ ಏನೇನೂ ಗೊತ್ತಿಲ್ಲ. ಅಮೆರಿಕಾದಲ್ಲಿ ನನ್ನಿಂದ ಅದೇನು ಕೆಲಸ ನಡೆಯುವುದೋ ಕಾಣೆ. ನನ್ನ ಮೇಲೆ ಕೃಪೆಯಿಟ್ಟು ಆಶೀರ್ವದಿಸಿರಿ'' ಎಂದರು. ಶ್ರೀಮಾತೆಯವರು, ''ಮಗು, ಠಾಕೂರರು ನಿನ್ನನ್ನು ಸದಾ ರಕ್ಷಿಸುವರು, ಅವರ ಕೆಲಸವನ್ನು ಅವರೇ ಮಾಡಿಸಿಕೊಳ್ಳುವರು. 'ಹೇ ಠಾಕೂರ್, ನೀವು ನನ್ನನ್ನು ಇಹ-ಪರದಲ್ಲಿ ರಕ್ಷಿಸಿ' ಎಂದು ಅವರಲ್ಲಿ ಸದಾ ಪ್ರಾರ್ಥಿಸು'' ಎಂದು ಹೇಳಿದರು. ಆಗ ವಿರಜಾನಂದರು, ''ಅಮ್ಮಾ, ಸಾಧನೆಯನ್ನೇನೂ ಮಾಡಲಿಲ್ಲ, ಏನೂ ಲಭಿಸಲಿಲ್ಲ. ಠಾಕೂರರ ದರ್ಶನವನ್ನೂ ಪಡೆಯಲಿಲ್ಲ. ಮುಂದೇನು ಗತಿ?'' ಎಂದು ಪ್ರಶ್ನಿಸಿದರು. ಅದಕ್ಕೆ ಶ್ರೀಮಾತೆಯವರು, ''ಮಗು, ಇನ್ನೂ ಎಷ್ಟು ಅಂತ ಸಾಧನೆ, ಭಜನೆ ಮಾಡುವೆ? ಠಾಕೂರರ ದರ್ಶನವನ್ನಂತೂ ನೀನು ಪಡೆದೇ ಇದ್ದೀಯಾ'' ಎಂದರು.

ಈ ಮಾತನ್ನು ಕೇಳಿದ ವಿರಜಾನಂದರು ಆಶ್ಚರ್ಯಚಕಿತರಾದರು. ಆ ಕ್ಷಣದಲ್ಲಿ ಅವರ ಮಾತಿನ ಗೂಢಾರ್ಥವನ್ನು ತಿಳಿಯಲಾರದೆ ಹೋದರು. ಅನಂತರ ಇದ್ದಕ್ಕಿದ್ದಂತೆ ಅದರರ್ಥ ಹೃದ್ಗತವಾಯಿತು, 'ಯಾವಾಗ ಶ್ರೀಮಾತೆಯವರ ದರ್ಶನವಾಗಿದೆಯೋ ಆಗಲೇ ಶ್ರೀರಾಮಕೃಷ್ಣರ ದರ್ಶನವಾದಂತೆಯೇ' ಎಂಬುದೇ ಶ್ರೀಮಾತೆಯವರ ಮಾತಿನ ಅರ್ಥ. ಈ ಅರಿವಿನಿಂದಾಗಿ ವಿರಜಾನಂದರ ಹೃದಯವು ಆನಂದೋತ್ಸಾಹದಿಂದ ತುಂಬಿಹೋಯಿತು. ಅವರು ಶ್ರೀಮಾತೆಯವರನ್ನು, ''ಅಮ್ಮಾ, ಅಮೇರಿಕಾಗೆ ಹೋದರೆ, ಅಲ್ಲಿ ಅನೇಕರು ಮಂತ್ರದೀಕ್ಷೆಗಾಗಿ ಪೀಡಿಸುತ್ತಾರೆ. ಆಗ ನಾನೇನು ಮಾಡಲಿ?'' ಎಂದು ಕೇಳಿದರು. ಅದಕ್ಕೆ ತಾಯಿಯವರು, ''ಕೊಡು, ಅದರಲ್ಲೇನು?'' ಎಂದು ಹೇಳಿ, ಯಾವ ಅಧಿಕಾರಿಗೆ ಯಾವ ಮಂತ್ರವನ್ನು ಉಪದೇಶಿಸಬೇಕು ಎಂಬುದನ್ನು ವಿಶದವಾಗಿ ತಿಳಿಸಿದರು. ಕೆಲವು ದಿನಗಳನ್ನು ಮಾತೃಸಾನ್ನಿಧ್ಯದಲ್ಲಿ ಕಳೆದರು. ಬಳಿಕ ಅವರಿಂದ ಆಶೀರ್ವಾದವನ್ನು ಪಡೆದು, ಕಂಖಲ್‌ಗೆ ಹೊರಟರು.

ಕಂಖಲ್‌ಗೆ ಹೋಗುವ ಮಾರ್ಗದಲ್ಲಿ ಕಾಶಿಯಲ್ಲಿ ಇಳಿದರು. ಅಲ್ಲಿದ್ದಾಗ ಅವರಿಗೆ ಶರತ್ ಮಹಾರಾಜರ ಪತ್ರವೊಂದು ಬಂತು. ಯಾವ ಹಡಗಿನಲ್ಲಿ ವಿರಜಾನಂದ ಮತ್ತು ಬೋಧಾನಂದರಿಗಾಗಿ ಟಿಕೇಟು ಕೊಂಡುಕೊಳ್ಳಲು ಪ್ರಯತ್ನಿಸುತ್ತಿದ್ದರೋ ಅದರಲ್ಲಿ ಸ್ಥಳಾವಕಾಶವಿರಲಿಲ್ಲ. ಆದರೆ ಅದಕ್ಕೂ ಮೊದಲು ಹೊರಡುವ ಇನ್ನೊಂದು ಹಡಗಿನಲ್ಲಿ ಅನಿರೀಕ್ಷಿತವಾಗಿ ಒಂದೇ ಒಂದು ಸ್ಥಳ ಖಾಲಿ ಇತ್ತು. ನ್ಯೂಯಾರ್ಕ್‌ನಲ್ಲಿ ಸ್ವಾಮಿ ಅಭೇದಾನಂದರಿಗೆ ಸಹಾಯಕರಿಲ್ಲದೆ ಬಹಳ ತೊಂದರೆಯಾಗುತ್ತಿದ್ದ ಕಾರಣ ಮೊದಲು ಬೋಧಾನಂದರನ್ನು ಆ ಹಡಗಿನಲ್ಲಿ ಕಳುಹಿಸಬೇಕೆಂಬುದು ಎಲ್ಲರ ಅಭಿಮತವಾಗಿತ್ತು. ವಿರಜಾನಂದರ ಹಡಗು ಮೇ ೨೨ ರಂದು ಹೊರಡಲಿತ್ತು; ಅವರು ಒಬ್ಬರೇ ಹೋಗಬೇಕಾಗಿತ್ತು. ಪರಿಸ್ಥಿತಿಯನ್ನು ಬದಲಾಯಿಸಲು ಬೇರೆ ಉಪಾಯವಿಲ್ಲ. ವಿರಜಾನಂದರು ಈ ಅನಿರೀಕ್ಷಿತ ಘಟನೆಗಳಿಂದ ಕುಗ್ಗಿಹೋಗದೆ, ಕಡೇ ಪಕ್ಷ ಹೊರಡುವ ೧೫ ದಿನಗಳ ಮುಂಚೆಯೇ ಕೊಲ್ಕತ್ತೆಗೆ ಹಿಂದಿರುಗಬೇಕು ಎಂಬುದೇ ಆ ಪತ್ರದ ಸಾರಾಂಶವಾಗಿತ್ತು.

ಪತ್ರವನ್ನೋದಿ ವಿರಜಾನಂದರು ತುಂಬ ವಿಚಲಿತರಾದರು. ನಿರ್ಧರಿಸಿದ ಕಾರ್ಯಕ್ರಮವು ಹೀಗೆ ಅದಲುಬದಲಾಗಿ ಹೋದುದಕ್ಕೆ ಅವರ ಮನಸ್ಸಿಗೆ ನೋವಾಯಿತು. ಮೊದಲು, ಬೋಧಾನಂದರೊಂದಿಗೆ ಹೋಗುವುದೆಂದು ಭಾವಿಸಿದ್ದರು. ಆದರೆ ಪತ್ರದ ಪ್ರಕಾರ ಈಗ ಅವರು ಒಬ್ಬರೇ ಪ್ರಯಾಣ ಮಾಡಬೇಕಾಗಿದೆ; ಮನಸ್ಸು ಅದಕ್ಕೆ ಕಿಂಚಿತ್ತೂ ಒಪ್ಪುತ್ತಿಲ್ಲ. ಅಮೇರಿಕಾಗೆ ಹೋಗುವ ಆಲೋಚನೆಯನ್ನೇ ಸಂಪೂರ್ಣವಾಗಿ ಕೈಬಿಟ್ಟು, ಶರತ್ ಮಹಾರಾಜರಿಗೆ ಹೀಗೆಂದು ಪತ್ರ ಬರೆದರು: ''ನನಗೆ ಅಮೇರಿಕಾಗೆ ಹೋಗುವ ಇಚ್ಛೆಯಾಗಲಿ, ಉತ್ಸಾಹವಾಗಲಿ ಕಿಂಚಿತ್ತೂ ಇರಲಿಲ್ಲ. ದೇಹಾರೋಗ್ಯ ಸ್ವಲ್ಪ ಸುಧಾರಿಸಿದರೆ ಸಾಧನೆಗೆ ತೊಡಗುವ ಉದ್ದೇಶದಿಂದಲೇ ಮಾಯಾವತಿಯಿಂದ ಇಳಿದು ಬಂದಿದ್ದೆ. ನೀವೆಲ್ಲರೂ ಮತ್ತೆ ಮತ್ತೆ ಬಲವಂತಪಡಿಸಿದ್ದಕ್ಕೆ ಅಮೇರಿಕಾಗೆ ಹೋಗಲು ಸಿದ್ಧನಾದೆ. ಈಗ ಈ ರೀತಿ ಅಡ್ಡಿ ಅಡಚಣೆಗಳು ಬಂದಿರುವುದರಿಂದ ಇದು ದೈವಸಮ್ಮತವಲ್ಲವೆಂದೇ ತಿಳಿಯಬೇಕು. ದಯವಿಟ್ಟು ಇನ್ನು

ಮುಂದೆ ನನಗೆ ಅಮೆರಿಕಾಗೆ ಹೋಗಲು ಒತ್ತಾಯಿಸಬೇಡಿ. ನಾನು ಕಂಖಲ್‌ಗೆ ಹೋಗಿ ತಪಸ್ಸು ಮಾಡಬೇಕೆಂದು ನಿರ್ಧರಿಸಿರುವೆ. ಇದಕ್ಕೆ ನಿಮ್ಮ ಅಭ್ಯಂತರವೇನೂ ಇರುವುದಿಲ್ಲವೆಂದು ಆಶಿಸುವೆ.''

ವಿರಜಾನಂದರ ಪತ್ರವನ್ನೋದಿದ ಶರತ್ ಮಹಾರಾಜರು ಅವರಿಗೆ, ''ನೀನು ಮಠಕ್ಕೆ ಹೊರಟು ಬಾ, ಇಲ್ಲಿ ಸಾವಕಾಶವಾಗಿ ಮುಖತಃ ಎಲ್ಲ ಮಾತನಾಡೋಣ'' ಎಂದು ಬರೆದರು. ಆದರೆ ಮಠಕ್ಕೆ ಹೋದರೆ ಶರತ್ ಮಹಾರಾಜರ ಮಾತನ್ನು ಮೀರಲಾಗದು, ಅಮೇರಿಕಾಗೆ ಹೋಗಲೇಬೇಕಾಗುತ್ತದೆಂದು ವಿರಜಾನಂದರು ಯೋಚಿಸಿದರು. ಅದಲ್ಲದೆ ಈಗ ಮನಸ್ಸು ತಪಸ್ಸಿನೆಡೆಗೆ ವಾಲಿತ್ತು; ಅವಕಾಶವೂ ಸಿಕ್ಕಿತ್ತು. ಬಿಟ್ಟುಬಿಟ್ಟರೆ ಮತ್ತೆ ಯಾವಾಗ ಒದಗುವುದೋ ಯಾರಿಗೆ ಗೊತ್ತು? ಆದ್ದರಿಂದ ಅವರು ತಪಸ್ಸನ್ನಾಚರಿಸುವ ದೃಢಸಂಕಲ್ಪ ಮಾಡಿ ಕಂಖಲ್‌ಗೆ ಬಂದರು. ಹರಿ ಮಹಾರಾಜರು (ಸ್ವಾಮಿ ತುರೀಯಾನಂದರು) ಅವರಿಂದ ಎಲ್ಲವನ್ನೂ ಕೇಳಿ, ಅವರ ನಿರ್ಧಾರವನ್ನು ಅನುಮೋದಿಸುತ್ತ 'ಭೇಷ್! ಒಳ್ಳೆಯದನ್ನೇ ಮಾಡಿದೆ' ಎಂದರು. ವಿರಜಾನಂದರು ಅಮೆರಿಕಾಗೆ ಹೋಗುವ ವಿಷಯವನ್ನು ಕೇಳಿ ಸ್ವರೂಪಾನಂದರು ಮಾಯಾವತಿಯಿಂದ ಪತ್ರವೊಂದರಲ್ಲಿ ಮೊದಲೇ ಹೀಗೆ ಬರೆದಿದ್ದರು: ''ನಿನ್ನ ಏಪ್ರಿಲ್ ೩ರ ಪತ್ರದಿಂದ ನೀನು ನ್ಯೂಯಾರ್ಕಿಗೆ ಹೋಗಲಿರುವ ಶುಭ ಸಮಾಚಾರವನ್ನು ತಿಳಿದು ನಮಗೆಲ್ಲರಿಗೂ ಬಹಳ ಆನಂದವಾಯಿತು. ಈ ಸಂದರ್ಭದಲ್ಲಿ ನಮ್ಮೆಲ್ಲರ ಹೃತ್ಪೂರ್ವಕ ಶುಭಾಶಯಗಳನ್ನು ಸ್ವೀಕರಿಸು... ನಿನ್ನ ಪ್ರಯಾಣವು ಸುಗಮವಾಗಿರಲಿ, ಕೆಲಸವು ಸಾರ್ಥಕವಾಗಲಿ'' (ಮಾಯಾವತಿಯಿಂದ ೮.೪.೧೯೦೬ನೇ ತಾರೀಕಿನಂದು ಅವರು ಬರೆದ ಇಂಗ್ಲಿಷ್ ಪತ್ರದಿಂದ). ಅಷ್ಟರಲ್ಲೇ ಮತ್ತೆ ವಿರಜಾನಂದರು ಮನಸ್ಸನ್ನು ಬದಲಾಯಿಸಿದ್ದಾರೆಂದು ಕೇಳಿ, ಸ್ವರೂಪಾನಂದರು ಮತ್ತೊಂದು ಪತ್ರವನ್ನು ತಮಾಷೆಯಾಗಿ ಬರೆದರು: ''ಪ್ರಿಯ ವಿರಜಾ, — ನೀನು ನನ್ನೆಲ್ಲ ಶುಭಾಶಯಗಳನ್ನೂ ವ್ಯರ್ಥ ಮಾಡಿಬಿಟ್ಟೆಯಲ್ಲ!....'' (೪.೫.೧೯೦೬ರ ಪತ್ರ).

ಕಂಖಲ್‌ನಲ್ಲಿ ವಿರಜಾನಂದರು ತುಂಬ ನಿಷ್ಠೆ, ಅನುರಾಗದಿಂದ ಸಾಧನೆಯಲ್ಲಿ ಮುಳುಗಿದರು. ಕಂಖಲ್ ಸೇವಾಶ್ರಮವು ಆಗ ಸ್ವಾಮಿ ಕಲ್ಯಾಣಾನಂದರ ಅವಿಶ್ರಾಂತ ದುಡಿಮೆಯಿಂದ ಸುಪ್ರತಿಷ್ಠಿತವಾಗಿತ್ತು. ಒಂದು ದೇವರ ಮನೆಯಿತ್ತಾದರೂ ಅಲ್ಲಿ ವಿಧಿವತ್ತಾದ ಪೂಜೆಯೇನೂ ಆರಂಭವಾಗಿರಲಿಲ್ಲ. ಕೆಲವರು ಹೋಗಿ ದೇವರ ಪಟಕ್ಕೆ ಹೂವಿಟ್ಟು ಅಲಂಕರಿಸುತ್ತಿದ್ದರು ಅಷ್ಟೆ. ವಿರಜಾನಂದರು ಈಗ ಆ ದೇವರ ಮನೆಯಲ್ಲಿ ಜಪತಪಾದಿಗಳಲ್ಲಿ ತೊಡಗಿದರು. ಊಟಕ್ಕಾಗಿ ಆಶ್ರಮದ ಹೊರಗೆ ಹೋಗಿ ಮಧುಕರಿ ಮಾಡಿಕೊಂಡು ಬರುತ್ತಿದ್ದರು.

ಕಲ್ಯಾಣಾನಂದರ ಬಲವಂತಕ್ಕಾಗಿ ಆಶ್ರಮದ ಪಾಕಶಾಲೆಯಿಂದ ಬೇಯಿಸಿದ ತರಕಾರಿಗಳನ್ನು ಸ್ವೀಕರಿಸಿ, ಭಿಕ್ಷೆಯಿಂದ ಸಿಕ್ಕ ಚಪಾತಿ, ದಾಲ್‌ನೊಂದಿಗೆ ಸೇವಿಸುತ್ತಿದ್ದರು. ಯಾರೊಂದಿಗೂ ಹೆಚ್ಚು ಬೆರೆಯುತ್ತಿರಲಿಲ್ಲ ; ಸಂಜೆ ಹರಿ ಮಹಾರಾಜರೊಂದಿಗೆ ಸ್ವಲ್ಪ ತಿರುಗಾಡಿಕೊಂಡು ಬರುತ್ತಿದ್ದರಷ್ಟೆ. ತೀವ್ರ ವೈರಾಗ್ಯದ ಮನಃಸ್ಥಿತಿಯಿಂದಾಗಿ ದಿನದಿನಕ್ಕೂ ಹೆಚ್ಚುಹೆಚ್ಚು ಶಾಂತಿ, ಆನಂದಗಳನ್ನು ಪಡೆಯಲಾರಂಭಿಸಿದರು. ಸ್ವಲ್ಪ ದಿನಗಳಲ್ಲಿ ಹರಿ ಮಹಾರಾಜರು ಉತ್ತರಕಾಶಿಗೆ ಹೊರಟುಹೋದರು. ವಿರಜಾನಂದರು ತಾವೂ ಅವರೊಂದಿಗೆ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದರು; ಅದಕ್ಕೆ ಹರಿ ಮಹಾರಾಜರು ಒಪ್ಪಲಿಲ್ಲ.

ಕಂಖಲಿನಲ್ಲಿ ವಿರಜಾನಂದರು ಕೆಲವು ತಿಂಗಳು ನಿರಾತಂಕವಾಗಿ ನಡೆಸುತ್ತಿದ್ದ ತಪಶ್ಚರ್ಯವು ಒಂದು ಅನಿರೀಕ್ಷಿತ ಘಟನೆಯಿಂದಾಗಿ ಕೊನೆಗೊಂಡಿತು. ಈ ಹಿಂದೆ ಕೆಲವೊಮ್ಮೆ ಏನು ನಡೆದಿತ್ತೋ ಅದರದೇ ಪುನರಾವರ್ತನೆ! 'ಈ ಸಲ ಭಗವಂತನ ಸಾಕ್ಷಾತ್ಕಾರವಾಗುವವರೆಗೂ ಇಲ್ಲಿಂದ ಕದಲುವುದಿಲ್ಲ' ಎಂದು ಅವರು ಅದೆಷ್ಟು ಸಲ ಸಂಕಲ್ಪ ಮಾಡಿ ತಪಸ್ಸಿಗೆ ತೊಡಗುತ್ತಿದ್ದರೋ ಅಷ್ಟು ಸಲವೂ ವಿಧಿಯ ಅದೃಶ್ಯ ಹಸ್ತವು ಒಂದಿಲ್ಲೊಂದು ವಿಘ್ನವನ್ನೊಡ್ಡಿ, ಅವರನ್ನು ಅವರ ಅವಿರತ ತಪಸ್ಯೆಯಿಂದ ಹೊರಗೆಳೆಯುತ್ತಿತ್ತು. ಸ್ವಾಮೀಜಿಯವರ ಕವಿತೆಯ ಸಾಲೊಂದು ಅವರ ನೆನಪಿಗೆ ಬಂತು —

ರೆಕ್ಕೆಯಿಲ್ಲದ ವಿಹಂಗಮವೇ ಕೇಳು,
ಇದಲ್ಲ ನೀನು ತಪ್ಪಿಸಿಕೊಳ್ಳುವ ಪಥ.

ಒಂದು ದಿನ ಬೇಲೂರು ಮಠದಿಂದ ಒಂದು ಟೆಲಿಗ್ರಾಂ ಬಂತು. ಅದರಲ್ಲಿ, 'ಸ್ವರೂಪಾನಂದರು ನೈನಿತಾಲ್‌ನಲ್ಲಿ ತುಂಬ ಅಸ್ವಸ್ಥರಾಗಿದ್ದಾರೆ, ಅವರೊಬ್ಬರೇ ಇರುವುದರಿಂದ ನೀವು ಯಾರಾದರೊಬ್ಬರು ಅವರ ಸೇವೆಗಾಗಿ ತಕ್ಷಣವೇ ಅಲ್ಲಿಗೆ ಹೋಗಬೇಕು' ಎಂಬ ವಾರ್ತೆಯಿತ್ತು. ಆದರಣೀಯ ಗುರುಭಾಯಿಯು ಕಠಿಣ ರೋಗಕ್ಕೆ ತುತ್ತಾದ ಸುದ್ದಿ ಕೇಳಿ, ಕಾಳೀಕೃಷ್ಣರ ಕೋಮಲ ಹೃದಯಕ್ಕೆ ಆಘಾತವಾಯಿತು. ಕಂಖಲಿನಲ್ಲಿ ಆಗ ಬ್ರಹ್ಮಚಾರಿ ಜ್ಞಾನ್ ಸಹ ಇದ್ದರು. ಅವರನ್ನೂ ಕರೆದುಕೊಂಡು ತಾವು ನೈನಿತಾಲಿಗೆ ತಕ್ಷಣವೇ ಹೋಗುವುದೆಂದು ವಿರಜಾನಂದರು ನಿರ್ಧರಿಸಿದರು. ಅವರು ಹೊರಡುವಷ್ಟರಲ್ಲಿ, 'ಜೂನ್ ೨೬ರಂದು (೧೯೦೬) ಸ್ವರೂಪಾನಂದರು ತಮ್ಮ ದೇಹವನ್ನು ತ್ಯಜಿಸಿದರು' ಎಂಬ ದುಃಖವಾರ್ತೆಯನ್ನು ಹೊತ್ತ ಮತ್ತೊಂದು ಟೆಲಿಗ್ರಾಂ ಬಂತು. ಅದರ ಬೆನ್ನಲ್ಲೇ ವಿರಜಾನಂದರಿಗೆ ಶರತ್ ಮಹಾರಾಜರಿಂದಲೂ ಪತ್ರ ಬಂತು. ಅದರಲ್ಲಿ, ''ನೀನು ಮತ್ತಿನ್ನೇನನ್ನೂ ಯೋಚಿಸದೆ, ಮಾಯಾವತಿಗೆ ಹೊರಡುವ ಮೊದಲ ರೈಲನ್ನು ಹಿಡಿ'' ಎಂದು ಬರೆದಿತ್ತು.[೧]

---

[೧] ಪೂಜ್ಯ ಸ್ವಾಮಿ ಶಾರದಾನಂದರು 'ಪ್ರವಾಸಿ' ಪತ್ರಿಕೆಯ ಸಂಪಾದಕರ ಬೇಡಿಕೆಯ ಮೇರೆಗೆ ಸ್ವಾಮಿ ಸ್ವರೂಪಾನಂದರ ಬಗ್ಗೆ ಒಂದು ಪ್ರಬಂಧವನ್ನು ಬರೆದಿದ್ದರು. ಅದು ಆ ಪತ್ರಿಕೆಯಲ್ಲಿ ಅಚ್ಚಾಗಿತ್ತು. ಪ್ರಬಂಧದ ಕೊನೆಯಲ್ಲಿ ಶಾರದಾನಂದರು ಹೀಗೆಂದು ಬರೆದಿದ್ದರು: ''ಹೂವು ಅರಳಿತ್ತು. ಭ್ರಮರವು

ಮಾಯಾವತಿಯಲ್ಲಾಗ ವಿಮಲಾನಂದರಾಗಲೀ, ಪ್ರಕಾಶಾನಂದರಾಗಲೀ ಇರಲಿಲ್ಲ, ಅವರೂ ಅಲ್ಲಿಂದ ಬಂದುಬಿಟ್ಟಿದ್ದರು. ಹಳಬರಾರೂ ಅಲ್ಲಿರಲಿಲ್ಲ. ಪುತ್ರಸಮಾನರಾದ ಸ್ವರೂಪಾನಂದರ ಅಕಾಲ ಮರಣದಿಂದ ಮಿಸೆಸ್ ಸೇವಿಯರ್ ಬಹಳ ನೊಂದು ಶೋಕವಿಹ್ವಲರಾಗಿರುತ್ತಾರೆಂಬುದನ್ನು ವಿರಜಾನಂದರು ಮನಗಂಡರು. ಹಳಬರಾಗಿದ್ದುದರಿಂದ ಸ್ವಾಭಾವಿಕವಾಗಿ ತಾವೇ ಅಲ್ಲಿಗೆ ಹೋಗುವುದು ಸೂಕ್ತವೆಂದು ಭಾವಿಸಿ, ತಮ್ಮ ಮನಸ್ಸನ್ನು ಗಟ್ಟಿ ಮಾಡಿಕೊಂಡು ಮಾಯಾವತಿಗೆ ಹೊರಡಲನುವಾದರು. ಸದ್ಯದ ಮಟ್ಟಿಗೆ ಅವರ ತಪೋಜೀವನ ಸ್ಥಗಿತಗೊಂಡಿತು.

೧೨

ಮತ್ತೆ ಹಿಮಾಲಯಕ್ಕೆ!

ಶರತ್ ಮಹಾರಾಜರ ಆಣತಿಯಂತೆ ವಿರಜಾನಂದರು ಮಾಯಾವತಿಗೆ ಬರುತ್ತಿದ್ದಾರೆಂಬ ವಿಷಯವು ಮಿಸೆಸ್ ಸೇವಿಯರ್‌ಗೆ ಸ್ವಲ್ಪವೂ ತಿಳಿದಿರಲಿಲ್ಲ. ಅಕಸ್ಮಾತ್ತಾಗಿ ವಿರಜಾನಂದರನ್ನು ಅಲ್ಲಿ ನೋಡಿದ ಅವರ ವಿಸ್ಮಯಕ್ಕೆ ಪಾರವೇ ಇರಲಿಲ್ಲ. ಮೂರು ವರ್ಷಗಳ ನಂತರ ಅವರನ್ನು ಕಂಡ ಮದರ್ ಸೇವಿಯರ್ ಅವರ ಮಾತೃಹೃದಯ ಸಂತೃಪ್ತಿ ಹೊಂದಿತಾದರೂ, ಇದ್ದಕ್ಕಿದ್ದಂತೆ ಸ್ವರೂಪಾನಂದರ ನೆನಪಾಗಿ, ಹಿಡಿದಿಟ್ಟಿದ್ದ ಅವರ ದುಃಖದ ಕಟ್ಟೆಯೊಡೆದು ಹೊರಬಂದಿತು. ಆಕೆ ಬಾಲೆಯಂತೆ ಅಳತೊಡಗಿದರು. ವಿರಜಾನಂದರು ಅವರಿಗೆ ಸಮಯೋಚಿತವಾದ ಸಾಂತ್ವನವನ್ನಿತ್ತು ಸಮಾಧಾನಪಡಿಸಲೆತ್ನಿಸಿದರು. ಆದರೆ ಸ್ವರೂಪಾನಂದರ ಹಠಾತ್ ಮರಣದಿಂದ ಅವರ ಹೃದಯವು ಭಗ್ನಗೊಂಡಿತ್ತು.

ಸ್ವರೂಪಾನಂದರಂತೆ ಆಶ್ರಮದ ಎಲ್ಲ ಜವಾಬ್ದಾರಿಯನ್ನು ಹೊತ್ತು, ವ್ಯವಸ್ಥಿತ ರೀತಿಯಲ್ಲಿ ಸುಸೂತ್ರವಾಗಿ ನಡೆಸಿಕೊಂಡು ಹೋಗುವಂತಹ ದಕ್ಷ ಸಂನ್ಯಾಸಿಯನ್ನು ಬೇಲೂರು ಮಠವು ಕಳುಹಿಸುವ ಸಂಭವ ಬಹಳ ಕಡಿಮೆಯೇ. ಮಠದಲ್ಲಿರುವ ಸಂನ್ಯಾಸಿಗಳ ಸಂಖ್ಯೆಯಾದರೂ ಎಷ್ಟು? ಎಂದೆಲ್ಲ ಯೋಚಿಸಿದ್ದ ಮದರ್ ಸೇವಿಯರ್, ಇನ್ನು ಅದ್ವೈತ ಆಶ್ರಮವನ್ನು ಮುಚ್ಚಿಬಿಡಬೇಕಾಗುತ್ತದೆ ಎಂದೇ ಭಾವಿಸಿದ್ದರು. ಆದರೆ ಈಗ ವಿರಜಾನಂದರು ಬಂದದ್ದರಿಂದ ಆಸೆ ಸ್ವಲ್ಪ ಚಿಗುರಿತಾದರೂ, 'ಪ್ರಬುದ್ಧ ಭಾರತ'ದ ಸಂಪಾದನೆಯ ಗುರುತರ ಕಾರ್ಯದೊಂದಿಗೆ ಆಶ್ರಮವನ್ನು ನಡೆಸುವ ಕಠಿಣ ಕಾರ್ಯವನ್ನು ನೆನೆದು ಮದರ್ ಸೇವಿಯರ್‌ಗೆ ಅಂಥ ಭರವಸೆಯೇನೂ ಮೂಡಲಿಲ್ಲ. ವಿರಜಾನಂದರು ಅವರಿಗೆ, ''ತಾಯಿ ನೀವು ಹತಾಶರಾಗಬೇಡಿ. ಸ್ವಾಮೀಜಿಯವರು ಪ್ರಾರಂಭಿಸಿದ ಕೆಲಸವೆಂದಿಗೂ ನಿಂತುಹೋಗುವುದಿಲ್ಲ. ನಾನು ಅವರ ಪತಾಕೆ ಹಾರುವಂತೆ ಮಾಡಲು ಪ್ರಾಣವನ್ನು ಪಣವಾಗಿಟ್ಟು ಪ್ರಯತ್ನಿಸುವೆ'' ಎಂದರು. ಅದಕ್ಕೆ ಮದರ್ ಒಂದು ಮ್ಲಾನ ನಗೆ ಬೀರಿ, ''ನೀನೇಕೆ ಬಂದೆ? ಇದು ನಿನಗಾಗುವ ಕೆಲಸವಲ್ಲ. ಸ್ವರೂಪನ ವ್ಯಕ್ತಿತ್ವವಾದರೋ ಅಸಾಧಾರಣವಾಗಿತ್ತು. ಹಾಗೆಯೇ ಕೆಲಸ ಕಾರ್ಯಗಳಲ್ಲಿ ಬಹು ದಕ್ಷನಾಗಿದ್ದ'' ಎಂದರು.

ವಿರಜಾನಂದರು ಅದಕ್ಕೆ, ''ಆ ಮಾತೇನೋ ಸತ್ಯವೇ. ಆದರೆ ಮಠದ ಹಿರಿಯರು ನನ್ನನ್ನು ಇಲ್ಲಿಗೆ ಕಳುಹಿಸಿದ್ದಾರೆ. ನಾನೊಬ್ಬ ಆಜ್ಞಾಧಾರಿ ಸೈನಿಕ, ಸೋಲಾದರೂ ಸರಿಯೇ, ಗೆಲುವಾದರೂ ಸರಿಯೇ — ನಾನು ಯುದ್ಧವನ್ನಂತೂ ಮಾಡಲೇಬೇಕಾಗಿದೆ'' ಎಂದರು. ಮಿಸೆಸ್ ಸೇವಿಯರ್‌ರವರ ಕರ್ತವ್ಯನಿಷ್ಠ ದೃಢ ಆಂಗ್ಲ ಮನಸ್ಸೂ ಕೂಡ ಈ ಉತ್ತರದಿಂದ ಚಕಿತಗೊಂಡಿತು.

ಕೆಲವು ದಿನಗಳಲ್ಲೇ ಸ್ವಾಮೀಜಿಯವರ ಪ್ರಿಯ ಶಿಷ್ಯರಲ್ಲೊಬ್ಬರಾದ ಸ್ವಾಮಿ ನಿರ್ಭಯಾನಂದರು (ಕಾನಾಯ್) ಮಾಯಾವತಿಗೆ ಬಂದರು. ಅವರನ್ನು ಶಾರದಾನಂದರು ಅಲ್ಲಿಗೆ ಕಾರ್ಯ ನಿರ್ವಾಹಕರನ್ನಾಗಿ ಕಳುಹಿಸಿದ್ದರು. ಅಲ್ಲದೆ, ತಾವು ಶೀಘ್ರವಾಗಿಯೇ ಅಲ್ಲಿಗೆ ಬಂದು ಎಲ್ಲ ವ್ಯವಸ್ಥೆ ಮಾಡುವುದಾಗಿಯೂ ವಿರಜಾನಂದರು ಅಂಜುವ ಆವಶ್ಯಕತೆಯೇನೂ ಇಲ್ಲವೆಂದೂ ತಿಳಿಸಿದ್ದರು.

ವಿರಜಾನಂದರೇನೂ ಅಂಜಿರಲಿಲ್ಲ ; ಅದಕ್ಕೆ ಸಮಯವಾದರೂ ಎಲ್ಲಿತ್ತು? ಜುಲೈ ತಿಂಗಳ 'ಪ್ರಬುದ್ಧ ಭಾರತ'ದ ಪ್ರಕಟನೆಯ ಕಾರ್ಯ ಮುಗಿದಿತ್ತಾದರೂ ಆಗಸ್ಟ್ ಪ್ರತಿಗಾಗಿ ಪ್ರೆಸ್ ಕಾಯುತ್ತಿತ್ತು. ಲೇಖನಗಳ ಸಂಗ್ರಹ ಮತ್ತು ಸಂಪಾದನೆಯ ಕಾರ್ಯವನ್ನು ಮುಗಿಸಿ, ಅದರ ಕರಡುಪ್ರತಿಯನ್ನು ಶೀಘ್ರವಾಗಿ ಮುದ್ರಿಸುವ ಅಗತ್ಯವಿತ್ತು. ವಿರಜಾನಂದರು ಈಗ ಕಾನಾಯಿಯ ಸಹಕಾರದೊಂದಿಗೆ ಆ ಕೆಲಸಕ್ಕಿಳಿದರು.

ಸ್ವಾಮಿ ಶಾರದಾನಂದರು ಮಾಯಾವತಿ ತಲುಪಿ ಮದರ್‌ಗೆ ಆಶ್ವಾಸನೆ ನೀಡುತ್ತಾ, ''ಸ್ವಾಮೀಜಿಯವರು ಸ್ಥಾಪಿಸಿದ ಈ ಆಶ್ರಮವು ಭಗವದಿಚ್ಛೆಯಿಂದ ಖಂಡಿತವಾಗಿ ನಡೆದುಕೊಂಡು ಹೋಗುವುದು. ಒಬ್ಬ ಸೈನಿಕ ಬಿದ್ದರೆ, ಮತ್ತೊಬ್ಬ ಸೈನಿಕ ಅವನ ಕೈಯಿಂದ ಧ್ವಜವನ್ನೆತ್ತಿಕೊಂಡು ಯುದ್ಧವನ್ನು ಮುಂದುವರಿಸುತ್ತಾನೆ; ಯುದ್ಧ ನಿಲ್ಲುವುದಿಲ್ಲ. ಆದ್ದರಿಂದ ಚಿಂತೆಗೆ ಕಾರಣವೆಲ್ಲಿ?'' ಎಂದರು. ಅವರು ವಿರಜಾನಂದರನ್ನು ಅದ್ವೈತ ಆಶ್ರಮದ ಅಧ್ಯಕ್ಷರನ್ನಾಗಿ ಮಾಡಿ, ತಾವೆಲ್ಲರೂ ಅವರ ಬೆಂಬಲಕ್ಕಿರುವುದಾಗಿಯೂ, ಕೆಲಸದಲ್ಲಿ ಯಾವ ರೀತಿಯ ಕಷ್ಟ ಬಂದರೂ ಸರ್ವಪ್ರಯತ್ನದಿಂದ ಅದನ್ನು ದೂರಗೊಳಿಸುವುದಾಗಿಯೂ ತಿಳಿಸಿದರು. ವಿರಜಾನಂದರ ಬೆನ್ನುತಟ್ಟಿ ಪ್ರೋತ್ಸಾಹಿಸುತ್ತ, ''ನೀನು ಭಯಪಡಬೇಡ, ನಾನು ಪ್ರತಿ ತಿಂಗಳೂ 'ಪ್ರಬುದ್ಧ ಭಾರತ'ಕ್ಕೆ ಲೇಖನಗಳನ್ನು ಬರೆದು ಕಳುಹಿಸಿ ನನ್ನ ಕೈಲಾದಷ್ಟು ಸಹಾಯ ಮಾಡುವೆ'' ಎಂದು ಆಶ್ವಾಸನೆ ನೀಡಿದರು.

(ಮುಂದುವರಿಯುವುದು)

ದಿನವೂ ಮಧುಪಾನಕ್ಕಾಗಿ ಬರುತ್ತಿತ್ತು. ಆದರೆ ಇದ್ದಕ್ಕಿದ್ದಂತೆ ಬಿದ್ದ ಹಿಮದ ಮಳೆಯಿಂದ ಹೂವು ಕಮರಿಹೋಯಿತು. ಅಂಬ, ದೇವಿ, ಜಗನ್ಮಾತೆ! ನಿನ್ನ ಆ ಅಪೂರ್ವ ಹೂವಿನ ಮಹಿಮೆಯನ್ನು ಮಾನವರಾರೂ ಗುರುತಿಸರೆಂದು ಬಗೆದು, ಅದನ್ನು ನಿನ್ನ ಕೂದಲಲ್ಲಿ ಮುಡಿದು, ಅದರ ಗೌರವವನ್ನು ವರ್ಧಿಸಿದೆಯೇನು?''

ಶ್ರೀಮಾತೆಯವರ ಪತ್ರಗಳು – ೧೦

ಅನುವಾದ: ಪ್ರವ್ರಾಜಿಕಾ ಧರ್ಮಪ್ರಾಣಾ

ಪತ್ರ – ೪೬

೧.೩.೧೯೦೯

ತಾಯಿ, ದೇವಮಾತಾ — ನೀನು ನನ್ನ ಮಗಳು,

ನಿನಗೆ ಶ್ರೀ ಶ್ರೀ ಠಾಕೂರರಲ್ಲಿ ಇಷ್ಟೊಂದು ದೃಢ ಭಕ್ತಿಯುಂಟಾಗಿದೆ ಎಂಬುದನ್ನು ಕೇಳಿ ನನಗೆ ತುಂಬಾ ಸಂತೋಷವಾಯಿತು. ನಾನು ನಿನಗೆ ಆಶೀರ್ವಾದ ಮಾಡುತ್ತಿದ್ದೇನೆ — ನಿನಗೆ ಅಪಾರ ಭಕ್ತಿಯುಂಟಾಗಲಿ ಎಂದು — ಇದುವೇ ನನ್ನ ಪ್ರಾರ್ಥನೆ. ನೀನು ದೀರ್ಘಾಯುವಾಗು ಮತ್ತು ನನ್ನ ಮಕ್ಕಳೊಂದಿಗೆ ಸದಾ ಆನಂದದಲ್ಲಿ ಮಗ್ನಳಾಗಿರು. ಮತ್ತೆ ತಾಯಿ, ೨೦ ರೂಪಾಯಿ ನಾನು ಸ್ವೀಕರಿಸಿರುವೆ.

ಪರಮಾನಂದನಿಗೆ ನನ್ನ ಆಶೀರ್ವಾದ ತಿಳಿಸು. ನೀನು ಅವನನ್ನು ನಿನ್ನ ಮಗನಂತೆ ಕಂಡು, ಮಗನಂತೆ ಪಾಲಿಸುತ್ತಿರುವೆ ಎಂದು ಕೇಳಿ ನಾನು ಸಂತುಷ್ಟಳಾದೆ. ನಾನು ಚೆನ್ನಾಗಿದ್ದೇನೆ.

ಇತಿ ನಿನ್ನ ಸ್ನೇಹಮಯಿ ಮಾತಾದೇವಿ

ಪತ್ರ ಪಡೆದವರ ಹೆಸರು
ಸೋದರಿ ದೇವಮಾತಾ
(ಅಮೆರಿಕಾದ ನಾಗರಿಕಳಾದ ಲೋರಾ ಗ್ಲೇನ್)

ಪತ್ರ – ೪೭

ಓಂ ರಾಮಕೃಷ್ಣ ಜಯತಿ

೧.೩.೧೯೦೯

ಪರಮ ಶುಭಾಶೀರ್ವಾದವನ್ನು ಮೊದಲು ತಿಳಿಸಿ,

ಆಮೇಲೆ ವಿಶೇಷವೇನೆಂದರೆ

ಪ್ರೀತಿಯ ಮಗೂ, ಇಂದು ಸರಿಯಾದ ಸಮಯಕ್ಕೆ ನಿನ್ನ ಪತ್ರದ ಜೊತೆ ೨೦ ರೂಪಾಯಿ ಮನಿಯಾರ್ಡರ್ ನಾನು ಸ್ವೀಕರಿಸಿದೆ. ಮತ್ತು ರಾಖಾಲ್ ಅಲ್ಲಿಯೇ ಇದ್ದಾನೆಂದು ಕೇಳಿ ತುಂಬಾ ಸಮಾಧಾನವಾಯಿತು. ರಾಖಾಲ್‌ನ ಜೊತೆಯಲ್ಲಿ ನೀವು ಆನಂದಿಸಿರಿ. ನನ್ನ ರಾಖಾಲ್ ದೀರ್ಘಾಯುವಾಗಿರಲಿ, ಅಲ್ಲದೆ ನೀವೆಲ್ಲರೂ ದೀರ್ಘಾಯುವಾಗಿ ಇರಿ. ಇದರಿಂದಲೇ ನನಗೆ ಆನಂದ. ನೀವೆಲ್ಲರೂ ನನ್ನ ಆಶೀರ್ವಾದಗಳನ್ನು ಸ್ವೀಕರಿಸಿ. ನಾನು ಒಂದು ರೀತಿಯಲ್ಲಿ ಸುಮಾರಾಗಿ ಚೆನ್ನಾಗಿದ್ದೇನೆ. ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆ.

ಇತಿ ೧೩೧೬ನೇ ವರ್ಷ
೧೫ನೇ ದಿನ, ಫಾಲ್ಗುಣ, ಶನಿವಾರ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಸ್ವಾಮಿ ರಾಮಕೃಷ್ಣಾನಂದ
ಮದ್ರಾಸ್

ಪತ್ರ – ೪೮

ಶ್ರೀ ಶ್ರೀ ದುರ್ಗೆಯ ಕೃಪೆ

೨೭.೩.೧೯೦೯

ಪ್ರೀತಿಯ ಮಗೂ,

ನೀನು ಕಳುಹಿಸಿರುವ ಒಂದು ಜೋಡಿ ಸೀರೆ ಸಿಕ್ಕಿತು. ಅದನ್ನು ನಾನು ಉಪಯೋಗಿಸುವೆನು. ಠಾಕೂರರು ನಿನಗೆ ಮಂಗಳವನ್ನುಂಟುಮಾಡಲಿ. ಶರತ್ ಮಹಾರಾಜ್, ಗೋಲಾಪ್ ತಾಯಿ, ಜೋಗೇನ್ ಇಲ್ಲಿಗೆ ಬಂದಿದ್ದಾರೆ ಮತ್ತು ಚೆನ್ನಾಗಿದ್ದಾರೆ. ನಿನ್ನ ಯೋಗಕ್ಷೇಮದ ಬಗ್ಗೆ ಬರೆಯಬೇಕು.

ಇತಿ ೧೨, ಚೈತ್ರ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಪರಮ ಪ್ರೀತಿಯ
ಶ್ರೀಮಾನ್ ನಿರ್ಮಲಚಂದ್ರ ದಾಸ್ ಘೋಷ್
ಪ್ರೀತಿಯ ಮಗೂ, ಸುರಕ್ಷಿತವಾಗಿರು.
ಕಲ್ಕತ್ತಾ ಗ್ರೇ ಸ್ಟ್ರೀಟ್, ನಂ ೧೦೭,
ಶ್ರೀಕುಮಾರ್ ಕುಮಾರ್ ಕೃಷ್ಣ
ಬಹದೂರ್ ಅವರ ಮನೆ, Cal

ಪತ್ರ – ೪೯

UDBODHAN OFFICE
12,13 Gopal Chandra Neogi's Lane
Bagh-bazar P.O Calcatta

೨ನೇ ಆಶ್ವಯುಜ, ೧೩೧೬, ೧೯. ೯. ೧೯೦೯

ಶುಭವಾಗಲಿ,

ಮಗೂ, ನಿನ್ನ ಪತ್ರ ಸರಿಯಾದ ಸಮಯಕ್ಕೆ ಸಿಕ್ಕಿತು. ನೀನು ಮೊದಲಿಗಿಂತಲೂ ಚೆನ್ನಾಗಿರುವೆ ಎಂದು ಕೇಳಿ ಸಮಾಧಾನವಾಯಿತು. ಮಗು, ಜಯಲಕ್ಷ್ಮಿಯ ವಿಳಾಸವನ್ನು ನನಗೆ ತಿಳಿಸು. ಅವಳು ಒಂದು ಪತ್ರ ಬರೆದಿದ್ದಾಳೆ. ವಿಳಾಸ ಇಲ್ಲದ್ದರಿಂದ ಅದಕ್ಕೆ ಉತ್ತರ ಹಾಗೂ ಸಾಮಾನುಗಳನ್ನು ಕಳುಹಿಸಲು ಆಗುತ್ತಿಲ್ಲ. ಇಲ್ಲಿ ಒಂದು ರೀತಿ ಎಲ್ಲವೂ ಕ್ಷೇಮ. ನನ್ನ ಆಶೀರ್ವಾದ ತೆಗೆದುಕೋ.

ಇತಿ, ನಿನ್ನ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
Swami Ramakrishnanandaji Maharaj
The Ramakrishna Mission
Mylapore, Madras

ಪತ್ರ - ೫೦

ಶ್ರೀ ಶ್ರೀ ಗುರುದೇವ
ಶ್ರೀ ಶ್ರೀ ಚರಣದಲ್ಲಿ ಭರವಸೆ

೩೦. ೯. ೧೯೦೯
ಬಾಗ್‌ಬಜಾರ್ , ಗುರುವಾರ

ಶುಭವಾಗಲಿ.

ಮಗು ಶಶಿ, ನಿನ್ನ ಪತ್ರ ಸರಿಯಾದ ಸಮಯಕ್ಕೆ ಸಿಕ್ಕಿತು. ಅದರಲ್ಲಿ ಜಯಲಕ್ಷ್ಮಿಯ ವಿಳಾಸ ಸಿಕ್ಕಿ, ಅವಳಿಗೆ ಪತ್ರ ಮೊದಲಾದವನ್ನು ಕಳುಹಿಸಿರುವೆ. ಇಂದು ಅವಳ ಇನ್ನೊಂದು ಪತ್ರ ಸಿಕ್ಕಿತು. ಅದಕ್ಕೂ ಉತ್ತರ ಕಳುಹಿಸಿದ್ದೇನೆ. ನಾನು ಕಾರ್ತಿಕ ತಿಂಗಳ ಮಧ್ಯೆ ಯಾವಾಗಲಾದರೂ ಜಯರಾಂಬಾಟಿಗೆ ಹೋಗುತ್ತೇನೆ. ಅಲ್ಲಿ ಜಯಲಕ್ಷ್ಮಿಯ ಇಂಗ್ಲಿಷ್ ಪತ್ರ ಓದಲು ಅಥವಾ ಅದರ ಉತ್ತರ ಬರೆಯಲು ಸಾಧ್ಯವಾಗುವಂತಹ ಜನರು ಯಾರೂ ಇಲ್ಲ. ಆದುದರಿಂದ ಅವಳಿಗೆ ಬರೆದು ಕಳುಹಿಸಿದ್ದೇನೆ, ನಿನ್ನ ಬಳಿ ನನ್ನ ಸಮಾಚಾರ ತಿಳಿದುಕೊಳ್ಳಲೆಂದು. ನೀನು ಬಂಗಾಳಿಯಲ್ಲಿ ನನ್ನಿಂದ ಸಮಾಚಾರ ತೆಗೆದುಕೊಳ್ಳಬಹುದು. ಅದರ ಅನುವಾದವನ್ನು ಮಾಡಿ ಕೊಡು. ನನ್ನ ಶರೀರ ಪರವಾಗಿಲ್ಲ. ನೀನು ಚೆನ್ನಾಗಿರುವೆ ಎಂದು ಆಶಿಸುತ್ತೇನೆ. ನನ್ನ ಆಶೀರ್ವಾದವನ್ನು ತೆಗೆದುಕೋ.

ಇತಿ, ನಿನ್ನ ತಾಯಿ.

ಪತ್ರ ಪಡೆದವರ ಹೆಸರು ಮತ್ತು ವಿಳಾಸ
The Swami Ramakrishnananda
The Ramakrishna Mission
Mylapore, Madras

ಪತ್ರ - ೫೧

ಶ್ರೀ ಶ್ರೀ ಗುರುದೇವ
ಶ್ರೀ ಚರಣದಲ್ಲಿ ಭರವಸೆ

೧೦. ೧೨. ೧೯೦೯
ಜಯರಾಂಬಾಟಿ, ೨೪ ಅಗ್ರಹಾಯಣ

ಮಂಗಳವಾಗಲಿ.

ಮಗೂ, ನಿನ್ನ ಪತ್ರದಲ್ಲಿ ನೀನು ನಿರ್ವಿಘ್ನವಾಗಿ ಅಲ್ಲಿಗೆ ತಲುಪಿದೆ ಎಂದು ತಿಳಿದು ಸಮಾಧಾನವಾಯಿತು. ನನ್ನ ಕಾಲಿನ ವಾತ ೧೫ ಆಣೆ ಭಾಗದಷ್ಟು ಕಡಿಮೆಯಾಗಿದೆ. ಪ್ರತಿದಿನ ಶಾಖ ಕೊಡುವುದು, ತಿಕ್ಕುವುದು, ಬ್ಯಾಂಡೇಜ್ ಕಟ್ಟುವುದು ಇತ್ಯಾದಿ ನಡೆಯುತ್ತಿದೆ. ಇಲ್ಲಿ ಇನ್ನೆಲ್ಲವೂ ಕ್ಷೇಮ. ನನ್ನ ಆಶೀರ್ವಾದ ತೆಗೆದುಕೋ. ಜಯಲಕ್ಷ್ಮಿಯ ಪತ್ರ ಬಂದರೆ ಅದನ್ನು ಬಂಗಾಳಿಗೆ ಅನುವಾದ ಮಾಡಿ ಇಲ್ಲಿಗೆ ಕಳುಹಿಸು. ಮತ್ತು ಆಗಾಗ ನಿಮ್ಮೆಲ್ಲರ ಸಮಾಚಾರ ತಿಳಿಸಿ ನೆಮ್ಮದಿಯನ್ನು ಕೊಡಬೇಕು.

ಇತಿ ನಿಮ್ಮೆಲ್ಲರ ತಾಯಿ.

ಪತ್ರ ಪಡೆದವರ ಹೆಸರು ಮತ್ತು ವಿಳಾಸ
The Ramakrishnananda
The Ramakrishna Mission
Mylapore, Madras

ಪತ್ರ - ೫೨

ಓಂ ರಾಮಕೃಷ್ಣ ಜಯತಿ

೧೮. ೧. ೧೯೧೦
೧೩೧೬ನೇ ವರ್ಷ, ೫ನೇ ಮಾಘ, ಮಂಗಳವಾರ
ರಾತ್ರಿ ಬರೆದೆ

ಪರಮ ಶುಭಾಶೀರ್ವಾದವನ್ನು ಮೊದಲು ತಿಳಿಸಿ,

ವಿಶೇಷವೇನೆಂದರೆ,

ಮಗೂ, ನಿನ್ನ ಪತ್ರ ಲಭಿಸಿ ಅನೇಕ ದಿನಗಳಾದವು.ಆದರೆ ಕೆಲಸದ ನಿಮಿತ್ತ ಉತ್ತರ ಬರೆಯಲಾಗಲಿಲ್ಲ. ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ನನಗೆ ಕಾಲಲ್ಲಿ ನೋವು ಬಂದಿತ್ತು. ಸದ್ಯ ತುಸು ಚೆನ್ನಾಗಿದ್ದೇನೆ. ನನಗಾಗಿ ನೀವು ಚಿಂತೆ ಮಾಡುವುದು ಬೇಡ. ನೀನು ನನ್ನ ಆಶೀರ್ವಾದ ತೆಗೆದುಕೋ. ಹಾಗೂ ರುದ್ರ ಚೈತನ್ಯನಿಗೆ ಹಾಗೂ ಬ್ರಹ್ಮಚಾರಿಗೆ ನನ್ನ ಆಶೀರ್ವಾದ ತಿಳಿಸು. ವಾಸುದೇವ ರಾವ್ ಎಂಬ ಹೆಸರಿನ ನನ್ನ ಒಬ್ಬ ಭಕ್ತ, ಅವನು ನನಗೆ ಎರಡು ಸಲ ೨೦ ರೂಪಾಯಿ ಕಳುಹಿಸಿದ್ದನು. ಇನ್ನೊಂದು ಸಲ ೩೦ ರೂಪಾಯಿ ಕಳುಹಿಸಿದ್ದನು. ಎಲ್ಲ ಹಣವೂ ಸಿಕ್ಕಿದೆ. ಮತ್ತು ಆ ಹಣವನ್ನು ಠಾಕೂರರ ಸೇವೆಗಾಗಿ ಖರ್ಚು ಮಾಡಿದ್ದೇನೆ. ಅವನಿಗೆ ನನ್ನ ಆಶೀರ್ವಾದ ತಿಳಿಸಬೇಕು ಹಾಗೂ ಅದನ್ನು ಭಕ್ತಿಪೂರ್ವಕ ಸ್ವೀಕರಿಸಲು ಹೇಳಬೇಕು. ಮತ್ತೆ ಶಶಿಗೆ ನನ್ನ ಆಶೀರ್ವಾದ ತಿಳಿಸು. ಅಲ್ಲದೆ ನಿಮ್ಮೆಲ್ಲರ ಯೋಗ ಕ್ಷೇಮದ ಸಮಾಚಾರ ನೀಡಿ, ನನ್ನನ್ನು ಆನಂದದಿಂದಿರಿಸಬೇಕು. ನಿಮ್ಮೆಲ್ಲರ ಸುಸ್ಥಿತಿಯ ಸಮಾಚಾರ ನೀಡಿದರೆ ನಾನು ಎಷ್ಟೊಂದು ಆನಂದದಿಂದ ಇರುತ್ತೇನೆ ಎಂದರೆ ಅದನ್ನು ಹೇಗೆ ಬರೆದು ತಿಳಿಸಲಿ! ಪ್ರೀತಿಯ ಮಗು, ಮಧ್ಯೆ ಮಧ್ಯೆ ನನಗೆ ಒಂದು ಪತ್ರ ಬರೆದು ಕಳುಹಿಸಬೇಕು. ಹಾಗಾದರೆ ನಾನು ತುಂಬಾ ಆನಂದದಿಂದ ಇರುತ್ತೇನೆ. ಇತಿ, ಇಲ್ಲಿ ಎಲ್ಲವೂ ಕ್ಷೇಮ. ನಿನ್ನ ಮಂಗಳಕ್ಕಾಗಿ ಠಾಕೂರರಲ್ಲಿ ನಿತ್ಯವೂ ಪ್ರಾರ್ಥಿಸುತ್ತಿದ್ದೇನೆ. ಕೊಲ್ಕತ್ತದಲ್ಲಿ ಎಲ್ಲರೂ ಚೆನ್ನಾಗಿದ್ದಾರೆ.

ನಿಮ್ಮೆಲ್ಲರ ಶುಭಾಕಾಂಕ್ಷಿ, ಮಾತೃದೇವಿ.

ಪತ್ರ ಪಡೆದವರ ಹೆಸರು ಮತ್ತು ವಿಳಾಸ
Br. Surendra Vijaya
C/o H.H.The Swami Ramakrishnanandaji
Sri Ramakrishna Mission,
Mylapore,Madras

ವಿವರಣೆ: ಸುರೇಂದ್ರ, ವಿಜಯ ಇವರು ಸ್ವಾಮಿ ರಾಮಕೃಷ್ಣಾನಂದರ ಜೊತೆಯಲ್ಲಿ ಉದ್ಬೋಧನದಲ್ಲಿದ್ದ ಶ್ರೀಮಾತೆಯವರ ಬಳಿಹೋಗಿ ಸಂನ್ಯಾಸವನ್ನು ನೀಡಲು ಪ್ರಾರ್ಥಿಸಿದ್ದರು. ಆಮೇಲೆ ಅವರು ಶ್ರೀರಾಮಕೃಷ್ಣರ ನೇರ ಶಿಷ್ಯರಿಂದಲೇ ಸಂನ್ಯಾಸ ಪಡೆದರು. ಅವರು ಮದ್ರಾಸ್ ಮಠದಲ್ಲಿ ಸ್ವಾಮಿ ರಾಮಕೃಷ್ಣಾನಂದರ ಸಹಾಯಕರಾಗಿ ಅನೇಕ ದಿನಗಳ ಕಾಲ ಕೆಲಸ ಮಾಡಿದ್ದರು.

ಪತ್ರ ೫೩

ಓಂ ರಾಮಕೃಷ್ಣ ಜಯತಿ

೬.೨.೧೯೧೦

ಪರಮ ಶುಭಾಶೀರ್ವಾದವನ್ನು ಮೊದಲು ತಿಳಿಸಿ,

ವಿಶೇಷವೇನೆಂದರೆ,

ನಿನ್ನ ಪತ್ರ ನನಗೆ ಸಿಕ್ಕಿ ಬಹಳ ಆನಂದವಾಯಿತು. ನಿನಗೆ ನನ್ನ ಆಶೀರ್ವಾದ. ಮಗೂ, ನೀನು ಜಯಲಕ್ಷ್ಮಿಗೆ ಪತ್ರ ಬರೆದಿರುವೆ, ಇದನ್ನು ಕೇಳಿ ತುಂಬಾ ಸಮಾಧಾನವಾಯಿತು. ಆಮೇಲೆ ರಾಖಾಲ್ (ಮಹಾರಾಜ್) ಕೊಠಾರ್‌ನಲ್ಲಿ ಇದ್ದಾರೆ (ಇದ್ದಾನೆ) ಮತ್ತು ಶಾರೀರಿಕವಾಗಿ ಸುಸ್ಥಿಯಲ್ಲಿ ಇದ್ದಾರೆ (ಇದ್ದಾನೆ) – ಇದನ್ನು ಕೇಳಿ ನಾನು ಸಂತುಷ್ಟಳಾದೆ. ಅವನಿಗೆ ನನ್ನ ಆಶೀರ್ವಾದವನ್ನು ತಿಳಿಸು. ಸುರೇಂದ್ರ, ವಿಜಯ ಮುಂತಾದವರು ಕಾಶೀಧಾಮಕ್ಕೆ ಹೋಗಿದ್ದಾರೆ ಮತ್ತೆ ಅವರ (ಅವನ) ತಾಯಿ ಹೇಗಿದ್ದಾರೆ? ಅವರಿಬ್ಬರಿಗೂ ನನ್ನ ಆಶೀರ್ವಾದಗಳನ್ನು ತಿಳಿಸು. ತುಳಸಿ, ಜಿತೇನ್, ಚೆನ್ನಾಗಿದ್ದಾರೆಂದು ಕೇಳಿ ಸಮಾಧಾನವಾಯಿತು. ಅವರಿಗೆ ನನ್ನ ಆಶೀರ್ವಾದಗಳನ್ನು ತಿಳಿಸು. ದೇವಮಾತಾಳಿಗೆ ನನ್ನ ಆಶೀರ್ವಾದ ತಿಳಿಸು.ರುದ್ರಚೈತನ್ಯನಿಗೂ ನನ್ನ ಆಶೀರ್ವಾದ (ಹೇಳು). ನಾನು ಸದ್ಯ ಚೆನ್ನಾಗಿದ್ದೇನೆ. ಆದರೆ ಎಡಗಾಲಿನಲ್ಲಿ ೭–೮ ದಿನಗಳಿಂದ ಒಂದು ನೋವು ಹಿಡಿದುಕೊಂಡಿದೆ. ಅದಕ್ಕಾಗಿ ಚಿಂತಿಸಬೇಡ. ಉಳಿದಂತೆ ಸದ್ಯ ಎಲ್ಲವೂ ಕ್ಷೇಮ. ನಿಮ್ಮೆಲ್ಲರ ಯೋಗಕ್ಷೇಮ ತಿಳಿಸಿಕ್ಕೆ ಮಧ್ಯೆ ಮಧ್ಯೆ ನನಗೆ ಬರೆ. ಪ್ರಕಾಶನನ್ನು ನಿಮ್ಮ ಜೊತೆಯಲ್ಲಿರಿಸು. ಕಾರಣ, ಅವನು ಸಂನ್ಯಾಸಿಯಾಗಿದ್ದಾನೆ — ಅದಕ್ಕಾಗಿ ಹೇಳುತ್ತಿದ್ದೇನೆ. ನಿಮ್ಮೆಲ್ಲರ ಜೊತೆ ಇದ್ದರೆ ಅವನಿಗೆ ಜ್ಞಾನವುಂಟಾಗುವುದು. ನಿನಗೆ ಠಾಕೂರರು ರಕ್ಷಣೆ ಮಾಡುವರು.

ಇತಿ ೧೩೧೬ನೇ ವರ್ಷ, ಮಾಘ ೨೪ನೇ ದಿನ, ರವಿವಾರ

ಕಲ್ಕತ್ತಾದಲ್ಲಿ ಉಳಿದ ಮಕ್ಕಳೆಲ್ಲರೂ ಚೆನ್ನಾಗಿದ್ದಾರೆ.

ನಿನ್ನ ಶುಭಮಯಿ ಮಾತಾ

ಪತ್ರ ಪಡೆದವರ ಹೆಸರು ಮತ್ತು ವಿಳಾಸ

The Ramakrishnanandaji
Sri Ramakrishna Mission
Mylapore, Madras

ಪತ್ರ ೫೪

ಓಂ ರಾಮಕೃಷ್ಣ ಜಯತಿ

೧೪.೨.೧೯೧೦

ಪ್ರೀತಿಯ ಮಗೂ,

ನಿನ್ನ ಪತ್ರ ತಲುಪಿ, ನಾನು ಇನ್ನಿಲ್ಲದಷ್ಟು ಸಮಾಧಾನಪಟ್ಟೆ. ಸ್ವಾಮಿಜಿಯ ಉತ್ಸವಕ್ಕೆ ಸಂಕೀರ್ತನೆ (ನಡೆದಿತ್ತು). ದರಿದ್ರ ಜನರಿಗೆ ನೀನು ಬೇಕಾದಷ್ಟು ತಿನ್ನಿಸಿರುವೆ... ಇದನ್ನು ಕೇಳಿ ನಾನು ತುಂಬಾ ಸಂತುಷ್ಟಳಾದೆ, ಹಾಗೂ ನಿಮಗೆಲ್ಲರಿಗೂ ಆಶೀರ್ವಾದ ಮಾಡಿದೆ. ಸುರೇಂದ್ರ, ವಿಜಯ ಕಾಶೀಧಾಮದಲ್ಲಿ ಇದ್ದಾರೆಂದು ಕೇಳಿದೆ. ಅವನ ತಾಯಿಯ ಆರೋಗ್ಯ ಈಗಲೂ ವಾಸಿಯಾಗಿಲ್ಲ ಅನ್ನಿಸುತ್ತಿದೆ. ಅವರಿಗೆ ನನ್ನ ಆಶೀರ್ವಾದ ತಿಳಿಸು. ಮತ್ತು ರುದ್ರಚೈತನ್ಯನಿಗೂ ತಿಳಿಸು. ಕಲ್ಕತ್ತಾದ ಮಕ್ಕಳೆಲ್ಲರೂ ಚೆನ್ನಾಗಿದ್ದಾರೆ. ಇಂದು ನನಗೆ ಸಮಾಚಾರ ಸಿಕ್ಕಿತು.

ಇತಿ ೧೩೧೬ನೇ ವರ್ಷ, ಫಾಲ್ಗುಣ ೨
ಸೋಮವಾರ

ದೇವಮಾತಾಳಿಗೆ ನನ್ನ ಆಶೀರ್ವಾದವನ್ನು ತಿಳಿಸು.

ಪತ್ರ ಪಡೆದವರ ಹೆಸರು ಮತ್ತು ವಿಳಾಸ

The Swami Ramakrishnananda
Sri Ramakrishna Mission
Mylapore, Madras

ಪತ್ರ ೫೫

ಓಂ ರಾಮಕೃಷ್ಣರ ಕೃಪೆ

೨೪.೨.೧೯೧೦

ಶುಭಾಶೀರ್ವಾದವನ್ನು ಮೊದಲು ತಿಳಿಸಿ,

ವಿಶೇಷವೇನೆಂದರೆ ,

ಪ್ರೀತಿಯ ಮಗೂ, ನಿನ್ನ ಪತ್ರ ತಲುಪಿ ನಾನು ತುಂಬಾ ಆನಂದಿತಳಾದೆ. ನಾನು ಹುಷಾರಾಗಿದ್ದೇನೆ. ಮೊಣಕಾಲಿನಲ್ಲಿ ಮಾತ್ರ ಸ್ವಲ್ಪ ನೋವು ಇದೆ. ಅದರಿಂದ ಅಂತಹ ಕಷ್ಟ ಏನೂ ಇಲ್ಲ. ಆಶು ಮಹಾರಾಜ್ ಒಂದು ದಿನದ ನಂತರ ಕಲ್ಕತ್ತಾಕ್ಕೆ ಹೋಗಿದ್ದಾನೆ ಹಾಗೂ ಶಾರೀರಿಕವಾಗಿ ಚೆನ್ನಾಗಿದ್ದಾನೆ. ದೇವಮಾತಾಳ ಪತ್ರ ಸಿಕ್ಕಿತು ಮತ್ತು ಎಲ್ಲವನ್ನೂ ತಿಳಿದುಕೊಂಡೆ. ನೀನು ಅವಳಿಗೆ ನನ್ನ ಆಶೀರ್ವಾದ ತಿಳಿಸು. ಮಗನೆ, ಈಗ ತಯಾರಾದ ಗೃಹದಲ್ಲಿ ಶ್ರೀಠಾಕೂರರ ಫೋಟೋವನ್ನು ಪ್ರತಿಷ್ಠಾಪಿಸಿ, ನಿತ್ಯ ಧ್ಯಾನ ಹಾಗೂ ಪೂಜಾದಿಗಳನ್ನು ಮಾಡಬೇಕು. ನೀವು ಗೃಹವನ್ನು ನಿರ್ಮಿಸಿದ್ದರಿಂದ ನನಗೆ ಸಮಾಧಾನವಾಯಿತು. ಪರಮಾನಂದ ಸ್ವಾಮಿಗೆ ನನ್ನ ಆಶೀರ್ವಾದ ತಿಳಿಸು. ನೀನೂ ಭಕ್ತಿಪೂರ್ವಕ ಸ್ವೀಕರಿಸು. ಮತ್ತು ನನ್ನ ಚಿಕ್ಕ ಮಗಳು ದೇವಮಾತಾಳಿಗೆ ನನ್ನ ಆಶೀರ್ವಾದ ಸ್ವೀಕರಿಸಲು ಹೇಳು. ಮತ್ತು ರುದ್ರಚೈತನ್ಯನಿಗೆ ನನ್ನ ಆಶೀರ್ವಾದ ತಿಳಿಸು. ಹಾಗೂ ಉಳಿದವರಿಗೆಲ್ಲ ತಿಳಿಸು. ಇತಿ,

ಇಲ್ಲಿ ಎಲ್ಲವೂ ಕ್ಷೇಮ. ಅಲ್ಲಿಯ ಯೋಗ ಕ್ಷೇಮವನ್ನು ಬರೆದು ಸಮಾಧಾನವನ್ನು ಕೊಡು.

ವರ್ಷ ೧೩೧೬, ಫಾಲ್ಗುಣ ೧೨ನೇ ದಿನ, ಗುರುವಾರ

ನಿನ್ನ ಮಂಗಳಮಯಿ ಮಾತೃದೇವಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ


The Swami Ramakrishnanandajee
Sri Ramakrishna Mission
Mylapore, Madras

‘Life of Sri Ramanuja’ ಗ್ರಂಥದ ಹೊಸ ಆವೃತ್ತಿ

ಈಗ ವಿಮರ್ಶೆಗೆ ತೆಗೆದುಕೊಂಡಿರುವ ‘‘Life of Sri Ramanuja’’ ಎಂಬ ಪುಸ್ತಕವನ್ನು ಚೆನ್ನೈ ರಾಮಕೃಷ್ಣ ಮಠದವರು ಪ್ರಕಟಿಸಿದ್ದಾರೆ. ಇದರ ಲೇಖಕರು ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ರಾಮಕೃಷ್ಣಾನಂದರು. ೨೦೧೭ನೆಯ ಸಂವತ್ಸರವು ಶ್ರೀರಾಮಾನುಜರ ಸಹಸ್ರಮಾನ ವರ್ಷ. ಈ ಸಂದರ್ಭದಲ್ಲಿ ಶ್ರೀರಾಮಕೃಷ್ಣ ಮಹಾಸಂಘವು, ಅದರಲ್ಲಿಯೂ ಚೆನ್ನೈ ರಾಮಕೃಷ್ಣ ಮಠವು ಶ್ರೀರಾಮಾನುಜರಿಗೆ ಅರ್ಪಿಸುತ್ತಿರುವ ಭಕ್ತಿಯ ನುಡಿನಮನ ಈ ಪುಸ್ತಕ. ಇದರ ಮೊದಲ ಆವೃತ್ತಿಯನ್ನು ೧೯೫೯ರ ಜನವರಿ ೧ರಂದು, ಶ್ರೀಮಾತೆ ಶಾರದಾದೇವಿಯವರ ಜನ್ಮದಿನೋತ್ಸವದಂದು ಪ್ರಕಟಿಸಲಾಗಿತ್ತು. ಅದು ಸ್ವಾಮಿ ರಾಮಕೃಷ್ಣಾನಂದರು ಬಂಗಾಳಿಯಲ್ಲಿ ಬರೆದ ಲೇಖನಗಳ ಇಂಗ್ಲಿಷ್ ಭಾಷಾಂತರವಾಗಿತ್ತು ಎಂಬುದನ್ನು ಓದುಗರು ನೆನಪಿಸಿಕೊಳ್ಳಬಹುದು. ಇತ್ತೀಚಿನ ೫ನೆಯ ಆವೃತ್ತಿಯನ್ನು ಓದುಗರಿಗೆ ಪರಿಚಯಿಸುವ ಮುನ್ನ ಇದರ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ತಿಳಿಯುವುದು ಸೂಕ್ತವೆನಿಸುತ್ತದೆ.

ಭಾರತದ ಧಾರ್ಮಿಕ ಮತ್ತು ತತ್ತ್ವಶಾಸ್ತ್ರದ ಪರಂಪರೆಯಲ್ಲಿ ಆಚಾರ್ಯ ರಾಮಾನುಜರು (ಕಿ.ಶ. ೧೦೧೭ – ೧೧೩೭) ಒಂದು ಪ್ರಮುಖ ಸ್ಥಾನವನ್ನು ಪಡೆದಿದ್ದಾರೆ. ಬೌದ್ಧಧರ್ಮವು ಕ್ಷೀಣವಾದ ನಂತರದಲ್ಲಿ ವೇದಪ್ರಣೀತವಾದ ಬ್ರಹ್ಮತತ್ತ್ವವನ್ನು ಪ್ರತಿಪಾದಿಸಿ ಪುನರುತ್ಥಾನಗೊಳಿಸುವ ಕೆಲಸದಲ್ಲಿ ಆಚಾರ್ಯ ರಾಮಾನುಜರ ಕೊಡುಗೆ ಮಹತ್ತರವಾದುದು. ಸ್ವಾಮಿ ವಿವೇಕಾನಂದರು ತಮ್ಮ ಉಪನ್ಯಾಸಗಳಲ್ಲಿ ಶ್ರೀ ರಾಮಾನುಜಾಚಾರ್ಯರಿಗೆ ತಮ್ಮ ಗೌರವವನ್ನು ಸೂಚಿಸಿ ಅವರ ಜೀವನವನ್ನೂ, ಅವರ ತತ್ತ್ವಸಿದ್ಧಾಂತಗಳನ್ನೂ ಚರ್ಚಿಸಿದ್ದಾರೆ. ಶ್ರೀರಾಮಕೃಷ್ಣರು ಕೇಶವಚಂದ್ರ ಸೇನನಿಗೆ ಭಾರತದ ವಿವಿಧ ಮತ, ಪಂಥಗಳ ಸಮನ್ವಯವನ್ನು ಬೋಧಿಸುವ ಸಂದರ್ಭದಲ್ಲಿ ಶ್ರೀರಾಮಾನುಜರ ತತ್ತ್ವಗಳನ್ನು ತಿಳಿಸುತ್ತಾರೆ. ಶ್ರೀರಾಮಕೃಷ್ಣರು ನರೇಂದ್ರನಿಗೆ (ಮುಂದೆ ಸ್ವಾಮಿ ವಿವೇಕಾನಂದ) ಶ್ರೀರಾಮಾನುಜರ ತತ್ತ್ವಗಳನ್ನು ಒಂದು ಉದಾಹರಣೆಯ ಮೂಲಕ ವಿವರಿಸುತ್ತಾರೆ: ಪರಬ್ರಹ್ಮವು ಪ್ರಪಂಚ ಮತ್ತು ಸಜೀವ ವಸ್ತುಗಳಿಂದ ಕೂಡಿಕೊಂಡಿದೆ. ಬ್ರಹ್ಮ, ಪ್ರಪಂಚ ಮತ್ತು ಸಜೀವ ವಸ್ತುಗಳು ಎಲ್ಲವೂ ಸೇರಿ ಒಂದೇ ಬ್ರಹ್ಮತತ್ತ್ವವಾಗಿದೆ.

ಭಗವಂತನ ಸೇವೆಗೆ ಅರ್ಪಿತವಾದ ಆಚಾರ್ಯ ರಾಮಾನುಜರ ಸಂಕ್ಷಿಪ್ತ ಜೀವನ ಚರಿತ್ರೆ ಮತ್ತು ಅವರು ಪ್ರತಿಪಾದಿಸಿದ ತತ್ತ್ವಗಳನ್ನು ಶ್ರೀರಾಮಕೃಷ್ಣರ ನೇರ ಶಿಷ್ಯರೂ, ಭಕ್ತಿಮಾರ್ಗದಲ್ಲಿ ಅಚಲವಾದ ಶ್ರದ್ಧೆ, ನಿಷ್ಠೆಯುಳ್ಳವರೂ, ಪವಿತ್ರ ಜೀವನವನ್ನು ನಡೆಸಿದವರೂ, ಆಳವಾದ ಪಾಂಡಿತ್ಯವುಳ್ಳವರೂ ಮತ್ತು ಜನಸೇವಾನಿರತರೂ ಆಗಿದ್ದ ಸ್ವಾಮಿ ರಾಮಕೃಷ್ಣಾನಂದರೇ ರಚಿಸಿರುವುದು ಅತ್ಯಂತ ಸಮಂಜಸವಾದುದು. ಸ್ವಾಮಿ ವಿವೇಕಾನಂದರ ಆಣತಿಯಂತೆ ದಕ್ಷಿಣ ಭಾರತದಲ್ಲಿ ಪ್ರಪ್ರಥಮ ರಾಮಕೃಷ್ಣ ಮಠವನ್ನು ಮದ್ರಾಸಿನಲ್ಲಿ (ಇಂದಿನ ಚೆನ್ನೈ) ಪ್ರಾರಂಭಿಸಿದ ನಂತರ ಅವರು ದಕ್ಷಿಣ ಭಾರತದ ಸಂಸ್ಕೃತಿ, ಪರಂಪರೆ ಮತ್ತು ಧಾರ್ಮಿಕ ಆಚರಣೆಗಳತ್ತ ಆಕರ್ಷಿತರಾದರು. ಸಹಜವಾಗಿ ಭಾರತೀಯ ಆಧ್ಯಾತ್ಮಿಕ ಪರಂಪರೆಯ ಮೇಲೆ ಶ್ರೀರಾಮಾನುಜಾಚಾರ್ಯರ ಪರಿಣಾಮವನ್ನು ಅವರು ಮನಗಂಡರು, ಮತ್ತು ಈ ಆಧ್ಯಾತ್ಮಿಕ ಪರಂಪರೆಯನ್ನು ಬಂಗಾಳದ ಜನರಿಗೆ ತಿಳಿಸಿಕೊಡಬೇಕೆಂದು ಆಶಿಸಿದರು. ಏಕೆಂದರೆ ಬಂಗಾಳದ ಜನರಿಗೆ ಶ್ರೀರಾಮಾನುಜರ ಬಗ್ಗೆ ಹೆಚ್ಚಾಗಿ ತಿಳಿದಿರಲಿಲ್ಲ. ಸ್ವಾಮಿ ರಾಮಕೃಷ್ಣಾನಂದರು ಬಂಗಾಳಿ ಭಾಷೆಯಲ್ಲಿ ಲೇಖನಗಳನ್ನು ಬರೆದು ಅದನ್ನು



Book: **Life of Sri Ramanuja**

Originally written in Bengali by: **Swami Ramakrishnananda**

Translated and edited by: **Swami Budhananda**

Published by: **Adhyaksha, Sri Ramakrishna Math, Mylapore, Chennai-4**

Price: **Rs. 300**

‘ಉದ್ಬೋಧನ’ ಪತ್ರಿಕೆಯಲ್ಲಿ ಫೆಬ್ರವರಿ ೧೮೯೯ರಿಂದ ಧಾರಾವಾಹಿಯಾಗಿ ಪ್ರಕಟಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ ಆಗ ‘ಉದ್ಬೋಧನ’ ಪತ್ರಿಕೆಯ ಸಂಪಾದಕರೂ, ಶ್ರೀರಾಮಕೃಷ್ಣರ ನೇರ ಶಿಷ್ಯರೂ ಆಗಿದ್ದ ಪರಮಪೂಜ್ಯ ಸ್ವಾಮಿ ಶಾರದಾನಂದಜಿಯವರು ಪುಸ್ತಕದ ಮೊದಲ ಆವೃತ್ತಿಗೆ ಮುನ್ನುಡಿ ಬರೆದರು. ಶ್ರೀರಾಮಕೃಷ್ಣರ ನೇರ ಶಿಷ್ಯರಾಗಿದ್ದ ಸ್ವಾಮಿ ಶಿವಾನಂದರ ಶಿಷ್ಯರೂ ಚೆನ್ನೈ ಮಠದ ಅಧ್ಯಕ್ಷರೂ ಆಗಿದ್ದ ಸ್ವಾಮಿ ತಪಸ್ಯಾನಂದರು ಈ ಪುಸ್ತಕಕ್ಕೆ ಪೂರಕವಾಗಿರುವ, ಶ್ರೀರಾಮಾನುಜರನ್ನು

ಕುರಿತ ಇನ್ನೊಂದು ಪುಸ್ತಕವನ್ನು ರಚಿಸಿದರು. 'Bhakti schools of Vedanta' (ವೇದಾಂತದ ಭಕ್ತಿಪಂಥಗಳು) ಎಂಬ ಈ ಪುಸ್ತಕವೂ ಚೆನ್ನೈ ರಾಮಕೃಷ್ಣ ಮಠದಿಂದಲೇ ಪ್ರಕಟವಾಯಿತು. ಶ್ರೀರಾಮಾನುಜರ ಜೀವನಚರಿತ್ರೆಗೆ ಇದು ಒಂದು ಅನುಬಂಧ ಪುಸ್ತಕದಂತಿದೆ. ಇದರಲ್ಲಿ ಆಚಾರ್ಯರಾದ ರಾಮಾನುಜ, ನಿಂಬಾರ್ಕ, ಮಧ್ವ, ವಲ್ಲಭ ಮತ್ತು ಚೈತನ್ಯರ ಭಕ್ತಿಪಂಥಗಳನ್ನು ವಿವರಿಸಲಾಗಿದೆ. ಅವುಗಳ ವಿಮರ್ಶೆಯನ್ನು ಈ ಲೇಖನದಲ್ಲಿ ತೆಗೆದುಕೊಳ್ಳುವುದಿಲ್ಲ.

'ಉದ್ಬೋಧನ'ದಲ್ಲಿ ಪ್ರಕಟವಾದ ಬಂಗಾಳಿ ಲೇಖನಗಳ ಇಂಗ್ಲಿಷ್ ಭಾಷಾಂತರಗಳನ್ನು ಚೆನ್ನೈ ಮಠದ ಇಂಗ್ಲಿಷ್ ಪತ್ರಿಕೆ 'ವೇದಾಂತ ಕೇಸರಿ'ಯಲ್ಲಿ ೧೯೪೪ರಿಂದ ಏಪ್ರಿಲ್ ೧೯೫೪ರ ವರೆಗೆ ಪ್ರಕಟಿಸಲಾಯಿತು. ಈ ಅನುವಾದಗಳನ್ನು ಮಾಡಿದವರು ಶ್ರೀರಾಮಕೃಷ್ಣ ಮಹಾಸಂಘದ ಹಿರಿಯ ಯತಿಗಳೂ, ವಿದ್ವಾಂಸರೂ ಆಗಿದ್ದ ಸ್ವಾಮಿ ಬುಧಾನಂದರು. ಈ ಅನುವಾದಿತ ಲೇಖನಗಳ ಹಸ್ತಪ್ರತಿಗಳನ್ನು ಶ್ರೀವೈಷ್ಣವ ಮತದ ಪರಂಪರೆ, ಆಚಾರಗಳಲ್ಲಿ ನಿಷ್ಣಾತರಾದವರಿಂದ ಪರಿಷ್ಕರಣೆ ಮಾಡಿಸಲಾಯಿತು. 'ಶ್ರೀ ರಾಮಕೃಷ್ಣ ವಿಜಯಂ'ನ ಸಂಪಾದಕರಾಗಿದ್ದ ಸ್ವಾಮಿ ಪರಮಾತ್ಮಾನಂದರು ಮತ್ತು ಸ್ವಾಮಿ ಆದಿದೇವಾನಂದರು ಈ ಕೆಲಸದಲ್ಲಿ ನೆರವು ನೀಡಿದರು. ಈ ಲೇಖನಗಳನ್ನು ಒಳಗೊಂಡ ಮೊದಲ ಆವೃತ್ತಿಯನ್ನು ೧೯೫೯ರಲ್ಲಿ ಪ್ರಕಟಿಸಲಾಯಿತು.

ಪುಸ್ತಕವನ್ನು ಕುರಿತು ಕೆಲವು ಮಾತುಗಳು

ಸ್ವಾಮಿ ರಾಮಕೃಷ್ಣಾನಂದರಿಂದ ವಿರಚಿತವಾದ ಶ್ರೀರಾಮಾನುಜರ ಜೀವನವು ಸತ್ಯನಿಷ್ಠವಾದ ಮತ್ತು ಪ್ರಮಾಣ ಸಹಿತವಾದ ಗ್ರಂಥವಾಗಿದೆ. ಅದನ್ನು ಒಬ್ಬ ಶ್ರೇಷ್ಠ ವಿದ್ವಾಂಸರೂ ಭಕ್ತರೂ, ಮತ್ತು ಸಾಧಕರೂ ಆಗಿದ್ದ ಸ್ವಾಮಿ ರಾಮಕೃಷ್ಣಾನಂದರಂಥವರು ಮಾತ್ರ ರಚಿಸಬಲ್ಲರು. ಶ್ರೀರಾಮಕೃಷ್ಣರ ನೇರ ಶಿಷ್ಯರೂ ಆಗಿದ್ದ ಅವರು ಅವತಾರ ಪುರುಷರೊಬ್ಬರ ಜೀವನ ಚರಿತ್ರೆಯನ್ನು ರಚಿಸಲು ಯೋಗ್ಯರಾಗಿದ್ದರು. ಶ್ರೀರಾಮಕೃಷ್ಣರ ಪರಂಪರೆಯ ವಿಶಾಲ ಹಾಗೂ ಸಾರ್ವತ್ರಿಕ ಧ್ಯೇಯಗಳ ನಿಕಟ ಸಂಪರ್ಕವುಳ್ಳವರಿಗೆ ಶ್ರೀರಾಮಾನುಜರನ್ನು ಕುರಿತ ಈ ಲೇಖನಗಳು ಹೆಚ್ಚು ಸ್ಫೂರ್ತಿದಾಯಕವಾದುವು. ತಮ್ಮ ವಿದ್ವಾಂಸ ಸ್ನೇಹಿತರ ಸಹಕಾರದಿಂದ ಮತ್ತು ಕೆಲವು ಸಂಸ್ಕೃತ ಆಕರ ಗ್ರಂಥಗಳಿಂದ ವಿಷಯಸಂಗ್ರಹ ಮಾಡಿ ಸ್ವಾಮಿ ರಾಮಕೃಷ್ಣಾನಂದರು ಕೃತಿರಚನೆ ಮಾಡಿದ್ದಾರೆ. ಅವರಿಗೆ ಈ ವಿಷಯದಲ್ಲಿದ್ದ ಸಹಚಿಂತನೆ, ಹೃದಯವಂತಿಕೆ, ಅವರ ಉನ್ನತ ಮಟ್ಟದ ಆಧ್ಯಾತ್ಮಿಕ ಸ್ಥಿತಿಗಳು ಮತ್ತು ಆಳವಾದ ವಿದ್ವತ್‌ಪೂರ್ಣ ಜ್ಞಾನ ಈ ಲೇಖನಗಳ ಉದ್ದಕ್ಕೂ ಪ್ರತಿಬಿಂಬಿತವಾಗಿವೆ. ಸ್ವಾಮಿ ರಾಮಕೃಷ್ಣಾನಂದರು ವಿವರಿಸಿರುವ ವಿಷಯಗಳು ದಕ್ಷಿಣ ಭಾರತದ ಭಕ್ತಿಪಂಥದ ಸಂಪೂರ್ಣ ಪರಂಪರೆಯನ್ನು ಒಳಗೊಳ್ಳುತ್ತವೆ, ಅದರಲ್ಲಿಯೂ ಮುಖ್ಯವಾಗಿ ವಿಷ್ಣುವಿನ ಆರಾಧನೆಯನ್ನು ಒಳಗೊಳ್ಳುತ್ತವೆ. ಶ್ರೀರಾಮಾನುಜರನ್ನು ಮುಖ್ಯಪಾತ್ರವನ್ನಾಗಿ ಚಿತ್ರಿಸಿದ್ದರೂ ಈ ಲೇಖನಗಳು ಭಕ್ತಿಮಾರ್ಗದ ಉಗಮವನ್ನೂ ಬೆಳವಣಿಗೆಯನ್ನೂ ತಿಳಿಸುತ್ತದೆ. ಹನ್ನೆರಡು ಜನ ಆಳ್ವಾರುಗಳ ಹಿನ್ನೆಲೆಯನ್ನೂ, ಮನೆತನದ ವಿವರಗಳನ್ನು ಇಲ್ಲಿ ತಿಳಿಸುತ್ತಾರೆ. ಅವರಲ್ಲಿ ಒಬ್ಬ ಗೌರಾವಾನ್ವಿತ ಮಹಿಳಾ ಭಕ್ತೆ ಆಂಡಾಳ್ ಸಹ ಇದ್ದಳೆಂಬುದನ್ನು ತಿಳಿಸುತ್ತಾರೆ. ದಾಖಲಾದ ಅತ್ಯಂತ ಪ್ರಾಚೀನ ಅಂದರೆ ಕ್ರಿ.ಪೂ. ೪೨೦೦ರ ಕಾಲದಲ್ಲಿ (ದ್ವಾಪರ ಯುಗದಲ್ಲಿ) ಭಕ್ತಿಮಾರ್ಗ ಪ್ರಾರಂಭವಾದುದನ್ನು ಗುರುತಿಸಲಾಗಿದೆ. ಅದು ಎಂತಹ ಪ್ರಭಾವಯುತವಾದ ನಿರೂಪಣೆಯೆಂದರೆ, ಜ್ಞಾನ ಮಾರ್ಗದ ಬಗ್ಗೆ ಒಲವು, ನಿಷ್ಠೆ ಇರುವ ಉದ್ದಾಮ ಪಂಡಿತನನ್ನೂ ಭಕ್ತಿಯ ಅಮೃತದ ಕಡೆಗೆ ಸೆಳೆಯುತ್ತದೆ. ವರ್ತಮಾನ ಸಮಯದಲ್ಲಿ ನಡೆಯುತ್ತಿರುವ ಚಿಂತನೆಗಳು, ವಾದಗಳಿಗೆ ಮೂಲದ್ರವ್ಯವು ಈ ಪುಸ್ತಕದಲ್ಲಿದೆ ಎಂಬುದನ್ನು ನಾವು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ. ಗಹನವಾದ ಅಮೂರ್ತ ತತ್ತ್ವಗಳನ್ನು ಹೇಳುವ ಸಮಯದಲ್ಲಿ ಆದರ್ಶ ಭಕ್ತನ ಬದುಕಿನ ಉದಾಹರಣೆಯನ್ನೂ ನಮ್ಮ ಮುಂದೆ ಇಡಲಾಗಿದೆ. ರಾಮಾನುಜರ ಜೀವನವೇ ಆದರ್ಶ ಭಕ್ತನ ಜ್ವಲಂತ ಉದಾಹರಣೆ ಎಂಬುದನ್ನು ಈ ಪುಸ್ತಕದಲ್ಲಿ ವಿವರಿಸಿರುವುದು ಒಂದು ವಿಶೇಷತೆ. ಶ್ರೀರಾಮಕೃಷ್ಣರು ಅನೇಕ ವೇಳೆ ಭಕ್ತ, ಭಾಗವತ ಮತ್ತು ಭಗವಂತ — ಮೂರು ಒಂದೇ ಎಂದೂ, ಅವು ಒಂದೇ ಪೂರ್ಣ ಸತ್ಯದ ಅಂಶವನ್ನು ತಿಳಿಸುತ್ತದೆ ಎಂದೂ ಹೇಳುತ್ತಿದ್ದರು. ಭಗವಂತನ ನಾಮಸ್ಮರಣೆಯ ವೈಭವವನ್ನು ಶ್ರೀರಾಮಕೃಷ್ಣರು ಮೇಲಿಂದ ಮೇಲೆ ಹೇಳುತ್ತಿದ್ದರು. ಭಕ್ತರಿಗೆ ಜಾತಿ ಎಂಬುದಿಲ್ಲವೆಂದು ಅವರು ಹೇಳಿದರು ಮತ್ತು ಆಚರಿಸಿ ತೋರಿಸಿದರು. ಶ್ರೀರಾಮಾನುಜರ ಭವ್ಯವಾದ ಮತ್ತು ಆಶ್ಚರ್ಯಕರವಾದ ಜೀವನವು ಜಾತಿಪದ್ಧತಿಯನ್ನು ಮೀರಿ ಜಾತ್ಯತೀತ ಸ್ತರಕ್ಕೇರಿದ ಶ್ರೇಷ್ಠ ಉದಾಹರಣೆ. ಇದನ್ನು ಪರಿಶುದ್ಧ ಮನಸ್ಸು ಮತ್ತು ಅಂತಃಕರಣವುಳ್ಳವರು ಮಾತ್ರ ಅರಿಯಲು ಸಾಧ್ಯ.

ಆಳ್ವಾರುಗಳ ಜೀವನವನ್ನಿಲ್ಲಿ ಸಂಕ್ಷಿಪ್ತವಾಗಿ ತಿಳಿಸಿರುತ್ತಾರೆ. ಪ್ರತಿಯೊಬ್ಬರ ಜೀವನವೂ ದೇವರಲ್ಲಿ ಸಂಪೂರ್ಣ ಶರಣಾಗತಿಯ ಉದಾಹರಣೆಯಾಗಿದೆ; ಭಗವತ್ ಸಾಕ್ಷಾತ್ಕಾರ ಹೊಂದಿದ ಭಕ್ತರ ಸಾರ್ವತ್ರಿಕ ಅನುಭವವಾಗಿದೆ. ಜ್ಞಾನ-ಭಕ್ತಿಗಳು ಅಂತಿಮವಾಗಿ ಒಂದಾಗುತ್ತವೆ ಎಂಬುದು ಶ್ರೀರಾಮಕೃಷ್ಣರ ಭಕ್ತರಿಗೆ ತಿಳಿದಿರುವ ವಿಷಯವೇ ಆಗಿದೆ. ಲೋಕಸಂಗ್ರಹ, ಕರ್ಮ, ಅಧಿಕಾರಿ, ಮೊದಲಾದ ವಿಷಯಗಳಲ್ಲಿ ಪರಿಶ್ರಮ ಇರುವವರಿಗೆ ಹಾಗೂ ಈಶಾವಾಸ್ಯೋಪನಿಷತ್ತಿನ ಪರಿಚಯ ಇರುವವರಿಗೆ ಸ್ವಾಮಿ ರಾಮಕೃಷ್ಣಾನಂದರು ಇಲ್ಲಿ ತಿಳಿಸಿರುವ ವಿಷಯಗಳು — ವಿಶೇಷವಾಗಿ ಶ್ರೀರಾಮಾನುಜರ ಜೀವನ ವಿಚಾರ — ವಿಶದವಾಗಿ ಹಾಗೂ ಜ್ಞಾನಪ್ರದವಾಗಿ ಕಂಡುಬರುತ್ತವೆ. ಶ್ರೀಶಂಕರಾಚಾರ್ಯರ ಜೀವನವನ್ನೂ ಶ್ರೀರಾಮಾನುಜರ ಜೀವನವನ್ನೂ ತುಲನೆ ಮಾಡಿ ಹೇಗೆ ಈ ಇಬ್ಬರು ಮಹಾತ್ಮರ ನಡುವೆ ಸಾಮ್ಯತೆಯಿದೆ ಎಂಬುದನ್ನು ಇಲ್ಲಿ ವಿಶದಪಡಿಸಲಾಗಿದೆ. ಅಲ್ಪತನದಿಂದ ಕೂಡಿದುದು ಯಾವುದೂ ಇಲ್ಲಿಲ್ಲ. ಯಾಮುನಾಚಾರ್ಯರ ಜೀವನದಲ್ಲಿ ಅವರು ಯುವಕರಾಗಿದ್ದಾಗ ಹೇಗೆ ತಮ್ಮ ಮೇಧಾಶಕ್ತಿಯ ಬಲದಿಂದ ರಾಜ್ಯದ ಒಡೆತನವನ್ನೂ ಸಂಪಾದಿಸಿದರು, ಮತ್ತು ಮನುಷ್ಯನ ಮನಸ್ಸಿನಲ್ಲಿರುವ ರಾಜಸಿಕ ಪ್ರವೃತ್ತಿಯು ಪ್ರಬಲವಾಗಿದ್ದು ಆಧ್ಯಾತ್ಮಿಕ ಪ್ರವೃತ್ತಿ

ಯನ್ನು ಅದು ಹೇಗೆ ಕೆಳಮಟ್ಟಕ್ಕೆ ತಳ್ಳಬಲ್ಲುದು ಎಂಬುದನ್ನು ಸ್ವಾಮಿ ರಾಮಕೃಷ್ಣಾನಂದರು ಹೃದಯಂಗಮವಾಗಿ ವಿವರಿಸಿದ್ದಾರೆ. ಇದನ್ನು ಹೇಳುವುದರಲ್ಲಿ ಒಂದು ಸಂದೇಶ ಅಡಕವಾಗಿದೆ. ಇಲ್ಲಿ ಜೀವನ ನಾಟಕವು ಎರಡು ಕೇಂದ್ರಗಳಲ್ಲಿ ನಡೆಯುತ್ತದೆ: ಶ್ರೀರಂಗಂ ಮತ್ತು ಕಾಂಚೀಪುರಂನಲ್ಲಿ. ಅವರ ಅತಿಮುಖ್ಯವಾದ ಸಂದೇಶ ಯಾವುದೆಂದರೆ ಯಾಮುನಾಚಾರ್ಯರು ಹೇಗೆ ಎಲ್ಲವನ್ನೂ ತ್ಯಾಗಮಾಡಿ ಶ್ರೀರಂಗನಾಥಸ್ವಾಮಿಯಲ್ಲಿ ಶರಣಾಗತಿಯನ್ನು ಹೊಂದುತ್ತಾರೆ ಎಂಬುದು. ಇನ್ನೊಂದು ಅಧ್ಯಾಯದಲ್ಲಿ ಯಾಮುನಾಚಾರ್ಯರು ರಚಿಸಿರುವ **'ಸ್ತೋತ್ರರತ್ನ'** ಸೇರಿದೆ. ಇದು ಶ್ರೀವೈಷ್ಣವ ಭಕ್ತರಿಗೆ ಪ್ರಿಯವಾದದ್ದು.

ಶ್ರೀರಾಮಾನುಜರು ಶ್ರೀಪೆರುಂಬದೂರಿನ ಭಕ್ತ ದಂಪತಿಗಳಾದ ಕೇಶವಾಚಾರ್ಯ ಮತ್ತು ಕಾಂತಿಮತಿಯವರ ಮಗನಾಗಿ ಹುಟ್ಟಿದುದು; ಅದ್ವೈತ ಪಂಡಿತರಾಗಿದ್ದ ಯಾದವಪ್ರಕಾಶರಲ್ಲಿ ಶಿಷ್ಯವೃತ್ತಿಯನ್ನು ಕೈಗೊಂಡುದು; ಒಂದು ಶ್ಲೋಕದ ಅರ್ಥ ವಿವರಿಸುವಲ್ಲಿ ಕಿರಿಯ ರಾಮಾನುಜ ಬೇರೆ ಅರ್ಥವನ್ನು ವಿವರಿಸಿದುದು ಮತ್ತು ವಾದ, ವಿವಾದಗಳು ನಡೆದದ್ದು; ಯಾದವಪ್ರಕಾಶರಲ್ಲಿದ್ದ ತಾಮಸಿಕಗುಣವು ರಾಮಾನುಜರನ್ನು ತನಗೆ ಪ್ರತಿಸ್ಪರ್ಧಿಯೆಂದು ತಿಳಿದದ್ದು; ವಿಚಾರಗಳನ್ನು ಸ್ವಾಮಿ ರಾಮಕೃಷ್ಣಾನಂದರು ಅತ್ಯಂತ ಪರಿಣಾಮಕಾರಿಯಾಗಿ ವಿವರಿಸಿರುತ್ತಾರೆ. ಕೊನೆಗೆ ಯಾದವ ಪ್ರಕಾಶರು ಶ್ರೀರಾಮಾನುಜರ ಶಿಷ್ಯವೃತ್ತಿಯನ್ನು ಸ್ವೀಕರಿಸುತ್ತಾರೆ. ಇನ್ನೊಂದು ಕ್ಲಿಷ್ಟವಾದ ಮತ್ತು ಸೂಕ್ಷ್ಮವಾದ ವಿಷಯವನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಪ್ರಾಪಂಚಿಕತೆಯಲ್ಲಿ ಮುಳುಗಿದ್ದ ಹೆಂಡತಿಯನ್ನು ಅವಳ ತವರು ಮನೆಗೆ ಕಳಿಸಿ ರಾಮಾನುಜರು ಸಂನ್ಯಾಸವನ್ನು ಸ್ವೀಕರಿಸುತ್ತಾರೆ. ಈ ಸೂಕ್ಷ್ಮ ವಿಷಯವನ್ನು ವಿಮರ್ಶಾತ್ಮಕವಾಗಿ ವಿವರಿಸಿ ಸಮರ್ಥನೆ ಕೊಡುತ್ತಾರೆ. ಇದು ಈ ಪುಸ್ತಕದಲ್ಲಿನ ಒಂದು ವಿಶೇಷ.

ಶ್ರೀರಾಮಾನುಜರ ಜೀವನಕ್ಕೆ ಸಂಬಂಧಿಸಿದ ಎಲ್ಲ ವ್ಯಕ್ತಿಗಳ ಬಗ್ಗೆಯೂ, ಆಧಾರಯುಕ್ತವಾದ ಮತ್ತು ವಾತ್ಸಲ್ಯಪೂರಿತವಾದ ವಿವರಣೆಯನ್ನು ಕೊಡಲಾಗಿದೆ. ಮುಖ್ಯವಾಗಿ ಕಾಂಚೀಪೂರ್ಣ ಎಂಬ ಕೆಳಜಾತಿಯ ನಿಷ್ಠಾವಂತ ಭಕ್ತನಿಂದ ರಾಮಾನುಜರು ಆಧ್ಯಾತ್ಮಿಕ ಮಾರ್ಗದರ್ಶನ ಪಡೆಯುತ್ತಾರೆ. ಯಾಮುನಾಚಾರ್ಯರ ಶಿಷ್ಯರಾದ ಮಹಾಪೂರ್ಣ ಮತ್ತು ತಿರುಕೊಟ್ಟಿಯೂರ್ ಪೂರ್ಣ ಅವರ ಜತೆಗಿನ ಆಧ್ಯಾತ್ಮಿಕ ಸಂಬಂಧವನ್ನೂ ಇಲ್ಲಿ ವಿವರಿಸಲಾಗಿದೆ. ಶ್ರೀರಾಮಾನುಜರು ಕಡೆಗೂ ಯಾಮುನಾಚಾರ್ಯರನ್ನು ಬದುಕಿದ್ದಾಗ ನೋಡಲಾಗಲಿಲ್ಲ. ಆದರೆ ಅವರ ಮೃತಶರೀರದ ಮುಂದೆ ಮೂರು ಆಶ್ವಾಸನೆಗಳನ್ನು ನೀಡುತ್ತಾರೆ. ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆಯುವುದು; ಶ್ರೀವೈಷ್ಣವ ಮತವನ್ನು ಪ್ರಚಾರಮಾಡುವುದು ಮತ್ತು ತಿರುವಾಯ್‌ಮೊಳಿಗೆ ಅರ್ಥ ಬರೆಸುವುದು. ಈ ವಾಗ್ದಾನಗಳನ್ನು ಕೊಟ್ಟ ನಂತರ ಯಮುನಾಚಾರ್ಯರ ಮೃತಶರೀರದ ಮಡಿಸಿಕೊಂಡಿದ್ದ ಮೂರು ಬೆರಳುಗಳು ನೇರವಾದವು. ಶ್ರೀರಾಮಾನುಜರ ಜೀವನವು ಆದರ್ಶಪ್ರಾಯ ಮತ್ತು ಅನುಕರಣೀಯವಾದದ್ದು. ಅದು ಎಷ್ಟು ಸೊಗಸಾಗಿ ಮೂಡಿ ಬಂದಿದೆಯೆಂದರೆ ಓದುಗನು ಯಾವ ಮತ ಪಂಥಕ್ಕೂ ಸೇರಿದವನಾಗಿದ್ದರೂ ಇದರಲ್ಲಿ ಆತ್ಮೋದ್ಧಾರದ ಜ್ಞಾನದ ಗಣಿಯನ್ನು ಪಡೆದುಕೊಳ್ಳುತ್ತಾನೆ. ಇದಕ್ಕೆ ಸ್ವಾಮಿ ರಾಮಕೃಷ್ಣಾನಂದರ ವಿದ್ವತ್ಪೂರ್ಣವಾದ, ಖಚಿತ ಮತ್ತು ನಿಖರವಾದ ಬರಹವೇ ಕಾರಣ.

ಅಂತಿಮವಾಗಿ ಜುಲೈ ೨೦೧೭ರಲ್ಲಿ ಪ್ರಕಟವಾಗಿರುವ ೫ನೆಯ ಆವೃತ್ತಿಯ ಬಗ್ಗೆ ಸಂಕ್ಷಿಪ್ತ ಸಮೀಕ್ಷೆ:

ಶ್ರೀ ರಾಮಾನುಜರ ೧೦೦೦ದ ಜನ್ಮ ಸಂವತ್ಸರದಲ್ಲಿ ಇದನ್ನು ಪ್ರಕಟಿಸಲಾಗಿದೆ. ಇದು ಎಲ್ಲ ವಿಧದಲ್ಲಿಯೂ ಅತ್ಯುತ್ತಮವಾಗಿ ತಯಾರಾಗಿರುವ ವೃತ್ತಿನಿರತ ಕೆಲಸವಾಗಿದೆ; ಅಧ್ಯಾಯಗಳ ಮರುವಿಂಗಡಣೆ ಮತ್ತು ಪ್ರತಿಯೊಂದು ವಿಷಯದ ಕ್ರಮಬದ್ಧ ಪ್ರಸ್ತುತಿ; ಇಂಗ್ಲಿಷ್ ಅವತರಣಿಕೆಯ ಬರಹಗಾರರ ವಿಷಯವನ್ನೂ ಹೆಚ್ಚು ವಿಶದವಾಗಿ ಬರೆದಿರುವುದು ಇದರ ವಿಶಿಷ್ಟತೆ. ಅಧಿಕೃತ ಛಾಯಾಚಿತ್ರಗಳು ಅದರಲ್ಲಿಯೂ ಕರ್ನಾಟಕದ ಮೇಲುಕೋಟೆಗೆ ಸಂಬಂಧಿಸಿದ ಚಿತ್ರಗಳು ಇಲ್ಲಿವೆ; ಅವು ಕನ್ನಡನಾಡಿನ ಭಕ್ತರಿಗೆ, ಅದರಲ್ಲೂ ಶ್ರೀವೈಷ್ಣವ ಮತದವರಿಗೆ ಮುಖ್ಯವಾಗುತ್ತವೆ. ಈ ೫ನೆಯ ಆವೃತ್ತಿ ಸಂಗ್ರಹ ಯೋಗ್ಯವಾಗಿದೆ. ವಿಶ್ವವಿದ್ಯಾಲಯದ ಪುರಾತತ್ತ್ವ ಮತ್ತು ಪ್ರಾಗೈತಿಹಾಸಿಕ ಪಠ್ಯಪುಸ್ತಕಗಳ ಪಾಠಗಳಂತೆ ಈ ವಿವರಗಳು ಕಂಡುಬರುತ್ತವೆ. ಅನೇಕರು ಈ ಪವಿತ್ರ ಚಿತ್ರಗಳನ್ನು ಬೇರೆಯಾಗಿ ಪ್ರತಿ ಮಾಡಿಕೊಂಡು ಪೂಜೆಗಾಗಿ ಉಪಯೋಗಿಸಿಕೊಳ್ಳಬಹುದು. ಈ ಆವೃತ್ತಿಯಲ್ಲಿ ವಿಷಯಗಳನ್ನು ವಿಂಗಡಣೆ ಮಾಡುವ ರೀತಿ, ಅಡಿಟಿಪ್ಪಣಿಗಳು, ಕೊನೆಯಲ್ಲಿರುವ ಗ್ರಂಥವಿವರಣೆ ಇವು ಹಿಂದಿನ ಆವೃತ್ತಿಗಿಂತ ಉತ್ತಮವಾಗಿ ಮೂಡಿಬಂದು, ಸಂಪಾದನೆಯ ಶ್ರೇಷ್ಠತೆಯನ್ನೂ, ಕುಶಲತೆಯನ್ನೂ ಸೂಚಿಸುತ್ತದೆ. ಇನ್ನೊಂದು ಪುಟದಲ್ಲಿ ಶ್ರೀ ರಾಮಾನುಜರಿಂದ ರಚಿತವಾದ ಮತ್ತು ಅವರ ಬಗ್ಗೆ ಇತರರು ರಚಿಸಿರುವ ಪುಸ್ತಕಗಳ ಪಟ್ಟಿಯನ್ನು ಕೊಡಲಾಗಿದೆ. ಇದು ವಿದ್ವಾಂಸರಿಗೆ ಹೆಚ್ಚು ಉಪಯುಕ್ತವಾದುದು. ಯಾಮುನಾಚಾರ್ಯರ ಮಗ ಚೋಟ್ಟೈನಂಬಿಯೂ ಸೇರಿದಂತೆ ೭೪ ಗುರು ಪರಂಪರೆಯ ಪೀಠಾಧಿಪತಿಗಳ ಹೆಸರುಗಳು ಇವೆ. ಶ್ರೀ ಮನವಾಳ ಮಾಮುನಿಯು ರಚಿಸಿರುವ 'ಯತಿರಾಜ ವಿಂಶತಿ'ಯು ಶ್ರೀರಾಮಾನುಜರನ್ನು ಕುರಿತ ಪ್ರಾರ್ಥನೆಯಾಗಿದ್ದು ನಿತ್ಯಪಾರಾಯಣ ಮಾಡುವವರಿಗೆ ಅನುಕೂಲವಾಗಿದೆ. ೧೨ ಜನ ಆಳ್ವಾರರುಗಳ ೪೦೦೦ ಶ್ಲೋಕಗಳ 'ದಿವ್ಯಪ್ರಬಂಧಂ' ಸೇರಿಸಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಸ್ಥಳದ ಅಭಾವದಿಂದ ಈ ಭಕ್ತಿಮಾರ್ಗ ಪ್ರವರ್ತಕರಾದ ಶ್ರೇಷ್ಠ ಭಕ್ತರ ನುಡಿಗಳನ್ನು ಸೇರಿಸಲು ಸಾಧ್ಯವಾಗಿಲ್ಲ. ಶ್ರೀರಾಮಕೃಷ್ಣರ ಪರಂಪರೆಯ ಭಕ್ತರಿಗೆ ಮೆಚ್ಚುಗೆಯಾಗುವಂತಹ ಶ್ರೀರಾಮಾನುಜರನ್ನು ಕುರಿತು ಸ್ವಾಮಿ ವಿವೇಕಾನಂದರು ಹೇಳಿರುವುದನ್ನು ಸೇರಿಸಿರುವುದು ಸ್ವಾಗತಾರ್ಹವಾದುದು.

ಒಟ್ಟಿನಲ್ಲಿ ಈ ಅಮೂಲ್ಯವಾದ ೫ನೆಯ ಆವೃತ್ತಿಯ ಪ್ರಕಾಶಕರಿಗೆ ನಮ್ಮ ಅಪಾರ ಮೆಚ್ಚುಗೆ ಮತ್ತು ಕೃತಜ್ಞತೆಗಳನ್ನು ಸಲ್ಲಿಸಬೇಕು. ಪ್ರಕಾಶನದ ಗುಣಮಟ್ಟಕ್ಕಾಗಿಯೂ ಇದು ಮೆಚ್ಚುಗೆಗೆ ಪಾತ್ರವಾಗುತ್ತದೆ.

— ಎನ್.ಎಸ್.ಚಕ್ರವರ್ತಿ (ಅನು: ಎಲ್.ಜಿ.ನಾಗೇಶರಾವ್)

ಶ್ರೀ ವಲ್ಲಭಾಚಾರ್ಯರು

ಆಂಗ್ಲಮೂಲ: **ಸ್ವಾಮಿ ತಪಸ್ಯಾನಂದ** ಕನ್ನಡಕ್ಕೆ: **ಸ್ವಾಮಿ ವೀರೇಶಾನಂದ**



ಭಾಗ ೧

ಬಾಲ್ಯ ಜೀವನ

ರಾಮಾನುಜ (೧೦೧೭-೧೧೩೭), ನಿಂಬಾರ್ಕ (೧೩ನೆಯ ಶತಮಾನ) ಮತ್ತು ಮಧ್ವ (೧೨೩೮-೧೩೧೭) – ಈ ಎಲ್ಲ ವೈಷ್ಣವ ಆಚಾರ್ಯರು ವಲ್ಲಭಾಚಾರ್ಯರಿಗಿಂತಲೂ ಹಿಂದೆಯೇ ಬಾಳಿ ಬದುಕಿದರು. ಚೈತನ್ಯ (೧೪೮೫-೧೫೩೩) ಇವರ ಸಮಕಾಲೀನರು. ವಲ್ಲಭರು (೧೪೭೩-೧೫೩೧) ತೆಲುಗು ಬ್ರಾಹ್ಮಣ ಕುಟುಂಬಕ್ಕೆ ಸೇರಿದವರು. ಲಕ್ಷ್ಮಣ ಭಟ್ಟ ಮತ್ತು ಯೆಲ್ಲಮ್ಮಗಾರು – ಈ ದಂಪತಿಗಳಿಗೆ ಹುಟ್ಟಿದರು. ಲಕ್ಷ್ಮಣ ಭಟ್ಟರು ಪಂಡಿತರೂ ಭಗವದ್ಭಕ್ತರೂ ಆದ ಕುಟುಂಬಕ್ಕೆ ಸೇರಿದವರು. ಕೃಷ್ಣಾನದಿಯ ದಕ್ಷಿಣ ತಟದಲ್ಲಿರುವ ಕಾಕರವಾಡ್ ಎಂಬ ಪಟ್ಟಣದಲ್ಲಿ ಈ ಕುಟುಂಬದವರು ವಾಸಿಸುತ್ತಿದ್ದರು. ಯೆಲ್ಲಮ್ಮಗಾರುವಿನ ತಾಯಿ ಬಹಳ ಪ್ರಭಾವಯುತ ಕುಟುಂಬಕ್ಕೆ ಸೇರಿದವಳು. ಆಕೆಯ ತಂದೆಯಾದ ಶರ್ಮರು ವಿಜಯನಗರದ ರಾಜಾಸ್ಥಾನದಲ್ಲಿ ಆಸ್ಥಾನ ಪುರೋಹಿತರಾಗಿದ್ದರು. ತಂದೆ ಲಕ್ಷ್ಮಣ ಭಟ್ಟರು ವಾರಾಣಸಿಗೆ ತಮ್ಮ ಕುಟುಂಬವನ್ನು ಸ್ಥಳಾಂತರಿಸಿದರು. ವಾರಾಣಸಿ ಅಥವಾ ಕಾಶೀಧಾಮವು ಪವಿತ್ರ ತೀರ್ಥಕ್ಷೇತ್ರವೂ ಹೌದು, ಹಾಗೆಯೇ ಪಂಡಿತೋತ್ತಮರಿಗೆ ಹೆಸರುವಾಸಿಯಾದ ಗಣ್ಯಸ್ಥಾನವೂ ಹೌದು. ಆದರೆ ಲಕ್ಷ್ಮಣ ಭಟ್ಟರು ಈ ಕ್ಷೇತ್ರದಿಂದ ಪಲಾಯನ ಮಾಡುವ ಸಂದಿಗ್ಧ ಪರಿಸ್ಥಿತಿ ಉಂಟಾಯಿತು. ಏಕೆಂದರೆ ಕಾಶೀನಗರದ ಮೇಲೆ ಮುಸ್ಲಿಮರ ದಾಳಿ ಆಗುವ ದಟ್ಟ ವದಂತಿ ಹರಡಿತ್ತು. ಲಕ್ಷ್ಮಣ ಭಟ್ಟರು ತಮ್ಮ ಸ್ವಂತ ಗ್ರಾಮಕ್ಕೆ ತಿರುಗಿ ಹೋಗುವ ಯೋಜನೆ ಹಾಕಿಕೊಂಡಿದ್ದರು ಎಂದು ಕಾಣುತ್ತದೆ. ಈ ರೀತಿ ಪಲಾಯನ ಮಾಡುವಾಗ, ಅವರು ಇಂದಿನ ಆಧುನಿಕ ನಗರ ರಾಯಪುರಕ್ಕೆ ಸಮೀಪವಿರುವ ಚಂಪಾರಣ್ಯದ ಸನಿಹದ ದಟ್ಟ ಅರಣ್ಯವನ್ನು ಹಾದುಹೋಗುತ್ತಿದ್ದರು. ಅಲ್ಲಿಯೇ ಮುಂದೆ ವಲ್ಲಭ ಎಂದು ಹೆಸರಾದ ಮಗುವಿನ ಜನನವಾಯಿತು. ಹುಟ್ಟಿದಾಗ ಚಲನೆಯೇ ಇಲ್ಲದೇ ಇದ್ದರೂ, ಅದ್ಭುತವೋ ಎನ್ನುವಂತೆ ಮಗು ಬದುಕಿಕೊಂಡಿತು. ಚಂಪಾರಣ್ಯದಲ್ಲಿ ಸ್ವಲ್ಪ ಕಾಲ ನೆಲೆಸಿದ ನಂತರ, ಲಕ್ಷ್ಮಣ ಭಟ್ಟರು ಕಾಶೀನಗರಕ್ಕೇ ಹಿಂತಿರುಗಿದರು. ಏಕೆಂದರೆ, ಎಲ್ಲರೂ ಭಯಪಡುತ್ತಿದ್ದ ಮುಸ್ಲಿಮರ ದಾಳಿ ಆ ಸಮಯದಲ್ಲಿ ನಡೆಯಲೇ ಇಲ್ಲ.

ಯುವ ವಲ್ಲಭನು ಕಾಶೀನಗರದಲ್ಲಿಯೇ ಬೆಳೆದನು. ತನ್ನ ಅಸಾಧಾರಣ ಬುದ್ಧಿಮತ್ತೆಯನ್ನು ಎಲ್ಲರಿಗೂ ಪ್ರದರ್ಶಿಸಿದನು. ಎಳೆಯ ಏಳನೆಯ ವಯಸ್ಸಿನಲ್ಲಿಯೇ ಅವನ ವಿದ್ಯಾಭ್ಯಾಸ ಆರಂಭವಾಯಿತು. ವಿಷ್ಣುಚಿತ್ತರೆಂಬ ಗುರುಗಳ ಹತ್ತಿರ ವಲ್ಲಭನು ನಾಲ್ಕು ವೇದಗಳನ್ನೂ ಅಧ್ಯಯನ ಮಾಡಿ ಪಾರಂಗತನಾದನು. ವೇದಾಂಗಗಳನ್ನೂ, ಷಡ್‌ದರ್ಶನಗಳನ್ನೂ ಹಾಗೆಯೇ ಭಗವದ್ಗೀತೆ, ಭಾಗವತ, ಪಾಂಚರಾತ್ರ ಮುಂತಾದ ಧರ್ಮಗ್ರಂಥ

ಗಳನ್ನೂ ಕರಗತ ಮಾಡಿಕೊಂಡನು. ಅವನಿಗೆ ಹನ್ನೊಂದು ವರ್ಷ ವಯಸ್ಸಾಗಿದ್ದಾಗ, ತಂದೆ ಮರಣಹೊಂದಿದರು. ತಂದೆಯ ಅವಸಾನದಿಂದ ವಾರಾಣಸಿಯಲ್ಲಿ ನೆಲೆಸಿದ್ದ ಕುಟುಂಬವೂ ಬಿರುಕು ಬಿಟ್ಟಿತು. ಯುವಕನಾಗಿದ್ದ ವಲ್ಲಭನು ತೀರ್ಥಯಾತ್ರೆಗೆ ಹೊರಟು ಬಿಟ್ಟನು. ಸುಮಾರು ಇಪ್ಪತ್ತು ವರ್ಷಗಳ ಕಾಲ ಅಖಂಡ ಭಾರತವನ್ನು ಮೂರು ಬಾರಿ ಸುತ್ತುಹಾಕಿದನು. ಈ ಸಂಚಾರದ ಅವಧಿಯಲ್ಲಿ ನಿಷ್ಠಾವಂತ ಬ್ರಹ್ಮಚಾರಿಯಾಗಿಯೇ ಉಳಿದನು. ತೀವ್ರವಾದ ಸಾಧನೆಯನ್ನೂ ಮಾಡಿದನು. ಕೆಲವು ಸಂಚಾರಗಳಲ್ಲಿ ಅವನ ತಾಯಿಯೂ ಅವನ ಜೊತೆಗೆ ಇದ್ದಳು. ಇನ್ನು ಕೆಲವು ಪಯಣಗಳಲ್ಲಿ ಕುಟುಂಬದ ಇತರ ಸದಸ್ಯರು ಕೂಡ ಅವನ ಸಹಚರರಾಗಿದ್ದರು.

ಮೊದಲ ತೀರ್ಥಯಾತ್ರೆ

ಆ ಸಮಯದಲ್ಲಿ ಉತ್ತರ ಭಾರತವು ಪ್ರಕ್ಷುಬ್ಧ ಪರಿಸ್ಥಿತಿಯನ್ನು ಎದುರಿಸುತ್ತಿತ್ತು. ಮುಸ್ಲಿಮರ ದಾಳಿಯೇ ಇದಕ್ಕೆ ಕಾರಣ. ಈ ಕಠಿಣ ಪರಿಸ್ಥಿತಿಯಲ್ಲಿ ತನ್ನ ಕುಟುಂಬದ ಮೂಲಸ್ಥಾನವಾದ ದಕ್ಷಿಣ ಭಾರತಕ್ಕೆ ಪ್ರಯಾಣ ಮಾಡುವುದೇ ಸೂಕ್ತವೆಂದು ವಲ್ಲಭರಿಗೆ ಅನ್ನಿಸಿತು. ಅವರು ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಮಹತ್ವ ಪಡೆದ ಅನೇಕ ನಗರಗಳನ್ನು ಹಾದುಹೋಗಿ, ಕಟ್ಟಕಡೆಗೆ ವಿಜಯನಗರವನ್ನು ತಲುಪಿದರು. ಅಲ್ಲಿ ಅವರ ಸೋದರ ಮಾವ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಬಹಳ ಪ್ರಮುಖ ಸ್ಥಾನವನ್ನು ಅಲಂಕರಿಸಿದ್ದರು. ವಲ್ಲಭರು ವಿಜಯನಗರಕ್ಕೆ ಆಗಮಿಸಿದ ಸ್ವಲ್ಪ ಕಾಲದಲ್ಲಿಯೇ, ವಿಜಯನಗರದ ಪ್ರಸಿದ್ಧ ರಾಜನಾದ ಕೃಷ್ಣದೇವರಾಯನು ಅಧಿಕಾರವನ್ನು ವಹಿಸಿಕೊಂಡನು. ಅವನ ರಾಜ್ಯದಲ್ಲಿ ಬಹಳಷ್ಟು ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿದ್ದವು. ಅದ್ವೈತ ತತ್ತ್ವದ ಪ್ರತಿಪಾದಕರಾದ ಶ್ರೀಶಂಕರರ ಅನುಯಾಯಿಗಳು ಮತ್ತು ದ್ವೈತ ಸಿದ್ಧಾಂತದ ಪ್ರವರ್ತಕರಾದ ಶ್ರೀಮಧ್ವರ ಅನುಯಾಯಿಗಳ ನಡುವೆ ವಾಗ್ವಿವಾದಗಳು ನಡೆಯುತ್ತಲೇ ಇದ್ದವು. ವಲ್ಲಭನಿಗೆ ಆಗ ಕೇವಲ ಹನ್ನೆರಡು ವರ್ಷ ವಯಸ್ಸು. ಅವನು ಸಹಜವಾಗಿಯೇ ಈ ವಿವಾದಗಳ ಕಡೆಗೆ ಆಕರ್ಷಿತನಾದನು. ಒಮ್ಮೆ ಶ್ರೀಶಂಕರರ ವೇದಾಂತ ಶಾಖೆಯ ನೇತಾರನೊಡನೆ ವಾದ ಮಾಡಿ ವಲ್ಲಭರು ಜಯಗಳಿಸಿದರೆಂದು ಹೇಳುತ್ತಾರೆ. ಇದರಿಂದ ಅವನು ಕೃಷ್ಣದೇವರಾಯನ ಗಮನಕ್ಕೂ ಬಂದನು. ರಾಜನು ಶ್ರದ್ಧಾಳು ವೈಷ್ಣವನಾದರೂ, ಧಾರ್ಮಿಕ ವಿಷಯಗಳಲ್ಲಿ ಉದಾರಿಯಾಗಿದ್ದನು. ವಲ್ಲಭರ ಈ ಜಯವನ್ನು ಕೊಂಡಾಡಲು ಮತ್ತು ಅವರಿಗೆ ಆಚಾರ್ಯ ಎಂಬ ಗೌರವ ಪದವಿಯನ್ನು ನೀಡುವ ಸಲುವಾಗಿ, ಕೃಷ್ಣದೇವರಾಯನು ವಲ್ಲಭರಿಗೆ ಕನಕಾಭಿಷೇಕವನ್ನು ಮಾಡಿದನಂತೆ. ಕನಕಾಭಿಷೇಕವೆಂದರೆ ಚಿನ್ನದ ನಾಣ್ಯಗಳಿಂದ ಅಭಿಷೇಕವನ್ನು ಮಾಡುವುದು. ಇನ್ನು ಕೆಲವರು ಈ ಕನಕಾಭಿಷೇಕವು ಭವಿಷ್ಯದ ಯಾವುದೋ ಅವಧಿಯಲ್ಲಿ ನಡೆಯಿತೆಂದು ಹೇಳುತ್ತಾರೆ. ವಲ್ಲಭರು ವಿಜಯನಗರದಲ್ಲಿ ಸುಮಾರು ೨-೩ ವರ್ಷಗಳ ಕಾಲ ನೆಲೆಸಿದರು. ಆ ಸಮಯದಲ್ಲಿ ಅವರು ವಿಷ್ಣುಸ್ವಾಮಿ ಮತ್ತು ಮಧ್ವರು ಪ್ರತಿಪಾದಿಸಿದ ವೈಷ್ಣವ ತತ್ತ್ವವನ್ನು ಅಧ್ಯಯನ ಮಾಡಿ ಅಗಾಧ ಪಾಂಡಿತ್ಯವನ್ನು ಗಳಿಸಿಕೊಂಡರು. ಮಧ್ವರು ಬೋಧಿಸಿದ ತತ್ತ್ವಶಾಸ್ತ್ರವು ವಲ್ಲಭರ ಸಿದ್ಧಾಂತಕ್ಕಿಂತ ಭಿನ್ನವಾಗಿದ್ದರೂ, ಆ ಸಿದ್ಧಾಂತದೊಡನೆ ಅವರು ಇಟ್ಟುಕೊಂಡಿದ್ದ ಸಂಬಂಧವು ಬಹಳ ಆಪ್ಯಾಯಮಾನವಾಗಿತ್ತು, ಅನ್ಯೋನ್ಯವಾಗಿತ್ತು. ಭಾಗವತ ಪುರಾಣದ ಅಧ್ಯಯನವನ್ನು ವಲ್ಲಭರಿಗೆ ಪರಿಚಯಿಸಿದವರು ಮಧ್ವ ಸಂಪ್ರದಾಯಕ್ಕೆ ಸೇರಿದ ಸಂನ್ಯಾಸಿಗಳಾದ ಮಾಧವೇಂದ್ರ ಯತಿ ಎನ್ನುವವರು. ಈ ಪವಿತ್ರ ಗ್ರಂಥವನ್ನು ತಮ್ಮ ವೃದ್ಧಾವಸ್ಥೆಯಲ್ಲಿ ವಲ್ಲಭರು ಜನಸಾಮಾನ್ಯರಲ್ಲಿ ಪ್ರಚುರಪಡಿಸಿದರು. ಇದಲ್ಲದೆ ಮಾಧವೇಂದ್ರ ಯತಿಗಳು ಮುಂದಿನ ದಿನಗಳಲ್ಲಿ ಗೋಕುಲದಲ್ಲಿ ಗೋವರ್ಧನ ಮಂದಿರವನ್ನು ಸ್ಥಾಪಿಸುವುದಕ್ಕೆ ವಲ್ಲಭರಿಗೆ ಸಹಾಯ ಮಾಡಿದರು. ಇಷ್ಟೂ ಅಲ್ಲದೆ, ವಲ್ಲಭರ ಕಡೆಯ ದಿನಗಳಲ್ಲಿ ಮಾಧವೇಂದ್ರರು ಸಂನ್ಯಾಸವನ್ನು ಕೂಡ ಪ್ರದಾನ ಮಾಡಿದರು.

ವಲ್ಲಭರು ವಿಜಯನಗರದಲ್ಲಿ ವಾಸಮಾಡಿದ್ದು ಕೇವಲ ಎರಡು ಮೂರು ವರ್ಷಗಳ ಕಾಲ ಮಾತ್ರ. ಈ ಕಾಲದಲ್ಲಿ ಅವರ ಮೇಧಾವಿತನವು ಪ್ರಬುದ್ಧತೆಯನ್ನು ಪಡೆದುಕೊಳ್ಳುವ ಅವಕಾಶವನ್ನು ಪಡೆದುಕೊಂಡಿತು. ಬೌದ್ಧಿಕ ಉತ್ಥಾನದ ಅಗ್ರಗಾಮಿಯಾಗಿದ್ದ ಆ ನಗರದಲ್ಲಿದ್ದ ನೂರಾರು ಪಂಡಿತರು ಮತ್ತು ವಿವಿಧ ಪಂಥಗಳ ಅನುಯಾಯಿಗಳ ಸಂಪರ್ಕವು ವಲ್ಲಭರ ಅಪೂರ್ವ ಬೌದ್ಧಿಕ ವಿಕಾಸಕ್ಕೆ ಅನುವು ಮಾಡಿಕೊಟ್ಟಿತು. ವಲ್ಲಭರ ನಿಜವಾದ ತೀರ್ಥಯಾತ್ರೆಯು, ಅಂದರೆ ಅವರ ಎರಡನೆಯ ಯಾತ್ರೆಯು ಆರಂಭವಾಗಿದ್ದು ಅವರ ಹದಿನೈದನೆಯ ವಯಸ್ಸಿನಲ್ಲಿ. ಇದಕ್ಕೆ ಮುಂಚೆ ವಲ್ಲಭರು ತಮ್ಮ ತಾಯಿ ಮತ್ತು ಸಹೋದರರನ್ನು ತಮ್ಮ ಸೋದರಮಾವನ ಆಶ್ರಯದಲ್ಲಿ ಬಿಟ್ಟರು. ಅನಂತರವಷ್ಟೇ ತಮ್ಮ ಇಬ್ಬರು ಮೂವರು ಶ್ರದ್ಧಾಳು ಅನುಯಾಯಿಗಳೊಡನೆ ತಮ್ಮ ಈ ಎರಡನೆಯ ತೀರ್ಥಯಾತ್ರೆಗೆ ಹೊರಟುಬಿಟ್ಟರು. ಅದು ಹಲವಾರು ವರ್ಷಗಳ ಕಾಲ ಮುಂದುವರಿಯಿತು. ವಲ್ಲಭರ ಈ ಯಾತ್ರೆಯ ಹಲವಾರು ಐತಿಹ್ಯಗಳು ದಾಖಲೆಗಳಾಗಿ ಇನ್ನೂ ಉಳಿದುಬಂದಿವೆ. ಹೀಗಾಗಿ ಅವರು ದರ್ಶಿಸಿದ ಸ್ಥಳಗಳು, ದಿನಾಂಕಗಳು ಮತ್ತು ಯಾತ್ರೆಯ ಕ್ರಮದಲ್ಲಿಯೂ ವಿಭಿನ್ನ ವಿವರಣೆಗಳನ್ನು ಕಾಣುತ್ತೇವೆ. ಅವರು ಇಡೀ ದಕ್ಷಿಣ ಭಾರತವನ್ನು ಸಂದರ್ಶಿಸಿದರು. ಹಲವಾರು ಪ್ರಮುಖ ದೇವಸ್ಥಾನ ನಗರಗಳಿಗೆ ಮತ್ತು ಆಧ್ಯಾತ್ಮಿಕ ಅಧ್ಯಯನ ಕೇಂದ್ರಗಳಿಗೆ ಭೇಟಿಕೊಟ್ಟರು. ಈ ಸ್ಥಳಗಳಲ್ಲಿ ಭಾರತದ ಧಾರ್ಮಿಕ ಸಂಸ್ಕೃತಿಯು ತನ್ನ ಪವಿತ್ರತೆಯನ್ನು ಇನ್ನೂ ಉಳಿಸಿಕೊಂಡಿತ್ತು. ಇದಕ್ಕೆ ವಿರುದ್ಧವಾಗಿ, ಉತ್ತರ ಭಾರತವು ಮುಸ್ಲಿಂ ಆಕ್ರಮಣಗಳು ಮತ್ತು ದಬ್ಬಾಳಿಕೆಗಳ ಕಾರಣದಿಂದ ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅಸ್ತವ್ಯಸ್ತಗೊಂಡಿತ್ತು. ವಲ್ಲಭರು ದರ್ಶಿಸಿದ ಸ್ಥಳಗಳಲ್ಲಿ ಮುಖ್ಯವಾದುವು

ಹೀಗಿವೆ: ಪಂಪಾ, ಋಷ್ಯಮೂಕ, ಕುಮಾರಪಾದ, ಶ್ರೀಶೈಲ, ತಿರುಪತಿ, ಕಾಂಚೀಪುರಂ, ಕುಂಭಕೋಣಂ, ಮನ್ನಾರ್‌ಗುಡಿ, ಶ್ರೀರಂಗಮ್, ಮದುರೈ, ತೆಂಕಾಸಿ, ರಾಮೇಶ್ವರಂ, ಶ್ರೀವೈಕುಂಠಮ್, ಆಳ್ವಾರ್ ತಿರುನಗರಿ, ತಿರುವನಂತಪುರಂ, ಜನಾರ್ದನಮ್, ಉಡುಪಿ, ಶ್ರೀರಂಗಪಟ್ಟಣಂ ಮತ್ತು ಗೋಕರ್ಣ.

ವಲ್ಲಭರು ಕೌಂಡಿನ್ಯಾಶ್ರಮದಲ್ಲಿ ಇದ್ದಾಗ ಒಂದು ಅಪೂರ್ವ ಅನುಭವವನ್ನು ಪಡೆದುಕೊಂಡರು. ಈ ಸ್ಥಳವು ಪೂರ್ವಘಟ್ಟದ ಗಹನವಾದ ಅರಣ್ಯಪ್ರದೇಶದಲ್ಲಿದೆ. ಇಲ್ಲಿ ಗಂಧದ ಮರಗಳು ದಟ್ಟವಾಗಿ ಬೆಳೆದುಕೊಂಡಿವೆ. ಇಲ್ಲಿ ಋಷಿ ಕೌಂಡಿನ್ಯರು ವಿಷ್ಣುಸ್ವಾಮಿಗೆ ಭಗವದ್ದರ್ಶನವನ್ನು ಅನುಗ್ರಹಿಸಿದರು ಎಂದು ಐತಿಹ್ಯ ಇದೆ. ವಿಷ್ಣುಸ್ವಾಮಿಗಳು ವಲ್ಲಭರಿಗಿಂತ ಮುಂಚೆಯೇ ಬಾಳಿದ ಮಹಾನ್ ವೈಷ್ಣವ ಆಚಾರ್ಯರಲ್ಲಿ ಒಬ್ಬರು. ವಲ್ಲಭರು ಕೌಂಡಿನ್ಯಾಶ್ರಮದಲ್ಲಿ ಇದ್ದಾಗ, ಋಷಿ ಕೌಂಡಿನ್ಯರೇ ಅವರಿಗೆ ದರ್ಶನವಿತ್ತು ಹೀಗೆ ಹೇಳಿದರು: ನಮ್ಮ ಗುರುಗಳಾಗಿದ್ದವರು ಶಾಂಡಿಲ್ಯ ಋಷಿಗಳು. ಅವರು ಗೋವರ್ಧನ ಪರ್ವತದಲ್ಲಿ ಬಹಳಕಾಲ ತಪಸ್ಸು ಮಾಡಿದರು. ಭಗವಂತನ ದರ್ಶನಕ್ಕಾಗಿ ಹಾತೊರೆಯುತ್ತಿದ್ದರು. ಕಟ್ಟಕಡೆಯಲ್ಲಿ ಅವರಿಗೆ ತಮ್ಮ ತಪಸ್ಸಿನ ಫಲ ದೊರಕಿತು. ಭಗವಂತನು ಅವರ ಮೇಲೆ ಸುಪ್ರೀತನಾದನು. ಇದರ ಕಾರಣವಾಗಿ, ಲಲಿತಾದೇವಿ ಎಂಬ ತಾಪಸಿ ಮಹಿಳೆ ಅವರ ಮುಂದೆ ಕಾಣಿಸಿಕೊಂಡಳು. ಆಕೆಯು ಭಕ್ತಿ ಸಾಧನೆಯ ದೀಕ್ಷೆಯನ್ನು ಶಾಂಡಿಲ್ಯರಿಗೆ ನೀಡಿದಳು. ಅಲ್ಲದೆ ಭಕ್ತಿಯ ಉಪದೇಶವನ್ನೂ ಹೀಗೆ ಮಾಡಿದಳು: ''ಶ್ರೀ ಪುರುಷೋತ್ತಮನಿಗಿಂತ ಶ್ರೇಷ್ಠನಾದವನು ಬೇರೆ ಯಾರೂ ಇಲ್ಲ. ವೇದಗಳು ಮತ್ತು ದೇವತೆಗಳೂ ಕೂಡ ಅವನನ್ನು ಸಂಪೂರ್ಣವಾಗಿ ತಿಳಿದುಕೊಂಡಿಲ್ಲ. ಭಕ್ತನಾದವನು ಅವನಲ್ಲಿ ಸಂಪೂರ್ಣವಾದ ಮತ್ತು ಆಳವಾದ ಶ್ರದ್ಧೆಯನ್ನು ಬೆಳೆಸಿಕೊಳ್ಳಬೇಕು. ಅಂಥಶ್ರದ್ಧೆಯನ್ನು ಬೇರೆ ಯಾವುದರಲ್ಲಿಯೂ ತೋರಿಸಬಾರದು. ಎಲ್ಲ ಬಗೆಯ ಜಡತೆಯನ್ನು ಬಿಟ್ಟು ಭಗವಂತನ ಲೀಲೆಗಳನ್ನು ಪ್ರತಿಕ್ಷಣವೂ ಸ್ಮರಿಸಿಕೊಳ್ಳಬೇಕು. ನೀನು ಸರ್ವದಾ ನಿನಗೆ ನೀನೇ ಹೇಳಿಕೊಳ್ಳ ಬೇಕು, 'ನಾನು ಭಗವಂತನ ಸೇವಕನಾಗಿದ್ದೇನೆ. ಅವನೊಬ್ಬನೇ ನನ್ನ ಒಡೆಯ. ವೇದಗಳಾಗಲಿ ಅಥವಾ ಯಾವುದೇ ಮನುಷ್ಯ ನಿರ್ಮಿತ ಸಾಧನಗಳಾಗಲಿ ನನ್ನ ಆಧ್ಯಾತ್ಮಿಕ ಮಾರ್ಗದಲ್ಲಿ ಅಡ್ಡಿಗಳಾಗುವುದಿಲ್ಲ. ಜಗತ್ತಿನ ಸುಖವೆಲ್ಲವೂ ಕಡೆಯದಾಗಿ ದುಃಖದಲ್ಲಿಯೇ ಕೊನೆಗೊಳ್ಳುತ್ತವೆ. ಹೀಗಾಗಿ ಇಂಥ ಸುಖದಲ್ಲಿ ಯಾವುದೇ ಒಳಿತಿಲ್ಲ. ಎಂದು ತಾನೇ ನಾನು ಭಗವಂತನನ್ನು ಕಾಣಬಲ್ಲೆ? ಎಂದು ತಾನೇ ಭಗವಂತನು ನನ್ನ ಮೇಲೆ ತನ್ನ ಕೃಪೆಯನ್ನು ಹರಿಸುತ್ತಾನೆ? ಎಲ್ಲರ ಅಹಂಕಾರವನ್ನೂ ಮರ್ದಿಸುವ ಆ ಪರಮಪುರುಷನ ವದನಾರವಿಂದವನ್ನು ಎಂದು ತಾನೇ ನಾನು ಕಾಣುತ್ತೇನೆ?' ಹೀಗೆ ನೀನು ಭಾವಿಸುತ್ತ ಹೋದರೆ, ಕಡೆಯಲ್ಲಿ ಭಗವಂತನ ಪರಮಾದ್ಭುತ ಲೀಲೆಯ ಅನುಭೂತಿಯನ್ನು ಪಡೆದುಕೊಳ್ಳುತ್ತೀಯೆ.'' ಹೀಗೆ ಶಾಂಡಿಲ್ಯನಿಗೆ ಉಪದೇಶಿಸಿ, ಲಲಿತಾದೇವಿಯು ಕಣ್ಮರೆಯಾದಳು. ಶಾಂಡಿಲ್ಯ ಋಷಿ ಆಕೆ ಉಪದೇಶಿಸಿದ ರೀತಿಯಲ್ಲಿ ಭಕ್ತಿಸಾಧನೆಯನ್ನು ಕೈಗೊಂಡನು. ಇದರ ಫಲವಾಗಿ ಕಟ್ಟಕಡೆಗೆ ಅವನು ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಂಡನು. ಶಾಂಡಿಲ್ಯ ಋಷಿಯು ಭಕ್ತಿಸಾಧನೆಯ ಅಧಿಕೃತ ಬೋಧಕನಾಗಿದ್ದಾನೆ. ಅವನ ಗ್ರಂಥವಾದ **ಶಾಂಡಿಲ್ಯ ಭಕ್ತಿ ಸೂತ್ರ**ವು ಭಕ್ತಿಸಾಧನೆಯ ಕ್ಷೇತ್ರದಲ್ಲಿ ಅಧಿಕೃತ ಪುಸ್ತಕವೆಂದು ಪ್ರಸಿದ್ಧವಾಗಿದೆ.

ವಲ್ಲಭರ ವಿಸ್ತರಿಸಿದ ಈ ತೀರ್ಥಯಾತ್ರೆಯು ಬಹಳಕಾಲದವರೆಗೆ ನಡೆಯಿತು. ಈ ಅವಧಿಯಲ್ಲಿ ಪ್ರಮುಖ ವಾಗಿ ಅವರು ರಾಮಾನುಜರ ಶ್ರೀವೈಷ್ಣವ ಮತ ಮತ್ತು ಶ್ರೀ ಮಧ್ವರ ದ್ವೈತ ಸಂಪ್ರದಾಯಗಳಿಗೆ ಸೇರಿದ ಧಾರ್ಮಿಕ ಕ್ಷೇತ್ರಗಳಲ್ಲಿ ತಮ್ಮ ಕಾಲವನ್ನು ಕಳೆದರು. ಇದರಿಂದ ವಲ್ಲಭರಿಗೆ ಆ ಸಿದ್ಧಾಂತಗಳ ಸಂತ ಮಹಾತ್ಮರನ್ನು ದರ್ಶಿಸುವ ಮತ್ತು ಅವರ ಸಿದ್ಧಾಂತವನ್ನು ನೇರವಾಗಿ ತಿಳಿದುಕೊಳ್ಳುವ ಅವಕಾಶ ಪ್ರಾಪ್ತವಾಯಿತು. ಇದಲ್ಲದೆ ವಲ್ಲಭರು ಹಲವಾರು ಅದ್ವೈತ ವಿದ್ವಾಂಸರು ಮತ್ತು ಶೈವ ಪಂಥದ ಅನುಯಾಯಿಗಳೊಡನೆ ವಾದ, ವಿವಾದಗಳನ್ನು ಕೂಡ ನಡೆಸಿದರು. ಅವರ ಅಭಿಪ್ರಾಯಗಳನ್ನು ವಲ್ಲಭರು ಒಪ್ಪುತ್ತಿರಲಿಲ್ಲವಾದರೂ, ಎಂದಿಗೂ ತಮ್ಮ ಚರ್ಚೆಗಳು ಹದ್ದುಮೀರಿ ಹೋಗಲು ಅವಕಾಶ ಮಾಡಿಕೊಡುತ್ತಿರಲಿಲ್ಲ.

ಹೀಗೆ ತಮ್ಮ ದಕ್ಷಿಣಭಾರತ ತೀರ್ಥಯಾತ್ರೆಯನ್ನು ಸಂಪನ್ನಗೊಳಿಸಿದ ವಲ್ಲಭರು ವಿಜಯನಗರಕ್ಕೆ ಬಂದು ತಮ್ಮ ತಾಯಿ ಮತ್ತು ಸಹೋದರರನ್ನು ಕೂಡಿಕೊಂಡರು. ವಿಜಯನಗರವೇ ಅವರ ಕುಟುಂಬದ ಹೊಸ ನಿವಾಸಸ್ಥಾನವಾಗಿತ್ತು. ತಮ್ಮ ತಾಯಿಯೊಡನೆ ಕೆಲಕಾಲ ಕಳೆದ ನಂತರ, ಅವರು ತಮ್ಮ ತೀರ್ಥಯಾತ್ರೆಯ ಪರ್ವವನ್ನು ಮುಂದುವರೆಸಿದರು. ಈ ಬಾರಿ ಅವರ ಪಯಣ ಪಶ್ಚಿಮ ಮತ್ತು ಉತ್ತರ ಭಾರತದ ಹಲವಾರು ಪವಿತ್ರ ಕ್ಷೇತ್ರಗಳತ್ತ ಸಾಗಿತು. ಮಹಾರಾಷ್ಟ್ರದ ಕೃಷ್ಣಭಕ್ತಿಯ ಕೇಂದ್ರವಾದ ಪಂಡರಾಪುರ, ನಾಸಿಕ್, ತ್ರ್ಯಂಬಕೇಶ್ವರ, ನರ್ಮದಾ ನದಿಯ ಹಲವಾರು ಪುಣ್ಯಕ್ಷೇತ್ರಗಳು ಮತ್ತು ಮಾಲ್ವಾ ಪ್ರದೇಶಗಳಲ್ಲಿ ಅವರು ಪ್ರವಾಸ ಮಾಡಿದರು. ಒಂದೊಂದು ಕಡೆಯೂ ಹಲವು ದಿನಗಳ ಕಾಲ ವಸತಿಯನ್ನು ಹೂಡಿದರು. ಕಟ್ಟಕಡೆಗೆ ಅವರು ಕೃಷ್ಣ ಜನ್ಮಸ್ಥಾನವಾದ ಮಥುರಾ ನಗರವನ್ನು ತಲುಪಿದರು. ಬಾಲ್ಯದಲ್ಲಿ ಬೃಂದಾವನಕ್ಕೆ ತೆರಳುವ ಮುಂಚೆ ಮತ್ತು ತದನಂತರ, ದ್ವಾರಕೆಗೆ ಸ್ಥಳಾಂತರಗೊಳ್ಳುವ ಮೊದಲು ಕೃಷ್ಣನು ಈ ಮಥುರಾ ನಗರವನ್ನೇ ತನ್ನ ನಿವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದನು.

ಈ ವ್ರಜಭೂಮಿಯು ವಲ್ಲಭರಿಗೆ ವಿಶೇಷವಾಗಿ ಪ್ರಿಯವಾದ ಸ್ಥಾನವಾಗಿತ್ತು. ಶ್ರೀಕೃಷ್ಣನ ಜೀವನಕ್ಕೆ ಸಂಬಂಧಪಟ್ಟ ಪ್ರತಿಯೊಂದು ತಾಣಕ್ಕೆ ಹೋದಾಗಲೂ ಅವರಿಗೆ ಶ್ರೀಕೃಷ್ಣನ ಸಂಸರ್ಗವಾಗುತ್ತಿತ್ತು. ಒಂದು ಐತಿಹ್ಯದಂತೆ, ೧೪೯೨ರಲ್ಲಿ ಈ ಸ್ಥಳದಲ್ಲಿ ತಮ್ಮದೇ ಆದ ಒಂದು ಸಂಪ್ರದಾಯವನ್ನು ಆರಂಭಮಾಡುವಂತೆ ವಲ್ಲಭರಿಗೆ ಭಗವಂತನು ಪ್ರೇರೇಪಣೆ ಮಾಡಿದನಂತೆ. ಈ ಸಂಪ್ರ

ದಾಯವು ‘ಪುಷ್ಟಿಮಾರ್ಗ’ ಅಥವಾ ಭಗವತ್ಕೃಪೆಯ ಮಾರ್ಗ ಎಂದು ಹೆಸರಾಯಿತು. ಈ ಪುಣ್ಯ ವ್ರಜಭೂಮಿಯಲ್ಲಿ ಬಹಳ ಕಾಲದವರೆಗೂ ವಾಸಮಾಡಿದ ನಂತರ, ವಲ್ಲಭರು ಮತ್ತೂ ಉತ್ತರ ದಿಕ್ಕಿಗೆ ಹೊರಟು, ಕುರುಕ್ಷೇತ್ರಕ್ಕೆ ಹೋದರು. ತದನಂತರ, ಹಿಮಾಲಯದ ತೀರ್ಥಕ್ಷೇತ್ರಗಳಾದ ಹರಿದ್ವಾರ, ಋಷೀಕೇಶ, ಗಂಗೋತ್ರಿ ಮತ್ತು ಕೇದಾರಗಳಿಗೆ ಭೇಟಿಕೊಟ್ಟರು. ಹಿಮಾಲಯದ ಯಾತ್ರೆಯನ್ನು ಮುಗಿಸಿ, ಇನ್ನೂ ಪೂರ್ವದಿಕ್ಕಿಗೆ ಪ್ರಯಾಣ ಬೆಳೆಸಿ, ಪ್ರಯಾಗ, ಗಯಾ, ಕಾಶಿ ಮತ್ತು ಗಂಗಾಸಾಗರಗಳ ದರ್ಶನ ಮಾಡಿದರು. ಅಲ್ಲಿಂದ ಅವರು ಜಗನ್ನಾಥ ಪುರೀಧಾಮಕ್ಕೆ ಬಂದರು. ಕಡೆಯದಾಗಿ, ಅಗ್ರಹಾರಕ್ಕೆ ಬಂದರು. ಅಲ್ಲಿ ಅವರ ತಾಯಿ ವಾಸಿಸುತ್ತಿದ್ದರು. ಕಾಲ್ನಡಿಗೆಯಲ್ಲಿಯೇ ಭಾರತದಾದ್ಯಂತ ಒಂಭತ್ತು ವರ್ಷಗಳ ಕಾಲ ಅವರು ಕೈಕೊಂಡ ಮೊದಲ ತೀರ್ಥ ಯಾತ್ರೆಯು ಹೀಗೆ ಸುಸಂಪನ್ನಗೊಂಡಿತು.

ಎರಡನೆಯ ತೀರ್ಥಯಾತ್ರೆ

ವಲ್ಲಭರು ತಮ್ಮ ತಾಯಿಯ ಜೊತೆಗೆ ಒಂದು ವರ್ಷ ಕಾಲ ನೆಲೆಸಿದ್ದರು. ನಂತರ, ತಮ್ಮ ದ್ವಿತೀಯ ತೀರ್ಥಯಾತ್ರೆಯನ್ನು ಆರಂಭಿಸಿದರು. ಮತ್ತೊಮ್ಮೆ ವಿಜಯನಗರಕ್ಕೆ ಭೇಟಿಕೊಟ್ಟರು. ಅನಂತರ ಪಂಡರಾಪುರಕ್ಕೆ ಬಂದರು. ಅಲ್ಲಿ ಶ್ರೀಕೃಷ್ಣನನ್ನು ವಿಠ್ಠಲ ಅಥವಾ ವಿಠೋಬನಾಥ ಎಂಬ ಹೆಸರಿನಿಂದ ಪೂಜಿಸುತ್ತಾರೆ. ಅಲ್ಲದೆ ರುಕ್ಮಿಣಿ ಕೂಡ ಇಲ್ಲಿ ಪೂಜಿಸಲ್ಪಡುತ್ತಾಳೆ. ಪಂಡರಾ ಪುರದಲ್ಲಿನ ವಾಸ್ತವ್ಯವು ಅವರ ಜೀವನದಲ್ಲಿ ಮಹತ್ವದ ಪರಿ ವರ್ತನೆಯನ್ನು ಉಂಟುಮಾಡಿತು. ಇಲ್ಲಿಯೇ ಅವರು ಮದುವೆ ಯಾಗುವಂತೆ ಭಗವಂತನ ಆಣತಿಯನ್ನು ಪಡೆದುಕೊಂಡರು. ಇದುವರೆಗೂ, ವಲ್ಲಭರು ಬ್ರಹ್ಮಚಾರಿಯಾಗಿಯೇ ತೀರ್ಥಯಾತ್ರೆ ಯನ್ನು ಮಾಡುತ್ತಿದ್ದರೇ ಹೊರತು, ಸಂನ್ಯಾಸ ದೀಕ್ಷೆಯನ್ನು ಸ್ವೀಕರಿ ಸಿರಲಿಲ್ಲ. ಮದುವೆಯಾಗಿ ಗೃಹಸ್ಥ ಜೀವನವನ್ನು ನಡೆಸಬೇಕೆಂಬ ಯೋಚನೆ ಅವರಿಗೆ ಇತ್ತೋ ಅಲ್ಲವೋ ಎನ್ನುವುದು ತಿಳಿದು ಬಂದಿಲ್ಲ. ಆದರೆ ಭಗವಂತನ ಈ ಆಜ್ಞೆಯು ಅವರ ಜೀವನದಲ್ಲಿ ಒಂದು ಹೊಸ ತಿರುವನ್ನು ನೀಡಿದ್ದಂತೂ ಸತ್ಯ. ಅದಲ್ಲದೆ, ಅವರು ಆರಂಭಿಸಿದ ಭಕ್ತಿ ಆಂದೋಲನಕ್ಕೆ ಭಗವಂತನ ಪ್ರೇರಣೆಯೂ ಸಿಕ್ಕಿದ ಹಾಗಾಯಿತು. ಗೃಹಸ್ಥ ಜೀವನವು ಭಕ್ತಿತತ್ತ್ವದಲ್ಲಿ ಒಲವುಳ್ಳ ಉಳಿದ ವೇದಾಂತ ಆಚಾರ್ಯರ ನಡುವೆ ಒಂದು ವಿಶಿಷ್ಟ ಸ್ಥಾನ ವನ್ನು ವಲ್ಲಭರಿಗೆ ದೊರಕಿಸಿಕೊಟ್ಟಿತು. ಏಕೆಂದರೆ, ಉಳಿದೆಲ್ಲ ಆಚಾ ರ್ಯರು ಸಂನ್ಯಾಸಿಗಳಾಗಿದ್ದರು, ವಲ್ಲಭರು ಮಾತ್ರವೇ ಗೃಹಸ್ಥರು.

ವಲ್ಲಭರು ಗುಜರಾತ್ ರಾಜ್ಯಕ್ಕೆ ಹೋದರು. ಅನಂತರ ವ್ರಜ ಭೂಮಿಗೆ ಭೇಟಿಕೊಟ್ಟರು. ಇದಾದ ಮೇಲೆ ಬದರೀನಾಥ ಮುಂತಾದ ಹಿಮಾಲಯದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ದರು. ಕೊನೆಗೆ ಅವರು ವಾರಾಣಸಿಗೆ ಬಂದಾಗ ಅವರಿಗೆ ಒಂದು ದೊಡ್ಡ ಆಶ್ಚರ್ಯ ಕಾದಿತ್ತು. ದೇವದತ್ತನೆಂಬ ಬ್ರಾಹ್ಮಣನು ಅವ ರೆಡೆಗೆ ಬಂದನು. ತಮ್ಮ ಮಗಳಾದ ಮಹಾಲಕ್ಷ್ಮಿಯನ್ನು ಮದುವೆ ಯಾಗುವಂತೆ ಕೇಳಿಕೊಂಡನು. ವಲ್ಲಭರ ತಾಯಿಯ ಅನು ಮತಿಯ ಮೇರೆಗೆ ೧೫೦೦ರಲ್ಲಿ ವಿವಾಹ ನಡೆಯಿತು. ಕೆಲ ಕಾಲದ ನಂತರ ಗೋಕುಲನಾಥ ಮತ್ತು ವಿಠ್ಠಲನಾಥ ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಅವರಲ್ಲಿ ವಿಠ್ಠಲನಾಥನು ಅತ್ಯಂತ ಮೇಧಾವಿ ಯಾಗಿದ್ದನು. ತನ್ನ ತಂದೆಯು ಆರಂಭಿಸಿದ್ದ ಧಾರ್ಮಿಕ ಸಂಪ್ರ ದಾಯವನ್ನು ಕ್ರೋಡೀಕರಿಸುವುದರಲ್ಲಿ ಮತ್ತು ಸಶಕ್ತಗೊಳಿಸುವು ದರಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದನು.

೧೫೦೦-೩೨ರವರೆಗಿನ ಅವಧಿಯಲ್ಲಿ ವಲ್ಲಭರು ಗೋಕುಲ ದಲ್ಲಿಯೇ ವಾಸ್ತವ್ಯ ಹೂಡಿದರು. **ಪುಷ್ಟಿಮಾರ್ಗ**ವೆಂಬ ನೂತನ ಧಾರ್ಮಿಕ ಪಂಥವನ್ನು ಹುಟ್ಟುಹಾಕುವಂತೆ ಅವರು ಅಲ್ಲಿಯೇ ಭಗವತ್ಪ್ರೇರಣೆಯನ್ನು ಪಡೆದುಕೊಂಡರು. ಕಲಿಯುಗದಲ್ಲಿ ಮಾನವ ನಿಗೆ ಆಧ್ಯಾತ್ಮಿಕ ಸಾಧನೆಗಳನ್ನು ಮಾಡುವ ಶಕ್ತಿಯು ಇರುವುದಿಲ್ಲ; ಹೀಗಾಗಿ ಭಗವಂತನು ತನ್ನ ಅಪಾರ ಕೃಪೆಯಿಂದ ಉದ್ಧಾರ ಮಾಡದೆಯೇ ಅವನಿಗೆ ಮೋಕ್ಷವನ್ನು ಹೊಂದುವ ಬೇರೆ ಯಾವ ದಾರಿಯೂ ಇರುವುದಿಲ್ಲ. ಆದರೆ ಭಗವಂತನ ಕೃಪೆಗೆ ಪಾತ್ರನಾಗ ಬೇಕಾದರೆ, ಸಾಧಕನು ಭಗವಂತನ ಕೃಪಾವಲಯಕ್ಕೆ ಸೇರಿದವ ನಾಗಬೇಕು. ಅದಕ್ಕಾಗಿ ಭಗವಂತನ ಇಚ್ಛಾಶಕ್ತಿಗೆ ಶರಣಾಗಿ, ಆತನ ಕೃಪೆಗೆ ಯೋಗ್ಯನಾಗಬೇಕು. ಈ ಮಾರ್ಗವನ್ನೇ ಭಗವಂತನು ವಲ್ಲಭರ ಮೂಲಕ ಮಾನವನಿಗೆ ಅನಾವರಣಗೊಳಿಸಿದನು ಎಂದು ಶ್ರದ್ಧಾಳುಗಳು ನಂಬುತ್ತಾರೆ. ತಮ್ಮನ್ನು ಭಗವಂತನು ತನ್ನ ಮುಖವಾಣಿಯನ್ನಾಗಿ ಮಾಡಿಕೊಂಡಿದ್ದಾನೆ ಎಂದು ವಲ್ಲಭರ ಅರಿವಿಗೆ ಬಂದಿತು. ಭಗವಂತ ಮತ್ತು ಮನುಷ್ಯನ ನಡುವೆ ಸ್ಥಾಪಿತವಾಗಿರುವ ಈ ಬಗೆಯ ಸಂಬಂಧಕ್ಕೆ **ಬ್ರಹ್ಮಸಂಬಂಧ** ಎಂಬ ನೂತನ ನಾಮಧೇಯವನ್ನು ವಲ್ಲಭರು ನೀಡಿದರು. ವಲ್ಲಭರು ಹತ್ತುಹಲವು ಮಹಾನ್ ಆಚಾರ್ಯರ ಪ್ರಭಾವಕ್ಕೆ ಒಳಪಟ್ಟಿ ದ್ದೇನೋ ನಿಜವೇ, ಆದರೆ ಅವರಲ್ಲಿ ಯಾರನ್ನೂ ಅವರು ಗುರು ವೆಂದು ಸ್ವೀಕರಿಸಿರಲಿಲ್ಲ. ಹೀಗಾಗಿ ವಲ್ಲಭಾಚಾರ್ಯರ ಸಂಪ್ರ ದಾಯವು ಸಂಪೂರ್ಣವಾಗಿ ಒಂದು ನೂತನ ಪಂಥವೇ ಆಗಿದೆ; ಅವರಿಂದಲೇ ಪ್ರವರ್ತನಗೊಂಡ ಆಧ್ಯಾತ್ಮಿಕ ಪರಂಪರೆಯಾಗಿದೆ. ಇದರ ಹಿನ್ನೆಲೆಯಲ್ಲಿ ಆಗಿನ ಕಾಲದಲ್ಲಿ ಪ್ರಚುರವಾಗಿದ್ದ ವೈಷ್ಣವ ಧರ್ಮ ಮತ್ತು ವೇದಾಂತ ಸಿದ್ಧಾಂತವಿರುವುದೇನೋ ನಿಜವೇ. ಆದರೂ ಈ ಪಂಥಕ್ಕೆ ವಲ್ಲಭರೇ ಸ್ಥಾಪಕರು ಎನ್ನುವುದಂತೂ ನಿರ್ವಿವಾದ. ಇದರ ಮೊದಲ ಅನುಯಾಯಿಯಾಗಿ ಪರಿವರ್ತನೆ ಹೊಂದಿದವನೆಂದರೆ ದಾಮೋದರ ದಾಸ ಎನ್ನುವವನು. ಅವನು ವಲ್ಲಭರೊಡನೆ ಅವರ ಎಲ್ಲ ತೀರ್ಥಯಾತ್ರೆಗಳಲ್ಲಿಯೂ ಸತತ ಸಂಗಾತಿಯಾಗಿದ್ದನು. ‘ಶ್ರೀಕೃಷ್ಣ ಶರಣಂ ಮಮ’ ಎನ್ನುವ ಮಂತ್ರದೊಡನೆ ಅವನ ದೀಕ್ಷೆಯು ನಡೆಯಿತು. ಇತರ ಅರ್ಥ, ‘ಶ್ರೀಕೃಷ್ಣನಲ್ಲಿಯೇ ನಾನು ಶರಣುಹೊಂದಿದ್ದೇನೆ’ ಎಂದು.


(ಮುಂದುವರಿಯುವುದು)

ಭಕ್ತ ಕನಕದಾಸರು – ೨

ಕಥೆ : ಟಿ.ಎಂ. ಸುಂದರರಾಮನ್ **ಚಿತ್ರ: ಶಂಕರ್**

16 ಅಂದು ವ್ಯಾಸರಾಯರು ದೇವರ ಮೂರ್ತಿಯನ್ನು ಪೂಜಿಸಿ, ಮಾನಸಪೂಜೆ ಮಾಡಿದರು. ಅವರು ತಮ್ಮ ಹೃದಯದಲ್ಲಿ ಮಹಾವಿಷ್ಣುವನ್ನು ಆವಾಹನೆ ಮಾಡಿ, ಅವನಿಗೆ ವಜ್ರದ ಕಿರೀಟವನ್ನು ಅರ್ಪಿಸಿದರು. ಅನಂತರ ಅವರು ಹಾರದಿಂದ ದೇವರನ್ನು ಅಲಂಕರಿಸಲು ಪ್ರಯತ್ನಿಸಿದರು. ಆದರೆ ಕಿರೀಟ ದೊಡ್ಡದಾಗಿತ್ತು; ಆದ್ದರಿಂದ ಹಾರವನ್ನು ಹಾಕಲಾಗಲಿಲ್ಲ.

17 ಗುರುಗಳಿಗೆ ಹಾರವನ್ನು ಹಾಕಿ ಸಿಂಗರಿಸುವಲ್ಲಿ ಉಂಟಾದ ತೊಂದರೆ ಕನಕನಿಗೆ ಅರ್ಥವಾಯಿತು.




ಈ ಘಟನೆಯ ನಂತರವೂ ಉಳಿದ ಶಿಷ್ಯಂದಿರಿಗೆ ಕನಕನ ಮೇಲೆ ಪ್ರೀತಿ, ವಿಶ್ವಾಸ, ಗೌರವಗಳು ಉಂಟಾಗಲಿಲ್ಲ.

19 ಕೆಲವು ವರ್ಷಗಳು ಕಳೆದವು. ಕನಕದಾಸನ ಹಿರಿಮೆಯನ್ನು ಇತರರಿಗೂ ಮನವರಿಕೆ ಮಾಡಬೇಕೆಂದು ಗುರುಗಳು ಪ್ರಯತ್ನಪಟ್ಟರು.




18 ಒಂದು ದಿನ ಕೆಲವು ಮಂದಿ ಶಿಷ್ಯಂದಿರು ಒಂದು ಹೆಂಡದ ಮಡಕೆಯಲ್ಲಿ ಮೀನನ್ನು ತುಂಬಿಸಿ, ಕನಕನಿಗೆ ತಿಳಿಯದಂತೆ ಅವನ ಕೈಚೀಲದಲ್ಲಿ ಅಡಗಿಸಿಟ್ಟರು. ಬಳಿಕ ...




ಕೈಚೀಲದಲ್ಲೇನೋ ಮಡಕೆಯಿತ್ತು. ಆದರೆ ಅದರಲ್ಲಿ ಜೇನು ಹಾಗು ತಾವರೆ ಹೂವುಗಳಿದ್ದವು. ಗುರುಗಳು ನಸುನಕ್ಕರು. ಶಿಷ್ಯಂದಿರು ಚಿಂತೆಗೀಡಾದರು.

20 ಮರುದಿನ ವ್ಯಾಸರಾಯರು ಕನಕ, ಶಿಷ್ಯಂದಿರು ಹಾಗೂ, ಊರಿನ ಜನರೊಂದಿಗೆ ಆ ಸ್ಥಳದಲ್ಲಿ ಕಾಯುತ್ತ ಕುಳಿತಿದ್ದರು. ಅಷ್ಟರಲ್ಲಿ ಒಂದು ನಾಯಿ ವೇಗವಾಗಿ ಓಡುತ್ತ ಬಂತು.




ಅಷ್ಟರಲ್ಲಿ ಊರಿನ ಜನರು ಆ ನಾಯಿಯನ್ನು ಓಡಿಸಿಯೇಬಿಟ್ಟಿದ್ದರು.

21




22 ಮರುದಿನವೂ ಊರಿನ ಜನರು ಅನೇಕ ಮಂದಿ ಅಲ್ಲಿಗೆ ಬಂದು ಸೇರಿದರು. ಅಷ್ಟರಲ್ಲಿ ಅಲ್ಲಿಗೊಂದು ಭಯಂಕರ ಹಾವು ಭುಸುಗುಟ್ಟುತ್ತ ಬಂದುಬಿಟ್ಟಿತು.



ದೇವರು ಹಾವಿನ ರೂಪದಲ್ಲಿ ಬಂದಿರುವನೆಂದು ವ್ಯಾಸರಾಯರಿಗೆ ತಿಳಿಯಿತು. ಅವರು ಅದಕ್ಕೆ ಹಾಲನ್ನು ಅರ್ಪಿಸಿದರು.

23 ತಿರುಪತಿಯ ವೆಂಕಟೇಶ್ವರನು ಕನಕದಾಸರ ಕನಸಿನಲ್ಲಿ ಕಾಣಿಸಿಕೊಂಡು, ತನ್ನ ಕಲ್ಯಾಣ ಮಹೋತ್ಸವಕ್ಕೆ ಬರಬೇಕೆಂದು ಆದೇಶಿಸಿದನು. ಅದೇ ರೀತಿ, ತಿರುಪತಿ ದೇವಾಲಯದ ಮಹಂತನಾಗಿದ್ದ ಚಿನ್ನಪ್ಪನೆಂಬವನ ಕನಸಿನಲ್ಲಿಯೂ ಅವನು ಕಾಣಿಸಿಕೊಂಡು, ಕನಕನನ್ನು ಗೌರವಾದರಗಳಿಂದ ಬರಮಾಡಿಕೊಳ್ಳಲು ಆದೇಶಿಸಿದನು.



ಕನಕನಿಗಾಗಿ ಚಿನ್ನಪ್ಪನು ಹಲವು ಕಡೆ ಹುಡುಕಾಡಿನು. ಎಲ್ಲರಲ್ಲೂ ಅವನ ಬಗ್ಗೆ ಕೇಳುತ್ತ ಹೋದ; ಕೊನೆಗೆ ಕನಕನನ್ನೂ ವಿಚಾರಿಸಿದ. ಆದರೆ ಕನಕನು ಒಬ್ಬ ಭಿಕ್ಷುಕನಂತೆ ವರ್ತಿಸುತ್ತ ಇದ್ದುಬಿಟ್ಟ.

24 ಬೇರೆ ಎಲ್ಲಿಗೂ ಹೋಗಲು ಉಪಾಯವಿಲ್ಲದೆ, ಚಿನ್ನಪ್ಪನು ದೇವಾಲಯಕ್ಕೆ ಮರಳಿ ಬಂದ. ಕನಕದಾಸರು ತಿರುಪತಿ ದೇವಾಲಯದ ಒಂದು ಮೂಲೆಯಲ್ಲಿ ಹಸಿವು. ಬಾಯಾರಿಕೆಗಳಿಂದ ಕಂಗೆಟ್ಟು ಮಲಗಿದ್ದರು.




ಅಷ್ಟರಲ್ಲಿ ಅಲ್ಲಿಗೆ ಒಬ್ಬಾತ ಪರಿಚಾರಕನು ಬಂದು ಅವನಿಗೆ ಊಟ, ಬಟ್ಟೆಬರೆಗಳನ್ನು ತಂದುಕೊಟ್ಟನು.

25 ಕನಕದಾಸರು ಭಗವಂತನ ದಿವ್ಯ ಕಲ್ಯಾಣ ಮಹೋತ್ಸವವನ್ನು ಕಣ್ತುಂಬಾ ನೋಡಿಕೊಂಡರು. ತಮ್ಮ ಕೀರ್ತನೆಗಳಿಂದ ಅವರು ಜನರ ಮುಂದೆ ಭಗವಂತನ ಗುಣಗಾನ ಮಾಡಿದರು. ಈಗ ಚಿನ್ನಪ್ಪನಿಗೆ ಇವರೇ ಕನಕದಾಸರೆಂದು ತಿಳಿದುಬಂತು.



26 ಕನಕದಸರು ಅಲ್ಲಿ ಕೆಲವು ದಿನಗಳನ್ನು ಕಳೆದರು. ...



27 ಭಕ್ತರು ಭಯಪಟ್ಟಿದ್ದಂತೆ, ಕಾಡಿನಲ್ಲಿ ಆ ಮದ್ದಾನೆ ಕನಕದಾಸರ ಮುಂದೆ ಕಾಣಿಸಿಕೊಂಡಿತು.




ಕೂಡಲೇ ಆ ಮದ್ದಾನೆ ಕನಕದಾಸರ ಮುಂದೆ ಬಾಗಿ ನಮಸ್ಕರಿಸಿತು. ಅವರನ್ನು ಸೊಂಡಿಲಲ್ಲಿ ಎತ್ತಿ, ನಂಜನಗೂಡನ್ನು ತಲುಪಿ, ದೇಗುಲದ ಮುಂದೆ ಇರಿಸಿತು. ಇದನ್ನು ನೋಡಿದ ಜನರೆಲ್ಲರೂ ಆನಂದತುಂದಿಲರಾದರು. ಮುಂದೆ ಅದು ಆ ದೇವಾಲಯದಲ್ಲಿ ಸೇವೆ ಸಲ್ಲಿಸತೊಡಗಿತು.



ವೈಷ್ಣವ ಗ್ರಂಥಗಳಲ್ಲಿ ಬರೆದಿದೆ, ''ಶ್ರದ್ಧೆಯಿಂದ ಮಾತ್ರವೇ ಭಗವಂತನನ್ನು ಪಡೆಯಬಹುದು. ವಿಚಾರ ದೇವರನ್ನು ದೂರ ಕೊಂಡೊಯ್ಯುತ್ತದೆ'' ಅಂತ. ಆದ್ದರಿಂದ ಶ್ರದ್ಧೆಯೊಂದೇ ಇರಬೇಕಾದ ವಸ್ತು.

— ಶ್ರೀರಾಮಕೃಷ್ಣರು



ರಾಮಕೃಷ್ಣ ಮಿಷನ್ನಿನ ಪರಿಹಾರ ಕಾರ್ಯಗಳು (ಮೇ ೧ರ ವರೆಗೆ)

ರಾಮಕೃಷ್ಣ ಮಿಷನ್ನಿನ ವಿವಿಧ ಶಾಖಾಕೇಂದ್ರಗಳ ಮೂಲಕ ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ಆವಶ್ಯಕತೆಗನುಗುಣವಾಗಿ ಪರಿಹಾರ ಕಾರ್ಯಗಳನ್ನು ಕಾಲಕಾಲಕ್ಕೆ ನಡೆಸಲಾಗುತ್ತದೆ. ಕಳೆದ ಮೇ ೧ರ ವರೆಗಿನ ಕಾರ್ಯಗಳ ಒಂದು ಪಕ್ಷಿನೋಟ ಇಲ್ಲಿದೆ:



ಆಲೋ (ಅರುಣಾಚಲ ಪ್ರದೇಶ)



ಚಿತ್ತಗಾಂಗ್ (ಬಾಂಗ್ಲಾದೇಶ)



ನಟ್ಟರಾಂಪಳ್ಳಿ (ತಮಿಳುನಾಡು)



ರಹರಾ (ಪಶ್ಚಿಮ ಬಂಗಾಳ)



ರಾಂಚಿ (ಜಾರ್ಖಂಡ್)

1. ನೆರೆ ಪರಿಹಾರ ಕಾರ್ಯ: ಫಿಜಿ: ಏಪ್ರಿಲ್ ೧ರಂದು ಉಂಟಾದ ಚಂಡಮಾರುತದ ಪರಿಣಾಮವಾಗಿ ಧಾರಾಕಾರ ಮಳೆ ಸುರಿದು, ನದಿ ಹಾಗೂ ಸುತ್ತಮುತ್ತಲಿನ ತಗ್ಗು ಪ್ರದೇಶಗಳಲ್ಲಿ ನೆರೆಯುಂಟಾಗಿದೆ. ಈ ಪ್ರದೇಶಗಳಲ್ಲಿ **ಫಿಜಿ** ಶಾಖಾಕೇಂದ್ರವು ನಡೆಸಿದ ಪ್ರಾಥಮಿಕ ಪರಿಹಾರ ಕಾರ್ಯದ ಅಂಗವಾಗಿ ೨೯೧೨ ಕಿಲೋ ಅಕ್ಕಿ, ೧೯೬೦ ಕಿಲೋ ಗೋಧಿ, ೧೬೮೫ ಕಿಲೋ ಬೇಳೆ, ೨೭೪ ಲೀ. ಅಡುಗೆ ತೈಲ, ೮೪೬ ಕಿಲೋ ಸಕ್ಕರೆ, ೫೪೮ ಕಿಲೀ ಉಪ್ಪು, ೫೫ ಕಿಲೋ ಚಹಾಪುಡಿ, ೩೦ ಕಿಲೋ ಅರಶಿನ ಪುಡಿ, ೧೯೮೯ ಬಿಸ್ಕಟ್ ಪ್ಯಾಕ್, ೧೦೦೦ ಟೀ ಶರ್ಟ್, ೨೫೦ ಟಾಪ್(ಮೇಲುಡುಗೆ), ೫೦೦ ಚಡ್ಡಿ ೨೯ ಕಿಲೋ ಪಾತ್ರೆ ತೊಳೆಯುವ ಪುಡಿ ೨೫೦ ಸ್ನಾನದ ಹಾಗೂ ಬಟ್ಟೆ ತೊಳೆಯುವ ಸಾಬೂನು, ೨೫೦ ಸೊಳ್ಳೆನಿವಾರಕ ಕಾಯಿಲ್ ಇತ್ಯಾದಿಗಳನ್ನು ವಿತರಣೆ ಮಾಡಲಾಯಿತು. ಏಪ್ರಿಲ್ ೨ರಿಂದ ೧೯ರ ವರೆಗೆ ನಡೆದ ಈ ಕಾರ್ಯದಲ್ಲಿ ನೆರೆ ಹಾವಳಿಗೆ ಒಳಗಾದ ೬೬೩ ಕುಟುಂಬಗಳಿಗೆ ಮೂಲ ಆವಶ್ಯಕ ಸಾಮಗ್ರಿಗಳನ್ನು ಹಂಚಲಾಯಿತು. ಇದಲ್ಲದೆ ೨೫೦ ಸಂತ್ರಸ್ತರಿಗೆ ವೈದ್ಯಕೀಯ ನೆರವು ಒದಗಿಸಲಾಯಿತು.

2. ಸಂತ್ರಸ್ತ ಪರಿಹಾರ ಕಾರ್ಯ: ವಿವಿಧ ಶಾಖಾ ಕೇಂದ್ರಗಳು ಆವಶ್ಯಕತೆಯಿರುವ ಪ್ರದೇಶಗಳಲ್ಲಿ ವಿವಿಧ ವರ್ಗದ ಜನರಿಗೆ ಹಲವು ಬಗೆಯ ಆವಶ್ಯಕ ಸಾಮಗ್ರಿಗಳನ್ನು ವಿತರಿಸುವ ಕಾರ್ಯ ನಡೆಸಿದವು. ಆಯಾ ಶಾಖಾಕೇಂದ್ರಗಳ ಹಾಗೂ ಅವುಗಳು ವಿತರಿಸಿದ ಸಾಮಗ್ರಿಗಳು ಹೀಗಿವೆ:

೧. **ಆಲೋ:** ೧೭೪ ಶರ್ಟ್, ೧೩೩ ಟಿ ಶರ್ಟ್, ೫೮೭ ಚಡ್ಡಿ, ೧೭೬ ಮೇಲುಡುಗೆ, ೧೭೦ ಬೆಲ್ಟ್ (ಜನವರಿ ೧೦ರಿಂದ ಏಪ್ರಿಲ್ ೧೯). ೨. **ಅಸನ್‌ಸೋಲ್:** ೧೫೦ ಸೀರೆ, ೨೯೨ ಶರ್ಟ್, ೫೫೯ ಚಡ್ಡಿ, ೨೯೫ ಟಿ-ಶರ್ಟ್ (ಮಾರ್ಚ್ ೧೦ರಿಂದ ೨೬). ೩. **ಬಾಗ್ದಾ:** ೫೦ ಧೋತಿ, ೫೬ ಸೀರೆ, ೧೫ ಸಲ್ವಾರ್ ಕಮೀಜ್, ೫೦ ಶರ್ಟ್, ೨೦ ಮಕ್ಕಳ ಬಟ್ಟೆಬರೆ ಸೆಟ್ (ಏಪ್ರಿಲ್ ೮ ರಿಂದ ೧೨). ೪. **ಬಾಗ್ ಬಜಾರ್:** ೧೦೨ ಶರ್ಟ್, ೧೦೫೪ ಚಡ್ಡಿ, ೧೬೧೫ ಬೆಲ್ಟ್ (ಏಪ್ರಿಲ್ ೧). ೫. **ವರ್ಧಮಾನ್:** ೫೦೦ ಧೋತಿ, ೫೦೦ ಸೀರೆ, ೨೫೦ ಶಾಲಾ ಬ್ಯಾಗ್ (ಫೆಬ್ರವರಿ ೧೩ರಿಂದ ಮಾರ್ಚ್ ೩೧). ೬. **ಬರಿಶಾ** ೧೦೦ ಧೋತ್ರಿ ೩೫ ಸೀರೆ, ೫೮ ಶರ್ಟ್(ಮಾರ್ಚ್ ೩ ರಿಂದ ೩೧). ೭. **ಭುವನೇಶ್ವರ:** ೧೨೨೯ ಶರ್ಟ್, ೫೯೭ ಚಡ್ಡಿ (ಮಾರ್ಚ್ ೧ ರಿಂದ ೩೦). ೮. **ಚಂಡೀಪುರ:** ೪೩ ಸೀರೆ (ಮಾರ್ಚ್ ೨೪). ೯. **ಗೋಲ್ ಪಾರ್ಕ್:** ೧೯ ಶಾಲಾ ಬ್ಯಾಗ್ (ಏಪ್ರಿಲ್ ೪ ರಿಂದ ೭). ೧೦. **ಹಾತಿಮುನಿಗುಡ:** ೧೪೫ ಲೆಗ್ಗಿಂಗ್ಸ್ , ೧೪೫ ಮೇಲುಡುಗೆ, ೩೪೭ ಶರ್ಟ್ ಹಾಗೂ ೩೪೭ ಚಡ್ಡಿ. ೧೧. **ಜಲಪ್ಯಾಗುರಿ:** ೨೯೫೬ ಲೆಗ್ಗಿಂಗ್ಸ್ /ಚಡ್ಡಿ, ೩೦೬೮ ಮೇಲುಡುಗೆ, ೩೨೨೨ ಶರ್ಟ್, ೧೭ ಟಿ- ಶರ್ಟ್, ೩೧೪೬ ಚಡ್ಡಿ, ೧೯೯೮ ಬೆಲ್ಟ್, ೪೮೯೭ ಶೂಗಳು, ೨೬೨೪ ಬೆಲ್ಟ್‌ಗಳು (ಮಾರ್ಚ್ ೧೭ ರಿಂದ ೩೧). ೧೨. **ನಟರಾಂಪಳ್ಳಿ:** ೮೦ ಮಹಿಳೆಯರ ಬಟ್ಟೆಬರೆ, ೬೯೦ ಶರ್ಟ್ ಹಾಗೂ ೧೦೬೫ ಚಡ್ಡಿ. ೧೩.**ರಹರಾ:** ೧೫೯ ಶರ್ಟ್, ೩೫ ಟಿ-ಶರ್ಟ್, ೧೨೪ ಚಡ್ಡಿ ಹಾಗೂ ೨೫೮ ಮೇಲುಡುಗೆ (ಏಪ್ರಿಲ್ ೬ ರಿಂದ ೨೨). ೧೪. **ರಾಜ್‌ಘಾಟ್:** ೯೭೦ ಶರ್ಟ್, ೫೮೮ ಟಿ-ಶರ್ಟ್, ೧೮೦೬ ಚಡ್ಡಿ (ಸೆಪ್ಟೆಂಬರ್ ೧೯ ರಿಂದ ಮಾರ್ಚ್ ೬). ೧೫. **ಶ್ಯಾಮಲಾತಾಲ್:** ೪೭೦ ಲೆಗ್ಗಿಂಗ್ಸ್/ಚಡ್ಡಿ, ೮೮೬ ಶರ್ಟ್/ಮೇಲುಡುಗೆ, ೩೭೫ ಮಹಿಳೆಯರ ಬಟ್ಟೆಬರೆ, ೯೪೨ ಶರ್ಟ್, ೯೪೨ ಚಡ್ಡಿ, ೬೫೦ ಬೆಲ್ಟ್, ೩೨ ವ್ಯಾಲೆಟ್ (ನವೆಂಬರ್ ೭ ರಿಂದ ಮಾರ್ಚ್ ೨೫). ೧೬. **ಟಾಕಿ:** ೧೯ ಶಾಲಾ ಬ್ಯಾಗುಗಳು (ಏಪ್ರಿಲ್ ೧೧). ೧೭. **ಬಾಂಗ್ಲಾದೇಶ: ಚಿಟ್ಟಗಾಂಗ್** ಕೇಂದ್ರವು ಮಾರ್ಚ್ ೩೧ ರಂದು ೧೦೦೦೦ ಕಿಲೋ ಅಕ್ಕಿ, ೧೦೦ ಕಿಲೋ ಬೇಳೆ, ೧೦೦ ಲೀ. ಅಡುಗೆ ತೈಲ ಹಾಗೂ ೧೦೦ ಕಿಲೋ ಉಪ್ಪು ಇವನ್ನು ವಿತರಿಸಿತು.

3. ಚಳಿಗಾಲದ ಪರಿಹಾರ ಕಾರ್ಯ: ಈ ಕೆಳಗಿನ ಶಾಖಾಕೇಂದ್ರಗಳು ಅಗತ್ಯವಿರುವ ಜನರಿಗೆ ಚಳಿಗಾಲಕ್ಕೆ ಅಗತ್ಯವಾದ ಕಂಬಳಿ ಮುಂತಾದ ಬಟ್ಟೆ ಬರೆಗಳನ್ನು ವಿತರಿಸಿದವು: ೧. **ಆಲೋ:** ೧೮೦ ಕಂಬಳಿ, ೫೭೭ ಜಾಕೆಟ್, ೧೩೫ ಸ್ವೆಟರ್ (ಜವನವರಿ ೧೦ ರಿಂದ ಏಪ್ರಿಲ್ ೧೯). ೨. **ಅಸನ್ ಸೋಲ್:** ೪೭೭ ಸ್ವೆಟರ್ (ಮಾರ್ಚ್ ೧೦ ರಿಂದ ೨೬). ೩. **ಭುವನೇಶ್ವರ:** ೪೯೨ ಸ್ವೆಟರ್ (ಮಾರ್ಚ್ ೧ ರಿಂದ ೩೦). ೪. **ಹಾತಿಮುನಿಗುಡ:** ೪೯೨ ಸ್ವೆಟರ್ (ಮಾರ್ಚ್ ೩೧ ರಿಂದ ಏಪ್ರಿಲ್ ೨೬). ೫. **ಜಲಪ್ಯಾಗುರಿ:** ೩೩೭೨ ಬ್ಲೇಜರ್ಸ್, ೨೫೯೧ ಜಾಕೆಟ್ ಹಾಗೂ ೩೬೩೫ ಸ್ವೆಟರ್‌ಗಳು (ಮಾರ್ಚ್ ೧೭ ರಿಂದ ೩೧). ೬. **ರಹರಾ:** ೫ ಜಾಕೆಟ್, ೪೪೩ ಸ್ವೆಟರ್, ೩೯೬ ಸ್ವೆಟ್ ಶರ್ಟ್ (ಏಪ್ರಿಲ್ ೬ ರಿಂದ ೨೨). ೭. **ರಾಜ್‌ಕೋಟ್:** ೧೯೬ ಜಾಕೆಟ್, ೫೨೬೦ ಸ್ವೆಟರ್, ೫೪೦೪ ಸ್ವೆಟ್ ಶರ್ಟ್ (ಜನವರಿ ೧೯ ರಿಂದ ಮಾರ್ಚ್ ೬). ೮. **ಶ್ಯಾಮಲಾತಾಲ್:** ೩೭೬ ಕಂಬಳಿ, ೧೫೭೬ ಜಾಕೆಟ್, ೧೬೩೧ ಸ್ವೆಟರ್, ೯೦ ಸ್ವೆಟ್‌ಶರ್ಟ್ (ನವೆಂಬರ್ ೭ ರಿಂದ ಮಾರ್ಚ್ ೨೫).

4. ಆರ್ಥಿಕ ನೆರವು: ಚಂಡೀಪುರ್ ಕೇಂದ್ರವು ೨ ಹೊಲಿಗೆ ಯಂತ್ರವನ್ನು ಮಾರ್ಚ್ ೨೪ ರಂದು ವಿತರಿಸಿತು. **ಟಾಕಿ** ಕೇಂದ್ರವು ೧೨ ರಿಕ್ಷಾಗಾಡಿ (ವಸ್ತು ಸಾಗಣೆಗಾಗಿ)ಗಳನ್ನು ವಿತರಿಸಿತು.

Managing Editor : Swami Atmajnananda　　Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

ಆರ್ಕಿಡ್ ಟ್ರಾವೆಲ್ & ಟೂರ್ಸ್

Orchid
Travel & Tours

ರಿಯಾಯಿತಿ ದರದಲ್ಲಿ ವಿದೇಶಿ ಪ್ರವಾಸ-2018






8 ದಿನಗಳ ಶ್ರೀ ಮುಕ್ತಿನಾಥ ಯಾತ್ರೆ (ಸಾಲಿಗ್ರಾಮಂ) ಬೆಂಗಳೂರಿನಿಂದ ವಿಮಾನದಲ್ಲಿ

ಪ್ರವಾಸ ಸ್ಥಳಗಳು : ಶ್ರೀ ಮುಕ್ತಿನಾಥ ದೇವಸ್ಥಾನ, ಪಶುಪತಿನಾಥ ದೇವಸ್ಥಾನ, ಜಲನಾರಾಯಣ ದೇವಸ್ಥಾನ, ಶ್ರೀ ಕೃಷ್ಣ ದೇವಸ್ಥಾನ, ಕಠ್ಮಂಡು ಸಿಟಿ ಟೂರ್, ಪೋಕ್ರಾ-ಬಿಂದಾಬಾಸಿನಿ ದೇವಸ್ಥಾನ, ತಾಲಭೈರವಿ ದೇವಸ್ಥಾನ, ದೋಣಿಯಲ್ಲಿ ಪೋಕ್ರಾ ಲೇಕ್ ಒಂದು ವಿಹಾರ, ಮನೋಕಾಮನ ದೇವಸ್ಥಾನ (ಕೇಬಲ್ ಕಾರ್‌ನಲ್ಲಿ)

10 ದಿನಗಳ ಸಿಂಗಾಪುರ-ಮಲೇಶಿಯ-ಥೈಲ್ಯಾಂಡ್ ಪ್ರವಾಸ

ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್ ಜೊತೆಗೆ ಸಿ ಅಕ್ವೇರಿಯಂ, ವಿಂಗ್ಸ್ ಆಫ್ ಟೈಮ್,
ಜುರೋಂಗ್ ಬರ್ಡ್‌ಪಾರ್ಕ್, ಯುನಿವರ್ಸಲ್ ಸ್ಟುಡಿಯೋ,
ಮಲೇಶಿಯ : ಕೌಲಾಲಂಪುರ್ ಸಿಟಿ ಟೂರ್, ಬಾಟು ಗುಹೆ, ಪುತ್ರಜಯ, ಜಂಟಿಂಗ್ ಹೈಲ್ಯಾಂಡ್, ಕೆ.ಎಲ್. ಟವರ್
ಥೈಲ್ಯಾಂಡ್ - ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್

18 ಮತ್ತು 13 ದಿನಗಳ ಅಮೇರಿಕಾ ಪ್ರವಾಸ

ಪ್ರವಾಸ ಸ್ಥಳ : ನ್ಯೂಯಾರ್ಕ್, ವಾಷಿಂಗ್ಟನ್, ನಯಾಗರ ಫಾಲ್ಸ್, ಲಾಸ್‌ವೆಗಾಸ್, ಲಾಸ್ ಎಂಜಲೀಸ್, ಸ್ಯಾನ್‌ಫ್ರಾನ್ಸಿಸ್‌ಕೋ

15 ಮತ್ತು 18 ದಿನಗಳ ಗ್ರ್ಯಾಂಡ್ ಯು.ಕೆ.-ಯುರೋಪ್ ಪ್ರವಾಸ

ಯು.ಕೆ. ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್, ಆಸ್ಟ್ರೀಯಾ, ಲಿಚೆನ್‌ಟೆನ್‌ಸ್ಟೈನ್, ಇಟಲಿ, ವ್ಯಾಟಿಕನ್

8 ದಿನಗಳ ಕಾಂಬೋಡಿಯ - ಥೈಲ್ಯಾಂಡ್ ಪ್ರವಾಸ

ಕಾಂಬೋಡಿಯ - ಸಿಯಾಮ್‌ರಿಪ್, ಅಂಕೋರ್‌ವಾಟ್, ತೋಂನ್ಲೇ ಸ್ಯಾಪ್ ಸರೋವರ, ತಾಪ್ರಾಮ್, ಬಯಾನ್, ಬಪೂನ್ ದೇವಾಲಯಗಳು,
ಥೈಲ್ಯಾಂಡ್ - ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್

10 ದಿನಗಳ ಚೈನಾ, ಹಾಂಕಾಂಗ್, ಮಕಾವ್ ಪ್ರವಾಸ

ಆಕ್ರೋಬೆಟಿಕ್ ಶೋ, ಓಷನ್ ಪಾರ್ಕ್, ಬೀಜಿಂಗ್ ನಗರ ವೀಕ್ಷಣೆ, ಶಾಂಘೈ ನಗರ ವೀಕ್ಷಣೆ, ಏಳು ಅದ್ಭುತಗಳಲ್ಲಿ ಒಂದಾದ ಚೀನಾ ಮಹಾಗೋಡೆ (Great Wall of China) ಸಮ್ಮರ್ ಪ್ಯಾಲೇಸ್, ಹಾಂಕಾಂಗ್ ಮ್ಯೂಸಿಯಂ ಮತ್ತು ಮಕಾವ್ ಹಾಗೂ ಇತರೆ.

ಕೈಲಾಸ ಮಾನಸ ಸರೋವರ ಯಾತ್ರೆ - ವಿವರಗಳಿಗೆ ಸಂಪರ್ಕಿಸಿ - 9900080793


ಪ್ರಧಾನ ಕಛೇರಿ : ಬಸವನಗುಡಿ
ಫೋನ್: 080-26670646, 26621983
ಮೊಬೈಲ್ : 9900080793, 9900080794

ಶಾಖಾ ಕಛೇರಿ : ಮಲ್ಲೇಶ್ವರಂ
ಫೋನ್: 080-23445559
ಮೊಬೈಲ್ : 9900080799, 9900080792

www.orchidtours.net

VIVEKA PRABHA (KANNADA MONTHLY)
June 2018, Vol.18, No.06, No.of pages : 44

Registered With Registrar of News Papers Of India
under 72356/2000.postal Regn.No.KA/SK/MYS/480/
2018-20. LICENCED TO POST W.P.P.AT YADAVAGIRI
MYSORE 570 020,VIDE LICENCE NO.SK/WPP/MYS/155/2018-20



Printed at mayur graphics,Bangalore